# ಶಿವಛತ್ರಪತಿ

## ನಾಲ್ಕನೆಯ ಇಯತ್ತೆ

(ಪರಿಸರ ಅಭ್ಯಾಸ - ಭಾಗ ೨)



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಶಿಕ್ಷಣಖಾತೆಯ ಮಂಜೂರಿ ಕ್ರಮಾಂಕ
ಪ್ರಾಶಿಸಂ/೨೦೧೪-೧೫/೨೧೦೨/ಮಂಜೂರಿ/ಡ - ೫೦೫/೭೫೫ ದಿನಾಂಕ ೪.೨.೨೦೧೪

# ಶಿವಛತ್ರಪತಿ

## (ಪರಿಸರ ಅಭ್ಯಾಸ - ಭಾಗ ೨)

## ನಾಲ್ಕನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ : ೨೦೧೪
ಸುಧಾರಿತ ಆವೃತ್ತಿ: ಸೆಪ್ಟೆಂಬರ್ ೨೦೧೬
ಪುನರ್ಮುದ್ರಣ: ಸೆಪ್ಟೆಂಬರ್ ೨೦೨೧

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ ೪೧೧೦೦೪.

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಇತಿಹಾಸ ವಿಷಯ ಸಮಿತಿ:**
ಡಾ. ಆ.ಹ. ಸಾಳುಂಖೆ, ಅಧ್ಯಕ್ಷ
ಡಾ. ಸೋಮನಾಥ ರೋಡೆ, ಸದಸ್ಯ
ಡಾ. ನೀರಜ ಸಾಳುಂಖೆ, ಸದಸ್ಯ
ಶ್ರೀ. ಬಾಪುಸಾಹೇಬ ಶಿಂಧೆ, ಸದಸ್ಯ
ಶ್ರೀ. ಮೊಗಲ ಜಾಧವ, ಸದಸ್ಯ-ಸಚಿವ

**ಸಂಯೋಜನ ಪ್ರಮುಖ :**
ಡಾ. ಸದಾನಂದ ಎಂ. ಬಿಳ್ಳೂರ, ವಿಶೇಷಾಧಿಕಾರಿಗಳು, ಕನ್ನಡ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-೪
**ವಿಷಯ ಸಹಾಯಕ :**
ಶ್ರೀ. ಆರ್.ಎಂ. ಗಣಾಚಾರಿ
**ಭಾಷಾಂತರ :** ಶ್ರೀ. ಎನ್.ಎಮ್. ಕುಲಕರ್ಣಿ
**ಸಮೀಕ್ಷೆ :** ಶ್ರೀ. ಆರ್.ಎಸ್. ಪಾಟೀಲ

**ಚಿತ್ರಗಳು ಮತ್ತು ಅಲಂಕಾರ :**
ಪ್ರಾ. ದಿಲೀಪ ಕದಮ

**ಛಾಯಾ ಚಿತ್ರಗಳು :**
ಶ್ರೀ. ಪ್ರವೀಣ ಭೋಸಲೆ

**ನಕಾಶೆಕಾರರು :**
ಶ್ರೀ. ರವಿಕಿರಣ ಜಾಧವ
ಡಾ. ನೀರಜ ಸಾಳುಂಖೆ

**ನಿರ್ಮಿತಿ :**
ಶ್ರೀ. ಸಚ್ಚಿತಾನಂದ ಆಫಳೆ, ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ಪ್ರಭಾಕರ ಪರಬ, ನಿರ್ಮಿತಿ ಅಧಿಕಾರಿ
ಶ್ರೀ. ಶಶಾಂಕ ಕಣಿಕದಳೆ, ನಿರ್ಮಿತಿ ಸಹಾಯಕ

**ಅಕ್ಷರ ಜೋಡಣೆ :**
ಕ್ವಿಂಟೆಕ್ಸ್, ಫೋರ್ಟ್, ಮುಂಬಯಿ

**ಕಾಗದ :** ೭೦ ಜಿ.ಎಸ್.ಎಮ್. ಮ್ಯಾಪಲಿಥೋ

**ಮುದ್ರಣಾದೇಶ :** N/PB/2022-23/Qty.- 3,000

**ಮುದ್ರಕ :** M/s. Sharp Industries, Raigad

**ಪ್ರಕಾಶಕ :**
ಶ್ರೀ. ವಿವೇಕ ಉತ್ತಮ ಗೋಸಾವಿ,
ನಿಯಂತ್ರಕ, ಪಾಠ್ಯಪುಸ್ತಕ ನಿರ್ಮಿತಿ ಮಂಡಳ,
ಪ್ರಭಾದೇವಿ, ಮುಂಬಯಿ-೨೫.

## ಪ್ರಸ್ತಾವನೆ

'ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಅಧಿಕಾರ ಅಧಿನಿಯಮ-೨೦೦೯' ಮತ್ತು 'ರಾಷ್ಟ್ರೀಯ ಶೈಕ್ಷಣಿಕ ರೂಪರೇಷೆ-೨೦೦೫'ರ ಅನುಸಾರ ಮಹಾರಾಷ್ಟ್ರ ರಾಜ್ಯದಲ್ಲಿ ಶಾಲೆಯ ಅಭ್ಯಾಸಕ್ರಮವನ್ನು ಸಿದ್ಧಪಡಿಸಲಾಯಿತು. ಈ ಅಭ್ಯಾಸಕ್ರಮವು ೨೦೧೩-೨೦೧೪ರ ಶೈಕ್ಷಣಿಕ ವರ್ಷದಿಂದ ಜಾರಿಯಾಗಿದೆ. ಅಭ್ಯಾಸಕ್ರಮದಲ್ಲಿ ಮೂರನೆಯ ಇಯತ್ತೆಯಿಂದ ಐದನೆಯ ಇಯತ್ತೆಯ ವರೆಗೆ ಸಾಮಾನ್ಯ ವಿಜ್ಞಾನ, ನಾಗರಿಕಶಾಸ್ತ್ರ ಮತ್ತು ಭೂಗೋಲ ವಿಷಯಗಳು ಒಟ್ಟುಗೂಡಿ ಪರಿಸರ ಅಭ್ಯಾಸ ಭಾಗ-೧ರಲ್ಲಿ ಸಮಾವೇಶಗೊಂಡಿರುತ್ತವೆ. ಇತಿಹಾಸ ವಿಷಯವು ಪರಿಸರ ಅಭ್ಯಾಸ ಭಾಗ-೨ರಲ್ಲಿ ಸ್ವತಂತ್ರವಾಗಿರುವುದು ಎಂದು ನಮೂದಿಸಲಾಗಿದೆ.

ಸರಕಾರದಿಂದ ಮಾನ್ಯತೆ ಪಡೆದ ಅಭ್ಯಾಸಕ್ರಮದ ಅನುಸಾರವಾಗಿ ಪಾಠ್ಯಪುಸ್ತಕ ಮಂಡಳವು ನಾಲ್ಕನೆಯ ಇಯತ್ತೆಯ ಪ್ರಸ್ತುತ ಪಠ್ಯಪುಸ್ತಕವನ್ನು ಸಿದ್ಧಪಡಿಸಿದೆ.

ಅಧ್ಯಯನ-ಅಧ್ಯಾಪನ ಪ್ರಕ್ರಿಯೆಯು ವಿದ್ಯಾರ್ಥಿ ಕೇಂದ್ರಿತವಾಗಿರಬೇಕು. ಸ್ವಯಂ ಅಧ್ಯಯನಕ್ಕೆ ಮಹತ್ವಕೊಡಬೇಕು, ಪ್ರಾಥಮಿಕ ಶಿಕ್ಷಣದ ಕೊನೆಗೆ ವಿದ್ಯಾರ್ಥಿಗಳು ನಿರ್ದಿಷ್ಟ ಕ್ಷಮತೆಗಳನ್ನು ಪಡೆಯಬೇಕು, ಅಧ್ಯಯನ ಅಧ್ಯಾಪನ ಪ್ರಕ್ರಿಯೆಯು ಆನಂದದಾಯಿಯಾಗಬೇಕು ಎಂಬ ವ್ಯಾಪಕವಾದ ದೃಷ್ಟಿಕೋನವನ್ನು ಮುಂದಿಟ್ಟುಕೊಂಡು ಈ ಪುಸ್ತಕವನ್ನು ತಯಾರಿಸಲಾಗಿದೆ.

ಪ್ರಸ್ತುತ ಪಠ್ಯಪುಸ್ತಕದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರೇರಣಾದಾಯಕ ಇತಿಹಾಸವನ್ನು ಸುಲಭ ಹಾಗೂ ಪರಿಣಾಮಕಾರಿಯಾದ ಶೈಲಿಯ ಕಥಾರೂಪದಲ್ಲಿ ವಿದ್ಯಾರ್ಥಿಗಳೆದುರಿಗಿಡುವ ಪ್ರಯತ್ನ ಮಾಡಲಾಗಿದೆ. ಶಿವಾಜಿ ಮಹಾರಾಜರ ಚರಿತ್ರೆ ಹಾಗೂ ಸಾಧನೆಯ ಘಟನೆಗಳು ಸಂಪೂರ್ಣ ಮಹಾರಾಷ್ಟ್ರಕ್ಕೆ ಹಾಗೂ ದೇಶಕ್ಕೆ ಪ್ರೇರಣಾದಾಯಕವಾಗಿವೆ ಎಂದು ಮನ್ನಿಸಲಾಗುತ್ತದೆ. ಪಠ್ಯಪುಸ್ತಕದಲ್ಲಿ ಶಿವಾಜಿ ಮಹಾರಾಜರ ವ್ಯಕ್ತಿತ್ವದಲ್ಲಿಯ ವಿವಿಧ ಸ್ಫೂರ್ತಿದಾಯಕ ಘಟನೆಗಳನ್ನು ಕೊಡಲಾಗಿದೆ. ಈ ಪಠ್ಯಪುಸ್ತಕಕ್ಕೆ ಸಂಬಂಧಿಸಿದಂತೆ ವಿವಿಧ ಸಾಮಾಜಿಕ ಸಂಘಟನೆಗಳು ಮತ್ತು ಸಂಘ ಸಂಸ್ಥೆಗಳಿಂದ ಹಾಗೂ ವ್ಯಕ್ತಿಗತ ಮಟ್ಟದಲ್ಲಿ ಬಂದ ದೂರುಗಳನ್ನು ಮತ್ತು ಸೂಚನೆಗಳನ್ನು ಸಮಿತಿಯು ಯೋಗ್ಯ ಪದ್ಧತಿಯಿಂದ ಪರಾಮರ್ಶಿಸಿ ಪ್ರಸ್ತುತ ಪುಸ್ತಕವನ್ನು ಪುನರ್ಲೇಖನ ಮಾಡಿದೆ. ಅದೇ ರೀತಿ ಆವಶ್ಯಕವಿದ್ದಲ್ಲಿ ಕೆಲವು ಅನುರೂಪವಾಗಿರುವ ತಿದ್ದುಪಡಿಗಳನ್ನೂ ಕೂಡ ಮಾಡಲಾಗಿದೆ.

ಪಠ್ಯಪುಸ್ತಕವು ಹೆಚ್ಚಿಗೆ ಹೆಚ್ಚು ನಿರ್ದೋಷವೂ ಮತ್ತು ಉತ್ತಮ ಗುಣಮಟ್ಟದ್ದೂ ಆಗಿರಲಿ ಎಂಬ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿಯ ಕೆಲವು ಶಿಕ್ಷಣತಜ್ಞರು ಮತ್ತು ವಿಷಯ ತಜ್ಞರಿಂದ ಈ ಪುಸ್ತಕದ ಸಮೀಕ್ಷಣೆಯನ್ನು ಮಾಡಿಸಲಾಗಿದೆ. ಬಂದ ಸೂಚನೆ ಮತ್ತು ಅಭಿಪ್ರಾಯಗಳನ್ನು ಕಾಳಜಿಪೂರ್ವಕವಾಗಿ ವಿಚಾರಮಾಡಿ ಈ ಪುಸ್ತಕಕ್ಕೆ ಅಂತಿಮ ಸ್ವರೂಪವನ್ನು ಕೊಡಲಾಗಿದೆ. ಇತಿಹಾಸ ವಿಷಯ ಸಮಿತಿ, ಚಿತ್ರಕಾರ ಮತ್ತು ಛಾಯಾಚಿತ್ರಗ್ರಾಹಕರು ಅತಿಶಯ ಆಸ್ಥೆಯಿಂದ ಹಾಗೂ ಪರಿಶ್ರಮಪೂರ್ವಕವಾಗಿ ಈ ಪುಸ್ತಕವನ್ನು ಸಿದ್ಧಪಡಿಸಿದ್ದಾರೆ. ಮಂಡಳವು ಈ ಎಲ್ಲರಿಗೂ ಮನಃಪೂರ್ವಕವಾಗಿ ಆಭಾರಿಯಾಗಿದೆ.

ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರು ಈ ಪುಸ್ತಕವನ್ನು ಸ್ವಾಗತಿಸುವರೆಂಬ ಅಪೇಕ್ಷೆಯಿದೆ.

**(ಚಂ. ರಾ. ಬೋರಕರ)**
**ಸಂಚಾಲಕ**
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

**ಪುಣೆ**
**ದಿನಾಂಕ :** ೧೯.೦೨.೨೦೧೪

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**
ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;
**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪರಿಸರ ಅಭ್ಯಾಸ ಭಾಗ-೨ ನಾಲ್ಕನೆಯ ಇಯತ್ತೆ

## ಅಧ್ಯಯನದಲ್ಲಿ ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆಗಳು

**ಅಧ್ಯಯನಾರ್ಥಿಯ ಅಧ್ಯಯನ ಅನುಭವದ ಗುಂಪಿನಲ್ಲಿ/ಜೋಡಿ ಜೋಡಿಯಿಂದ/ವೈಯಕ್ತಿಕವಾಗಿ ಕೆಳಗಿನ ಸಂಗತಿಗಳ ಸಲುವಾಗಿ ಪ್ರೋತ್ಸಾಹ ಕೊಡಬೇಕು.**

- ಕುಟುಂಬದಲ್ಲಿಯ ಹಿರಿಯರ/ಸದಸ್ಯರೊಂದಿಗೆ ಚರ್ಚಿಸುವದು ಮತ್ತು ಪ್ರಶ್ನೆ ಕೇಳುವದು ಹೇಗೆಂದರೆ ಕುಟುಂಬದಲ್ಲಿಯ ಕೆಲವು ಜನರು ಒಂದೇ ಸೂರಿನಡಿಯಲ್ಲಿ ಇರುತ್ತಾರೆ. ಚರ್ಚಿಸುತ್ತಾರೆ ಮತ್ತು ಕೆಲವರು ದೂರ ಇರುತ್ತಾರೆ, ಇದನ್ನು ತಿಳಿದುಕೊಳ್ಳಬೇಕು. ದೂರವಿರುವ ಸಂಬಂಧಿಕರು, ಸ್ನೇಹಿತರೊಂದಿಗೆ ಸಂವಾದ ಸಾಧಿಸಿ ಅವರ ಮನೆಗಳು, ಕೊಡುಕೊಳ್ಳುವಿಕೆ, ಸಾಧನೆಗಳು ಹಾಗೂ ಅವುಗಳ ಸ್ಥಳಗಳ ಜನಜೀವನ ಈ ವಿಷಯವಾಗಿ ತಿಳಿದುಕೊಳ್ಳುವದು.
- ಹೆದರದೆ ಅಥವಾ ನಿ:ಸಂಕೋಚವಾಗಿ ಅನುಭವದ ಮೇಲಿಂದ ಪ್ರಶ್ನೆ ತಯಾರಿಸುವದು ಮತ್ತು ಮನನ ಮಾಡುವದು.
- ತಂದೆ ತಾಯಿಗಳು/ಪಾಲಕರು/ಅಜ್ಜಿ-ಅಜ್ಜ/ನೆರೆಹೊರೆಯ ಹಿರಿಯರೊಂದಿಗೆ ಚರ್ಚಿಸುವದು ಮತ್ತು ಅವರ ಜೀವನದೊಳಗಿಂದ ಭೂತಕಾಲದಲ್ಲಿಯ ಹಾಗೂ ಸದ್ಯದ ದೈನಂದಿನ ಉಪಯೋಗಿಸುವ ವಸ್ತುಗಳು, ಉದಾ: ಬಟ್ಟೆ, ಪಾತ್ರೆ, ಕೆಲಸದ ಸ್ವರೂಪ, ಆಟ ಇವುಗಳ ತುಲನೆಯನ್ನು ಮಾಡುವದು,ವಿಶೇಷ ಅವಶ್ಯಕತೆ ಉಳ್ಳ ಬಾಲಕರ ಸಮಾವೇಶ.
- ಶಿವಚರಿತ್ರೆಯಲ್ಲಿಯ ಘಟನೆಗಳನ್ನು ಆಧಾರಿಸಿದ ಭೂಮಿಕೆಯನ್ನು ಪಾಲಿಸುವದು.
- ಗುಂಪು ಚರ್ಚೆಯ ಮಾಧ್ಯಮದಿಂದ ಧೈರ್ಯ, ಪರಿಶ್ರಮ, ಪ್ರಸಂಗಾವಧಾನ ಇವುಗಳ ಸಹಾಯದಿಂದ ಸಂಕಟದ ಮೇಲೆ ಯಾವ ರೀತಿ ಜಯ ಸಾಧಿಸಲು ಬರುತ್ತದೆ, ಇದರ ಶೋಧ ಮಾಡುವದು.
- ಶಿವಚರಿತ್ರೆಯಲ್ಲಿಯ ಉದಾಹರಣೆಗಳ ಮೇಲಿಂದ ಪರ್ಯಾವರಣ ರಕ್ಷಣೆ, ಜಲ ಸಾಕ್ಷರತೆ, ಸಮತೆ, ನ್ಯಾಯ ಮುಂತಾದವುಗಳ ಬಗ್ಗೆ ಜಾಗರೂಕತೆ ವಿಕಸಿತ ಮಾಡುವದು.
- ಮನೆಯಲ್ಲಿ/ಶಾಲೆಯಲ್ಲಿ/ಸಮಾಜದಲ್ಲಿ ಆಯೋಜಿತ ಮಾಡಿದ ವಿವಿಧ ಸಾಂಸ್ಕೃತಿಕ/ರಾಷ್ಟ್ರೀಯ/ಪರ್ಯಾವರಣದ, ಉತ್ಸವ, ವಿವಿಧ ಪ್ರಸಂಗಗಳಲ್ಲಿ ಸಹಭಾಗಿಸುವದು. ಉದಾ: ಬೆಳಗಿನ ಅಥವಾ ವಿಶೇಷ ಸಭೆ/ಪ್ರದರ್ಶನ/ದೀಪಾವಳಿ/ಓಣಮು/ವಸುಂಧರೆ/ದಿನ/ಈದ ಮುಂತಾದ ಹಾಗೆಯೇ ಸಮಾರಂಭಗಳಲ್ಲಿ, ನೃತ್ಯ, ನಾಟ್ಯ, ಅಭಿನಯ, ಸೃಜನಶೀಲ ಲೇಖನ ಮತ್ತು ಕೃತಿ ಮಾಡುವದು. (ಉದಾ: ಪಣತೆಗಳು/ರಂಗೋಲಿ/ಪತಂಗ ತಯಾರಿಸುವದು, ಕಟ್ಟಡಗಳ ಪ್ರತಿಕೃತಿ, ನದಿಗಳ ಮೇಲಿನ ಸೇತುವೆಗಳ ಪ್ರತಿಕೃತಿ ತಯಾರಿಸುವದು ಇತ್ಯಾದಿ). ಕಥೆ, ಕವಿತೆ, ಘೋಷವಾಕ್ಯ ಘಟನೆಗಳ ವರದಿಗಳ ಕಥೆ, ಸೃಜನಶೀಲ ಲೇಖನ, ಅಥವಾ ಯಾವದೊಂದು ಸೃಜನಶೀಲ ಕೃತಿ ಸಾದರ ಪಡಿಸುವದು.
- ಪಠ್ಯಪುಸ್ತಕದೊಂದಿಗೆ ಇತರ ಸಂಪನ್ಮೂಲ ಓದುವದು/ಶೋಧಿಸುವದು ಹೇಗೆಂದರೆ, ವೃತ್ತಪತ್ರದೊಳಗಿಂದ ವಿಷಯಗಳು, ಶ್ರಾವ್ಯ ಸಾಧನೆಗಳು/ಕಥೆಗಳು/ಕವಿತೆಗಳು/ಚಿತ್ರಗಳು/ಭಿತ್ತಿಚಿತ್ರಗಳು/ಸ್ಪರ್ಶದಿಂದ ಗುರುತಿಸುವ ವಿಶಿಷ್ಠ ಸಾಹಿತ್ಯ, ಅಂತರಜಾಲ/ಗ್ರಂಥಾಲಯ/ತತ್ಸಮವಾಗಿರುವ ಇತರ ಸಂಪನ್ಮೂಲಗಳು.
- ಪಾರಂಪರಿಕ ಹಾಗೂ ಆಧುನಿಕ ವೇಷಭೂಷಣದೊಳಗಿಂದ ವ್ಯತ್ಯಾಸ ತಿಳಿದುಕೊಳ್ಳುವದು.
- ರಾಜ್ಯ ಭಾಷೆ, ಮಾತೃಭಾಷೆ, ಹಬ್ಬ ಹಾಗೂ ಉತ್ಸವಗಳ ಮಾಹಿತಿ ಸಂಗ್ರಹಿಸುವದು.

## ಅಧ್ಯಯನ ನಿಷ್ಪತ್ತಿ

**ಅಧ್ಯಯನ ನಿಷ್ಪತ್ತಿ**

| | |
|---|---|
| 04.95B.01 | ವಿಸ್ತಾರಿತ ಕುಟುಂಬದಲ್ಲಿಯ ಸದಸ್ಯರ ಒಬ್ಬರಿಗೊಬ್ಬರ ಇರುವ ಸಂಬಂಧಗಳ ಪರಿಚಯ ಗುರುತಿಸುತ್ತಾನೆ. |
| 04.95B.02 | ಕುಟುಂಬ/ಶಾಲೆ/ನೆರೆಹೊರೆ ಈ ಸ್ಥಳಗಳಲ್ಲಿ ನಿರೀಕ್ಷಿಸಿರುವ/ಅನುಭವಿಸಿರುವ ಸಮಸ್ಯೆಗಳ ಮೇಲೆ ಸ್ವಂತದ ಅಭಿಪ್ರಾಯ ಮಂಡಿಸುತ್ತಾನೆ (ಉದಾ: ಅಚ್ಚುಕಟ್ಟುತನ/ಬೇಧಭಾವ/ಮಕ್ಕಳ ಹಕ್ಕು). |
| 04.95B.03 | ಗುಂಪಿನಲ್ಲಿ ಒತ್ತಟ್ಟಿಗೆ ಕೆಲಸ ಮಾಡುತ್ತಿರುವಾಗ ಒಬ್ಬರಿಗೊಬ್ಬರ ಬಗ್ಗೆ ಆಸಕ್ತಿ, ಸಮಾನಾನುಭೂತಿ ಹಾಗೂ ನೇತೃತ್ವ ಗುಣ ಈ ವಿಷಯಗಳಲ್ಲಿ ಮುಂದಾಳತ್ವ ವಹಿಸುತ್ತಾನೆ ಮತ್ತು ಸಕ್ರೀಯ ಸಹಭಾಗ ತೆಗೆದುಕೊಳ್ಳುತ್ತಾನೆ. ಉದಾ: ವರ್ಗದಲ್ಲಿ (Indoor)/ವರ್ಗದ ಹೊರಗೆ (Outdoor) / ಸ್ಥಾನಿಕ / ಸಮಕಾಲೀನ ಉಪಕ್ರಮ ಮತ್ತು ಆಟ ಹಾಗೆಯೇ ವನಸ್ಪತಿಗಳ ಕಾಳಜಿ ತೆಗೆದುಕೊಳ್ಳುವದು, ಪಶು-ಪಕ್ಷಿಗಳಿಗೆ ತಿನ್ನಲು ಕೊಡುವದು, ಸುತ್ತಮುತ್ತಲಿನ ವಸ್ತು/ಹಿರಿಯರು/ದಿವ್ಯಾಂಗ ವ್ಯಕ್ತಿಗಳ ಸಲುವಾಗಿ ಪ್ರಕಲ್ಪ ತಯಾರಿಸುವದು/ಭೂಮಿಕೆಯನ್ನು ತೆಗೆದುಕೊಳ್ಳುವದು. |
| 04.95B.04 | ಛತ್ರಪತಿ ಶಿವಾಜಿ ಮಹಾರಾಜರ ವ್ಯಕ್ತಿ ಮತ್ವದೊಳಗಿಂದ ವಿವಿಧ ಸ್ಫೂರ್ತಿದಾಯಕ ಘಟನೆಗಳನ್ನು ಹೇಳುತ್ತಾನೆ. |
| 04.95B.05 | ಚತುರತೆ, ಧೈರ್ಯ ಮತ್ತು ವಿವೇಕ ಇವುಗಳ ಮೇಲಿಂದ ಸಂಕಟದ ಮೇಲೆ ಜಯಿಸಲು ಬರುತ್ತದೆ. ಇದು, ಶಿವಚರಿತ್ರೆಯೊಳಗಿಂದ ಮನದಟ್ಟು ಮಾಡಿಕೊಳ್ಳುತ್ತಾನೆ. |
| 04.95B.06 | ಭೌಗೋಲಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಂದಾಗಿ ವೇಷ-ಭೂಷಣಗಳಲ್ಲಿಯ ವಿವಿಧತೆಯನ್ನು ಹೇಳುತ್ತಾನೆ. |

# ಅನುಕ್ರಮಣಿಕೆ


| ಕ್ರ.ಸಂಖ್ಯೆ | ಪಾಠಗಳ ಹೆಸರು | ಪುಟ ಸಂಖ್ಯೆ |
|---|---|---|
| ೧. | ಶಿವಜನ್ಮಪೂರ್ವದ ಮಹಾರಾಷ್ಟ್ರ | ೧ |
| ೨. | ಸಂತರ ಕಾರ್ಯ | ೩ |
| ೩. | ಮರಾಠಾ ಸರದಾರರು- ಭೋಸಲೆಯವರ ದಕ್ಷ ಮನೆತನ | ೮ |
| ೪. | ಶಿವರಾಯರ ಬಾಲ್ಯ | ೧೨ |
| ೫. | ಶಿವರಾಯರ ಶಿಕ್ಷಣ | ೧೭ |
| ೬. | ಸ್ವರಾಜ್ಯ ಸ್ಥಾಪನೆಯ ಪ್ರತಿಜ್ಞೆ | ೨೧ |
| ೭. | ಸ್ವರಾಜ್ಯದ ತೋರಣ ಕಟ್ಟಿದರು | ೨೫ |
| ೮. | ಸ್ವಕೀಯ ಶತ್ರುಗಳ ನಿಯಂತ್ರಣ | ೨೯ |
| ೯. | ಪ್ರತಾಪಗಡದಲ್ಲಿಯ ಪರಾಕ್ರಮ | ೩೨ |
| ೧೦. | ಕಣಿವೆಯಲ್ಲಿ ಜಿದ್ದಿನಿಂದ ಹೋರಾಡಿದರು | ೩೭ |
| ೧೧. | ಶಾಯಿಸ್ತಾಖಾನನ ಫಜೀತಿ | ೪೨ |
| ೧೨. | ಪುರಂದರದ ಮುತ್ತಿಗೆ ಮತ್ತು ಒಪ್ಪಂದ | ೪೫ |
| ೧೩. | ಬಾದಶಾಹನ ಕಣ್ಣಿಗೆ ಮಣ್ಣೆರಚಿದರು | ೫೦ |
| ೧೪. | ಕೋಟೆ ದೊರೆಯಿತು, ಆದರೆ ಸಿಂಹ ಹೋಯಿತು | ೫೩ |
| ೧೫. | ಒಂದು ಅಪೂರ್ವ ಸಮಾರಂಭ | ೫೭ |
| ೧೬. | ದಕ್ಷಿಣದ ದಂಡಯಾತ್ರೆ | ೬೦ |
| ೧೭. | ದುರ್ಗಕೋಟೆಗಳ ಮತ್ತು ಹಡಗುಪಡೆಯ ವ್ಯವಸ್ಥಾಪನೆ | ೬೫ |
| ೧೮. | ಜನಕಲ್ಯಾಣಕಾರಿ ಸ್ವರಾಜ್ಯದ ವ್ಯವಸ್ಥಾಪನೆ | ೭೦ |

'ಶಿವಾಜಿ ಮಹಾರಾಜರು ಕೇವಲ ಮಹಾರಾಷ್ಟ್ರದವರಾಗಿರದೆ ಅವರು ಇಡೀ ರಾಷ್ಟ್ರದವರಾಗಿದ್ದರು. ಅವರು ಹಿರಿಯ ತತ್ವಜ್ಞಾನಿಗಳ ಬೋಧನೆಯಿಂದ ಸ್ಫೂರ್ತಿಯನ್ನು ಪಡೆದಿದ್ದರು. ವೈಯಕ್ತಿಕ ಮಹತ್ವಾಕಾಂಕ್ಷೆಯಿಂದ ಕೇವಲ ಸ್ವಾರ್ಥ ಸಾಧನೆಗಾಗಿ ರಾಜ್ಯ ಸ್ಥಾಪನೆ ಮಾಡುವ ಇಚ್ಛೆ ಅವರಿಗೆ ಇರಲಿಲ್ಲ. ಆಗಿನ ಕಾಲದ ರಾಜ್ಯ ಪದ್ಧತಿಗಳ ಗುಣಾವಗುಣಗಳನ್ನು ಅಭ್ಯಾಸ ಮಾಡಿ ತಮ್ಮ ವಿಶಿಷ್ಟ ಉದ್ದೇಶ ಮತ್ತು ರಾಜ್ಯ ವ್ಯವಸ್ಥೆ ಇವುಗಳನ್ನು ಯೋಜಿಸಿದರು. ಮಹಾರಾಜರು ಸ್ವತಃ ಧರ್ಮನಿಷ್ಠ ಹಿಂದೂವಾಗಿದ್ದಂತೆಯೇ ಇತರ ಧರ್ಮಗಳ ಬಗ್ಗೆ ಸಹಿಷ್ಣುತೆಯ ಭಾವನೆ ತಾಳಿದ್ದರು. ಇತರ ಧರ್ಮಗಳ ಪೂಜಾ ಸ್ಥಾನಗಳಿಗೆ ಅವರು ದೇಣಿಗೆಗಳನ್ನು ಕೊಟ್ಟರು. ಶಿವಾಜಿ ಮಹಾರಾಜರು ಒಬ್ಬ ಹಿರಿಯ ಸೇನಾನಿಯಾಗಿದ್ದರು. ಸ್ವಾತಂತ್ರ್ಯದ ರಕ್ಷಣೆಗಾಗಿ ನೌಕಾಪಡೆಯ ಅವಶ್ಯಕತೆ ಮತ್ತು ಮಹತ್ವ ಅವರಿಗೆ ತಿಳಿದಿತ್ತು. ಇಂಗ್ಲಿಷ ಮತ್ತು ಡಚ್ಚರ ಆಕ್ರಮಣಗಳಿಂದ ಸಂರಕ್ಷಣೆ ಮಾಡಲು ಅವರು ಪ್ರಬಲವಾದ ನೌಕಾಪಡೆಯನ್ನು ಕಟ್ಟಿದ್ದರು. ಪ್ರತಾಪಗಡ ಕೋಟೆಯ ನಿರ್ಮಾಣದಲ್ಲಿ ಅವರ ಯುದ್ಧಶಾಸ್ತ್ರದಲ್ಲಿಯ ನೈಪುಣ್ಯತೆ ಎದ್ದು ಕಾಣುತ್ತದೆ. ಶಿವಾಜಿ ಮಹಾರಾಜರು ನಮ್ಮ ದೇಶವನ್ನು ಬಹಳವಾಗಿ ಪ್ರೀತಿಸುತ್ತಿದ್ದರು ಮತ್ತು ಅವರು ಮಾನವೀ ಸದ್ಗುಣಗಳ ಪ್ರತೀಕವಾಗಿದ್ದರು.'

**– ಪಂಡಿತ ಜವಾಹರಲಾಲ ನೆಹರೂ.**



ಮೀರ ಮಹಮ್ಮದ ಎಂಬ ಶಿವಕಾಲದ ಚಿತ್ರಕಾರನು ತೆಗೆದ ಶಿವಾಜಿ ಮಹಾರಾಜರ ಚಿತ್ರ
(ಮೂಲಚಿತ್ರ ಪ್ಯಾರಿಸದಲ್ಲಿಯ ಸಂಗ್ರಹಾಲಯದಲ್ಲಿ ಇದೆ.)

# ೧. ಶಿವಜನ್ಮ ಪೂರ್ವದ ಮಹಾರಾಷ್ಟ್ರ

ಶಿವಾಜಿ ಮಹಾರಾಜರು ಮಹಾಪುರುಷರಾಗಿದ್ದರು. ನಾವು ಪ್ರತಿ ವರುಷ ಅವರ ಜಯಂತಿಯನ್ನು ದೊಡ್ಡ ಸಂಭ್ರಮದಿಂದ ಹಾಗೂ ಆದರದಿಂದ ಆಚರಿಸುತ್ತೇವೆ. ಮಕ್ಕಳೇ, ನೀವು ಆ ದಿನ ಎಷ್ಟೊಂದು ಸಂತೋಷದಲ್ಲಿ ಇರುತ್ತೀರಿ. ಮಹಾರಾಜರ ಕುರಿತು ರಚಿಸಿದ ಸುಂದರವಾದ ಪದ್ಯಗಳನ್ನು ಹಾಡುತ್ತೀರಿ, ಲಾವಣಿಗಳನ್ನು ಹಾಡುತ್ತೀರಿ, ಅವರ ಭಾವಚಿತ್ರಕ್ಕೆ ಮಾಲೆ ಹಾಕುತ್ತೀರಿ. ಬಹಳ ಉತ್ಸಾಹದಿಂದ 'ಶಿವಾಜಿ ಮಹಾರಾಜ ಕೀ ಜೈ' ಎಂದು ಜಯಜಯಕಾರ ಮಾಡುತ್ತೀರಿ. ಈ ಶಿವಾಜಿ ಮಹಾರಾಜರು ಯಾರು? ಅವರು ಅಂಥ ಯಾವ ದೊಡ್ಡ ಕಾರ್ಯ ಮಾಡಿದರು ?

ಶಿವಾಜಿ ಮಹಾರಾಜರು ಯಾವ ಕಾಲದಲ್ಲಿ ಆಗಿ ಹೋದರೋ, ಆ ಕಾಲವು ಮಧ್ಯಯುಗವಾಗಿತ್ತು. ಆ ಕಾಲದಲ್ಲಿ ಎಲ್ಲೆಡೆ ರಾಜ ಮಹಾರಾಜರ ಆಳ್ವಿಕೆ ಇತ್ತು. ಅನೇಕ ರಾಜರು ಪ್ರಜೆಗಳ ಹಿತದ ಬದಲಾಗಿ ತಮ್ಮ ವೈಭವ-ವಿಲಾಸದಲ್ಲಿ ಮಗ್ನರಾಗಿರುತ್ತಿದ್ದರು; ಆದರೆ ಆ ಕಾಲದಲ್ಲಿಯೂ ಪ್ರಜೆಗಳ ಕಲ್ಯಾಣಕ್ಕಾಗಿ ರಾಜ್ಯವಾಳಿದ ಕೆಲವು ರಾಜರು ಆಗಿಹೋದರು. ಉತ್ತರದಲ್ಲಿಯ ಮುಘಲ ಸಾಮ್ರಾಟ ಅಕಬರ, ದಕ್ಷಿಣದಲ್ಲಿಯ ವಿಜಯನಗರದ ಸಾಮ್ರಾಟ ಕೃಷ್ಣದೇವರಾಯ ಇವರು ತಮ್ಮ ಕಲ್ಯಾಣಕಾರಿ ರಾಜ್ಯಾಡಳಿತದ ಬಗ್ಗೆ ಇತಿಹಾಸದಲ್ಲಿ ಪ್ರಸಿದ್ಧರಾಗಿದ್ದಾರೆ. ಅವರ ಜೊತೆಗೆ ಶಿವಾಜಿ ಮಹಾರಾಜರ ಹೆಸರನ್ನೂ ಆದರದಿಂದ ತೆಗೆದುಕೊಳ್ಳಲಾಗುತ್ತದೆ.

ಶಿವಾಜಿ ಮಹಾರಾಜರು ಮಹಾರಾಷ್ಟ್ರದಲ್ಲಿ ಸ್ವರಾಜ್ಯವನ್ನು ನಿರ್ಮಿಸಿದರು. ಸ್ವರಾಜವೆಂದರೆ ಸ್ವಂತದ ರಾಜ್ಯ. ಮಹಾರಾಜರಿಗಿಂತ ಸುಮಾರು ನಾಲ್ಕು ನೂರು ವರ್ಷ ಪೂರ್ವದಲ್ಲಿ ಮಹಾರಾಷ್ಟ್ರದಲ್ಲಿ ಸ್ವರಾಜ್ಯವಿರಲಿಲ್ಲ. ಮಹಾರಾಷ್ಟ್ರದ ಬಹುತೇಕ ಭಾಗವನ್ನು ಅಹಮದನಗರದ ನಿಜಾಮಶಾಹ ಮತ್ತು ಬಿಜಾಪುರದ ಆದಿಲಶಾಹ ಈ ಇಬ್ಬರು ಸುಲ್ತಾನರು ತಮ್ಮಲ್ಲಿ ಹಂಚಿಕೊಂಡಿದ್ದರು. ಅವರು ಉದಾರ ಮನಸಿನವರು ಆಗಿರಲಿಲ್ಲ, ಅವರು ಪ್ರಜೆಗಳ ಮೇಲೆ ಅನ್ಯಾಯ ಮಾಡುತ್ತಿದ್ದರು. ಅವರಿಬ್ಬರಲ್ಲಿ ಪರಸ್ಪರ ಕಡು ವೈರತ್ವವಿತ್ತು. ಅವರ ನಡುವೆ ಯಾವಾಗಲೂ ಯುದ್ಧಗಳು ಆಗುತ್ತಿದ್ದವು. ಅದರಿಂದ ಪ್ರಜೆಗಳಿಗೆ ತುಂಬಾ ತೊಂದರೆಯಾಗುತ್ತಿತ್ತು. ಜನರು ಸುಖವಾಗಿ ಇರಲಿಲ್ಲ, ಬಹಿರಂಗವಾಗಿ ಉತ್ಸವ ಮಾಡುವುದು, ಪೂಜೆ ಮಾಡುವುದು ಅಪಾಯಕರವಾಗಿತ್ತು. ಜನರಿಗೆ ಹೊಟ್ಟೆ ತುಂಬಾ ಅನ್ನ ಸಿಗುತ್ತಿರಲಿಲ್ಲ, ವಾಸಿಸಲು ಸುರಕ್ಷಿತವಾದ ಆಶ್ರಯ ಇರಲಿಲ್ಲ, ಎಲ್ಲ ಕಡೆ ಅನ್ಯಾಯ ತುಂಬಿತ್ತು. ಮಹಾರಾಷ್ಟ್ರದಲ್ಲಿ ಅಲ್ಲಲ್ಲಿ ದೇಶಮುಖ, ದೇಶಪಾಂಡೆ ಮುಂತಾದ ಜಮೀನುದಾರರು ಇದ್ದರು. ಆದರೆ ಜನತೆಯ ಕಡೆಗೆ ಅವರ ಗಮನವಿರಲಿಲ್ಲ, ದೇಶದ ಮೇಲೆ ಅವರಿಗೆ ಪ್ರೇಮವಿರಲಿಲ್ಲ. ಕೇವಲ ಆಸ್ತಿ ಮತ್ತು ಜಹಗೀರಿನ ಮೇಲೆ ಅವರ ಪ್ರೇಮವಿತ್ತು. ಆಸ್ತಿಯ ಸಲುವಾಗಿ ಅವರು ತಮ್ಮ ತಮ್ಮಲ್ಲಿ ಜಗಳವಾಡುತ್ತಿದ್ದರು. ಮತ್ತು ಪರಸ್ಪರ ಯುದ್ಧ ಮಾಡುತ್ತಿದ್ದರು. ಇದರಿಂದ ಪ್ರಜೆಗಳಿಗೆ ತುಂಬಾ ತೊಂದರೆಯಾಗುತ್ತಿತ್ತು. ಈ ಎಲ್ಲಾ ಕಾರಣಗಳಿಂದ ಜನರು ತುಂಬಾ ಬೇಸತ್ತಿದ್ದರು. ಎಲ್ಲ ಕಡೆಗೆ ಗೊಂದಲ ಉಂಟಾಗಿತ್ತು.

ಶಿವಾಜಿ ಮಹಾರಾಜರು ಇದನ್ನೆಲ್ಲಾ ನೋಡಿದರು. ಜನರನ್ನು ಸುಖವಾಗಿ ಇರಿಸಲು ಸ್ವರಾಜ್ಯ ಸ್ಥಾಪಿಸುವ ಪವಿತ್ರ ಕಾರ್ಯವನ್ನು ಅವರು ಕೈಗೊಂಡರು. ಜಗಳಗಂಟರಾದ ಜಮೀನುದಾರರನ್ನು ಅವರು ಸರಿಯಾದ ದಾರಿಗೆ ತಂದರು. ಸ್ವರಾಜ್ಯದ ಕಾರ್ಯದಲ್ಲಿ ಅವರನ್ನು ಉಪಯೋಗಿಸಿಕೊಂಡರು. ಹಾಗೆಯೇ ಜನರ ಮೇಲೆ ಅನ್ಯಾಯ ಮಾಡುವ ಆಡಳಿತಗಾರರೊಂದಿಗೆ ಶಿವಾಜಿ ಮಹಾರಾಜರು ಹೋರಾಡಿದರು. ದಬ್ಬಾಳಿಕೆ ಮಾಡುವ ಆಡಳಿತಗಾರರನ್ನು ಸೋಲಿಸಿದರು. ನ್ಯಾಯವಾದ ಹಿಂದವೀ ಸ್ವರಾಜ್ಯವನ್ನು ಅವರು ಸ್ಥಾಪಿಸಿದರು. ಈ ಸ್ವರಾಜ್ಯವು ಎಲ್ಲಾ ಜಾತಿ ಧರ್ಮಗಳ ಜನರದ್ದಾಗಿತ್ತು. ಈ ಸ್ವರಾಜ್ಯದಲ್ಲಿ ಯಾವ ತರದ ಭೇದ ಭಾವ ಇರಲಿಲ್ಲ. ಶಿವಾಜಿ ಮಹಾರಾಜರು ಸ್ವರಾಜ್ಯದಲ್ಲಿ ಹಿಂದೂ, ಮುಸಲ್ಮಾನ ಎಂಬ ಯಾವ ಭೇದವನ್ನು ಮಾಡಲಿಲ್ಲ. ಅವರು ಎಲ್ಲಾ ಧರ್ಮಗಳ ಸಾಧು ಸಂತರನ್ನು ಗೌರವಿಸಿದರು. ಮಹಾರಾಜರ ಇಂಥ ಈ ದೊಡ್ಡ ಕಾರ್ಯಗಳನ್ನು ನೋಡಿದಾಗ ನಮಗೆ ಪ್ರೇರಣೆ ಸಿಗುತ್ತದೆ, ಸ್ಫೂರ್ತಿ ಸಿಗುತ್ತದೆ.

ಶಿವಾಜಿ ಮಹಾರಾಜರಿಗಿಂತ ಮೊದಲು ಸುಮಾರು ಮೂರು-ನಾಲ್ಕುನೂರು ವರ್ಷಗಳಲ್ಲಿ ಮಹಾರಾಷ್ಟ್ರದಲ್ಲಿ ಅನೇಕ ಸಂತರು ಆಗಿ ಹೋದರು. ಅವರು ಮಾಡಿದ ಕಾರ್ಯಗಳು ಶಿವಾಜಿ ಮಹಾರಾಜರ ಸ್ವರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಉಪಯೋಗವಾದವು. ಸಂತರ ಆ ಕಾರ್ಯಗಳನ್ನು ನಾವು ಮುಂದಿನ ಪಾಠದಲ್ಲಿ ನೋಡೋಣ.

## ಅಭ್ಯಾಸ

**೧. ಬಿಟ್ಟ ಸ್ಥಳಗಳಲ್ಲಿ ಕಂಸದಲ್ಲಿರುವ ಯೋಗ್ಯ ಪರ್ಯಾಯಗಳನ್ನು ಬರೆಯಿರಿ.**

(ಅ) ಶಿವಾಜಿ ಮಹಾರಾಜರು ಯಾವ ಕಾಲದಲ್ಲಿ ಆಗಿ ಹೋದರೋ ಆ ಕಾಲ ............ ಯುಗವಾಗಿತ್ತು.

(ಪ್ರಾಚೀನ, ಮಧ್ಯ, ಆಧುನಿಕ)

(ಆ) ಶಿವಾಜಿ ಮಹಾರಾಜರು........... ದಲ್ಲಿ ಸ್ವರಾಜ್ಯವನ್ನು ನಿರ್ಮಿಸಿದರು.

(ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರ ಪ್ರದೇಶ)

**೨. 'ಅ' ಗುಂಪು ಮತ್ತು 'ಬ' ಗುಂಪುಗಳನ್ನು ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| (ಅ) ವಿಜಯನಗರದ ಸಾಮ್ರಾಟ | (೧) ನಿಜಾಮಶಾಹ |
| (ಆ) ಅಹಮದನಗರದ ಸುಲ್ತಾನ | (೨) ಆದಿಲಶಾಹ |
| (ಇ) ವಿಜಾಪುರದ ಸುಲ್ತಾನ | (೩) ಕೃಷ್ಣದೇವರಾಯ |
| | (೪) ಸಾಮ್ರಾಟ ಅಕಬರ |

8JHH3J

**೩. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಪ್ರಜೆಗಳ ಕಲ್ಯಾಣಕ್ಕಾಗಿ ರಾಜ್ಯವಾಳಿದ ರಾಜರ ಹೆಸರುಗಳನ್ನು ಬರೆಯಿರಿ.

(ಆ) ಶಿವಾಜಿ ಮಹಾರಾಜರು ಯಾವ ಕಾರ್ಯವನ್ನು ಕೈಗೆತ್ತಿಕೊಂಡರು ?

(ಇ) ಶಿವಾಜಿ ಮಹಾರಾಜರು ಯಾರೊಂದಿಗೆ ಹೋರಾಡಿದರು?

**೪. ವಿಭಿನ್ನ ಶಬ್ದವನ್ನು ಗುರುತಿಸಿರಿ.**

(ಅ) ಸ್ವರಾಜ್ಯ, ಗುಲಾಮಗಿರಿ, ಸ್ವಾತಂತ್ರ್ಯ

(ಆ) ಜನರು, ಪ್ರಜೆಗಳು, ರಾಜ.

**ಉಪಕ್ರಮ**

(ಅ) ನಿಮ್ಮ ವರ್ಗದಲ್ಲಿ ಶಿವಜಯಂತಿಯನ್ನು ಆಚರಿಸಿರಿ.

(ಆ) ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಐತಿಹಾಸಿಕ ಗೀತೆ ಮತ್ತು ಲಾವಣಿಗಳನ್ನು ಸಾದರಪಡಿಸಿರಿ.



# ೨. ಸಂತರ ಕಾರ್ಯ

ಮಹಾರಾಷ್ಟ್ರದಲ್ಲಿ ಶ್ರೀಚಕ್ರಧರ, ಸಂತ ನಾಮದೇವ, ಸಂತ ಜ್ಞಾನೇಶ್ವರ, ಸಂತ ಚೋಖಾಮೇಳಾ ಈ ಸಂತರಿಂದ ಆರಂಭವಾದ ಸಂತಪರಂಪರೆಯನ್ನು ಸಮಾಜದ ವಿವಿಧ ಸ್ತರಗಳಿಂದ ಬಂದ ಸಂತರು ಮುನ್ನಡೆಸಿದರು. ಈ ಸಂತ ಮಂಡಳಿಯಲ್ಲಿ ಸಂತ ಗೋರೋಬಾ, ಸಂತ ಸಾವತಾ, ಸಂತ ನರಹರಿ, ಸಂತ ಏಕನಾಥ, ಸಂತ ಶೇಖ ಮಹಮ್ಮದ, ಸಂತ ತುಕಾರಾಮ, ಸಂತ ನಿಳೋಬಾ ಮುಂತಾದ ಸಂತರ ಸಮಾವೇಶವಾಗುತ್ತದೆ. ಅದೇ ರೀತಿ ಸಂತ ಜನಾಬಾಯಿ, ಸಂತ ಸೊಯರಾಬಾಯಿ, ಸಂತ ನಿರ್ಮಲಾಬಾಯಿ, ಸಂತ ಮುಕ್ತಾಬಾಯಿ, ಸಂತ ಕಾನ್ಹೋಪಾತ್ರಾ ಹಾಗೂ ಸಂತ ಬಹಿಣಾಬಾಯಿ ಶಿಊರಕರ ಇವರದೂ ಸಮಾವೇಶವಾಗುತ್ತದೆ.


ಅವರು ಜನರಿಗೆ ದಯೆ, ಅಹಿಂಸೆ, ಪರೋಪಕಾರ, ಸೇವೆ, ಸಮತೆ, ಬಂಧುತ್ವ ಇತ್ಯಾದಿ ಗುಣಗಳನ್ನು ಬೋಧಿಸಿದರು. ಯಾರು ಚಿಕ್ಕವರಿಲ್ಲ, ಯಾರು ದೊಡ್ಡವರಿಲ್ಲ, ಎಲ್ಲರೂ ಸಮಾನರು ಎಂಬ ಸಮತೆಯ ಭಾವನೆಯನ್ನು ಸಂತರು ಜನರ ಮನದಲ್ಲಿ ನಿರ್ಮಿಸಿದರು. ಅದರಂತೆಯೇ ಮಹಾರಾಷ್ಟ್ರದಲ್ಲಿ ಸಮರ್ಥ ರಾಮದಾಸರು ತಮ್ಮ ಕಾರ್ಯವನ್ನು ಮಾಡಿದರು.



ಶ್ರೀ ಚಕ್ರಧರ ಸ್ವಾಮಿ

**ಶ್ರೀಚಕ್ರಧರ ಸ್ವಾಮಿ :** ಶ್ರೀಚಕ್ರಧರ ಸ್ವಾಮಿಗಳು ಮೂಲತಃ ಗುಜರಾತದಲ್ಲಿಯ ಒಬ್ಬ ರಾಜಕುಮಾರರಾಗಿದ್ದರು. ಅವರು ವೈರಾಗ್ಯ ವೃತ್ತಿಯನ್ನು ಸ್ವೀಕರಿಸಿ ಮಹಾರಾಷ್ಟ್ರದಲ್ಲಿ ಬಂದರು. ಇಲ್ಲಿ ಸಂಚಾರ ಮಾಡುತ್ತಿರುವಾಗ ಅವರು ಸಮತೆಯ ಉಪದೇಶ ಮಾಡಿದರು. ಅವರಿಗೆ ಸ್ತ್ರೀ-ಪುರುಷ ಜಾತಿಧರ್ಮಗಳ ಭೇದಭಾವ ಒಪ್ಪಿಗೆ ಇರಲಿಲ್ಲ, ಹೀಗಾಗಿ ಅವರಿಗೆ ಅನೇಕ ಸ್ತ್ರೀ-ಪುರುಷ ಅನುಯಾಯಿಗಳು ದೊರೆತರು. ಅವರು ಸ್ಥಾಪಿಸಿದ ಪಂಥಕ್ಕೆ 'ಮಹಾನುಭಾವ ಪಂಥ' ಎಂದು ಕರೆಯುತ್ತಾರೆ. ಶ್ರೀ ಚಕ್ರಧರ ಸ್ವಾಮಿಗಳ ನೆನಪುಗಳ ಸಂಗ್ರಹವೆಂದರೆ 'ಲೀಲಾಚರಿತ್ರ' ಎಂಬ ಗ್ರಂಥವಾಗಿದೆ.

**ಸಂತ ನಾಮದೇವ:** ಸಂತ ನಾಮದೇವರು ವಿಠ್ಠಲನ ನಿಸ್ಸೀಮ ಭಕ್ತರಾಗಿದ್ದರು. ಅವರು ನರಸಿ ಎಂಬ ಊರಿನವರಾಗಿದ್ದರು. ಅವರು ಅನೇಕ ಅಭಂಗಗಳನ್ನು



ಸಂತ ನಾಮದೇವ

ರಚಿಸಿದರು. ಕೀರ್ತನೆಗಳನ್ನು ಮಾಡಿದರು ಮತ್ತು ಜನತೆಯಲ್ಲಿ ಜಾಗೃತಿಯನ್ನು ಉಂಟುಮಾಡಿದರು. ಅವರು ಭಾಗವತ ಧರ್ಮದ ಪ್ರಸಾರಕ್ಕಾಗಿ ಮಹಾರಾಷ್ಟ್ರದ ತುಂಬೆಲ್ಲಾ ಸಂಚರಿಸಿದರು. ಅವರು ಜನರಿಗೆ ಭಕ್ತಿಯನ್ನು ಕುರಿತು ಬೋಧಿಸಿದರು. ಧರ್ಮರಕ್ಷಣೆಯ ಮತ್ತು ಭಕ್ತಿಮಾರ್ಗದ ದೃಢ ನಿರ್ಧಾರವನ್ನು ಜನರ ಮನಸ್ಸಿನಲ್ಲಿ ಹುಟ್ಟಿಸಿದರು. ಸಂತ ನಾಮದೇವರು ನಂತರ ಭಾರತದ ತುಂಬೆಲ್ಲ ಪ್ರವಾಸ ಮಾಡಿ, ಮಾನವ ಧರ್ಮದ ಸಂದೇಶವನ್ನು ತಲುಪಿಸಿದರು. ಅವರು ಪಂಜಾಬಕ್ಕೆ ಹೋದರು. ಅಲ್ಲಿಯ ಜನರಿಗೂ ಅವರು ಸಮತೆಯ ಸಂದೇಶವನ್ನು ನೀಡಿದರು. ಹಿಂದೀ ಭಾಷೆಯಲ್ಲಿ ಪದ್ಯಗಳನ್ನು ರಚಿಸಿದರು. ಅವರ ಕೆಲವು ಪದ್ಯಗಳು ಇಂದಿಗೂ ಶೀಖ ಜನರ 'ಗುರುಗ್ರಂಥ ಸಾಹಿಬ' ಎಂಬ ಧರ್ಮಗ್ರಂಥದಲ್ಲಿ ನೋಡಲು ಸಿಗುತ್ತವೆ. ಮಹಾರಾಷ್ಟ್ರದಲ್ಲಂತೂ ಅವರ ಅಭಂಗಗಳನ್ನು ಮನೆ ಮನೆಗಳಲ್ಲಿ ಜನರು ಬಹಳ ಭಕ್ತಿಯಿಂದ ಹಾಡುತ್ತಾರೆ.

**ಸಂತ ಜ್ಞಾನೇಶ್ವರ :** ಸಂತ ಜ್ಞಾನೇಶ್ವರರು ಆಪೆಗಾಂವ ಎಂಬ ಊರಿನವರು. ನಿವೃತ್ತಿನಾಥ ಮತ್ತು ಸೋಪಾನ ದೇವ ಇವರು ಅವರ ಸೋದರರು. ಮುಕ್ತಾಬಾಯಿ ಅವರ ಸೋದರಿ. ಆ ಕಾಲದ ಸನಾತನ ಜನರು ಆ ಮಕ್ಕಳನ್ನು 'ಸನ್ಯಾಸಿಯ ಮಕ್ಕಳು' ಎಂದು ವ್ಯಂಗ್ಯವಾಗಿ ಕರೆಯುತ್ತಿದ್ದರು. ಅದರ ಕಾರಣವೇನೆಂದರೆ, ಅವರ ತಂದೆಯವರು ಸನ್ಯಾಸ ಸ್ವೀಕರಿಸಿದ್ದರು. ಮನೆ ತ್ಯಜಿಸಿದ್ದರು. ಆದರೆ ಮುಂದೆ ಗುರುವಿನ ಆಜ್ಞೆಯಂತೆ ಅವರು ಮನೆಗೆ ಹಿಂತಿರುಗಿದರು ಹಾಗೂ ಸಂಸಾರ ಮಾಡತೊಡಗಿದರು. ಮುಂದೆ ಅವರಿಗೆ ನಾಲ್ಕು ಮಕ್ಕಳು ಆದವು. ಇದು ಆ ಕಾಲದ ಸನಾತನ ಜನರಿಗೆ ಒಪ್ಪಿಗೆಯಿರಲಿಲ್ಲ, ಜನರು ಅವರನ್ನು ಬಹಿಷ್ಕರಿಸಿದ್ದರು. ಜನರು ಆ ಮಕ್ಕಳನ್ನು ಪೀಡಿಸುತ್ತಿದ್ದರು.

ಜ್ಞಾನೇಶ್ವರರು ಒಮ್ಮೆ ಭಿಕ್ಷೆಗಾಗಿ ಜೋಳಿಗೆ ಹಿಡಿದುಕೊಂಡು ಊರಿನಲ್ಲಿ ಹೋದರು, ಆದರೆ ಯಾರೂ ಅವರಿಗೆ ಭಿಕ್ಷೆ ನೀಡಲಿಲ್ಲ, ಎಲ್ಲ ಕಡೆಯೂ ಅವರಿಗೆ ನಿಂದೆಯ ಮಾತುಗಳನ್ನು ಕೇಳಬೇಕಾಯಿತು. ಅವರ ಎಳೆಯ ಮನಸ್ಸಿಗೆ ತುಂಬಾ ದುಃಖವಾಯಿತು. ಅವರು ತಮ್ಮ ಗುಡಿಸಲಿಗೆ ಬಂದರು. ಗುಡಿಸಲಿನ ಬಾಗಿಲನ್ನು ಮುಚ್ಚಿಕೊಂಡು ಒಳಗೆ ದುಃಖಿಸುತ್ತ ಕುಳಿತರು. ಅಷ್ಟರಲ್ಲಿ ಅಲ್ಲಿಗೆ ಮುಕ್ತಾ ಬಂದಳು. ಹುಲ್ಲಿನ ಬಾಗಿಲನ್ನು ಮೆಲ್ಲನೆ ತಟ್ಟುತ್ತ ಅವಳು ಜ್ಞಾನೇಶ್ವರರಿಗೆ ಅಂದಳು, ''ಜ್ಞಾನೇಶ್ವರರೇ ಬಾಗಿಲು ತೆರೆಯಿರಿ. ತಾವು ದುಃಖಿಸುತ್ತಾ ಕುಳಿತರೆ ಹೇಗೆ ? ಜಗತ್ತಿನ ಕಲ್ಯಾಣವನ್ನು ಯಾರು ಮಾಡಬೇಕು ?'' ಸೋದರಿಯ ಉಪದೇಶದಿಂದ ಜ್ಞಾನೇಶ್ವರರಿಗೆ ಉತ್ಸಾಹ ಬಂದಿತು. ದುಃಖವನ್ನು ಮರೆತು ಅವರು ಕೆಲಸದಲ್ಲಿ ತೊಡಗಿದರು. ಅಲ್ಲಲ್ಲಿ ಧರ್ಮದ ಹೆಸರಿನಲ್ಲಿ ಬಡವರ, ಹಿಂದುಳಿದ ಜನರು ಮೇಲೆ ಅನ್ಯಾಯವಾಗುತ್ತಿತ್ತು. ಆಗ ಜ್ಞಾನೇಶ್ವರರು ಜನರಿಗೆ ಕಳಕಳಿಯಿಂದ ಉಪದೇಶ ಮಾಡಿದರು. ''ದೇವರ ಮೇಲೆ ಶ್ರದ್ಧೆ ಇರಲಿ. ಎಲ್ಲರೊಡನೆ ಸಮಾನತೆಯಿಂದ ವರ್ತಿಸಿರಿ. ದುಃಖದಲ್ಲಿ ಇದ್ದವರಿಗೆ ಸಹಾಯ ಮಾಡಿರಿ, ಅವರ ದುಃಖವನ್ನು ದೂರ ಮಾಡಿರಿ''. ಅವರ ಉಪದೇಶವು ಕಳೆದ ಏಳುನೂರು ವರ್ಷಗಳಿಂದ ಮಹಾರಾಷ್ಟ್ರದ ಮೂಲೆ ಮೂಲೆಗಳಲ್ಲಿ ಒಂದೇ ಸಮನೆ ಪ್ರತಿಧ್ವನಿಸುತ್ತಿದೆ.

ಆ ಕಾಲದಲ್ಲಿ ಧರ್ಮದ ಜ್ಞಾನವು ಸಂಸ್ಕೃತ ಗ್ರಂಥಗಳಲ್ಲಿ ಬಂಧಿಸಲ್ಪಟ್ಟಿತ್ತು. ಸರ್ವಸಾಮಾನ್ಯರ ಮಾತಾಡುವ ಹಾಗೂ ವ್ಯವಹಾರದ ಭಾಷೆ ಮಾತ್ರ ಮರಾಠಿ ಆಗಿತ್ತು. ಜ್ಞಾನೇಶ್ವರರು ಮರಾಠಿ ಭಾಷೆಯಲ್ಲಿ 'ಜ್ಞಾನೇಶ್ವರಿ' ಎಂಬ ದೊಡ್ಡ ಗ್ರಂಥವನ್ನು ಬರೆದರು. ಧರ್ಮ-ಜ್ಞಾನದ ಭಂಡಾರವನ್ನು ಅವರು ಜನರಿಗೆ ತೆರೆದುಕೊಟ್ಟರು. ಜನರಿಗೆ ಬಂಧುಭಾವದ ಉಪದೇಶ ಮಾಡಿದರು. ಜ್ಞಾನೇಶ್ವರರು ತರುಣ ವಯಸ್ಸಿನಲ್ಲಿಯೇ ಪುಣೆಯ ಹತ್ತಿರದ ಆಳಂದಿ



**ಸಂತ ಜ್ಞಾನೇಶ್ವರ**

ಎಂಬಲ್ಲಿ ಜೀವಂತ ಸಮಾಧಿಯನ್ನು ಹೊಂದಿದರು. ಇಂದಿಗೂ ಲಕ್ಷಾಂತರ ಜನರು ಅತ್ಯಂತ ಭಕ್ತಿ ಭಾವದಿಂದ ಪ್ರತಿ ವರುಷ ಆಷಾಢ-ಕಾರ್ತಿಕ ಮಾಸಗಳಲ್ಲಿ ಆಳಂದಿ ಮತ್ತು ಪಂಢರಪುಕ್ಕೆ ಹೋಗುತ್ತಾರೆ.

**ಸಂತ ಏಕನಾಥ :** ಸಂತ ನಾಮದೇವ ಮತ್ತು ಸಂತ ಜ್ಞಾನೇಶ್ವರ ಇವರ ಕಾರ್ಯದ ಪರಂಪರೆಯನ್ನು ಸಂತ ಏಕನಾಥರು ಮುಂದೆ ನಡೆಸಿಕೊಂಡು ಹೋದರು. ಅವರು ಪೈಠಣದಲ್ಲಿ ವಾಸಿಸುತ್ತಿದ್ದರು. ಅವರು ಭಕ್ತಿ ಮಾರ್ಗದ ಪ್ರಸಾರ ಮಾಡಿದರು. ಅವರು ಅನೇಕ ಅಭಂಗಗಳನ್ನು, ಓವಿಗಳನ್ನು ಮತ್ತು ಭಾರೂಡ್ ಗಳನ್ನು ಬರೆದರು. ಯಾವುದೇ ತರದ ಉಚ್ಚ-ನೀಚ ಭೇದಭಾವ ಮಾಡಬೇಡಿರಿ ಎಂದು ಅವರು ಜನರಿಗೆ ಉಪದೇಶ ಮಾಡಿದರು. ಭಕ್ತಿಯ ಹಿರಿಮೆಯನ್ನು ಅವರು ಜನರಿಗೆ ತಿಳಿಸಿ ಹೇಳಿದರು. ಬಡಬಗ್ಗರನ್ನು, ಹಿಂದುಳಿದ ಜನರನ್ನು ಅವರು ಪ್ರೀತಿಯಿಂದ ಕಂಡರು. ಅಷ್ಟೇ ಅಲ್ಲ, ಮೂಕ ಪ್ರಾಣಿಗಳ ಮೇಲೂ ಅವರು ದಯೆ ತೋರಿದರು. ಪ್ರಾಣಿಗಳ ಮೇಲೆ ದಯೆ ತೋರಿರಿ ಎಂದು ಜನರಿಗೆ ಉಪದೇಶ ಮಾಡಿದರು. ಸಂತ ಏಕನಾಥರು ನುಡಿದಂತೆ ನಡೆಯುತ್ತಿದ್ದರು.



ಸಂತ ಏಕನಾಥ

ಒಂದು ದಿನ ಅವರು ಗೋದಾವರಿ ನದಿಗೆ ಸ್ನಾನ ಮಾಡಲು ಹೊರಟಿದ್ದರು. ಮಧ್ಯಾಹ್ನದ ಸಮಯ ರಣರಣ ಬಿಸಿಲು, ಮರಳು ಬಹಳ ಕಾಯ್ದಿತ್ತು. ಆ ಕಾಯ್ದ ಮರಳಿನ ಮೇಲೆ ಒಂದು ಅನಾಥ ಮಗು ಅಳುತ್ತಾ ಕುಳಿತಿತ್ತು. ಅದರ ಅಳುವಿನ ಧ್ವನಿ ಏಕನಾಥರ ಕಿವಿಯ ಮೇಲೆ ಬಿತ್ತು. ಅವರು ಆ ಮಗುವಿನ ತಂದೆ ತಾಯಿ ಹತ್ತಿರದಲ್ಲಿ ಇದ್ದಾರೆಯೋ ಎಂದು ಅತ್ತ ಇತ್ತ ನೋಡಿದರು. ಓಡುತ್ತ ಆ ಮಗುವಿನ ಹತ್ತಿರ ಹೋದರು. ಆ ಮಗುವನ್ನು ಎತ್ತಿ ಕಂಕುಳಲ್ಲಿ ಇರಿಸಿದರು. ಅದರ ಕಣ್ಣನ್ನು ಒರೆಸಿದರು. ಆ ಮಗುವನ್ನು ಅವರ ಮನೆಗೆ ತಲುಪಿಸಿದರು.

ಈ ರೀತಿ ತಮ್ಮ ಸ್ವಂತದ ನಡತೆಯಿಂದ ಏಕನಾಥರು ಸಮತೆಯ ಮತ್ತು ಮಮತೆಯ ಭಾವನೆಯನ್ನು ಜನರ ಮನಸ್ಸಿನಲ್ಲಿ ಮೂಡಿಸಿದರು.

**ಸಂತ ತುಕಾರಾಮ :** ಶಿವಾಜಿ ಮಹಾರಾಜರ ಕಾಲದಲ್ಲಿ ತುಕಾರಾಮ ಮತ್ತು ರಾಮದಾಸರೆಂಬ ಸಂತರು ಆಗಿಹೋದರು. ಸಂತ ತುಕಾರಾಮರು ಪುಣೆಯ ಹತ್ತಿರದ




ಸಂತ ತುಕಾರಾಮ

ದೇಹೂ ಎಂಬ ಊರಿನವರಾಗಿದ್ದರು. ಅವರ ಮನೆಯಲ್ಲಿ ಬೇಸಾಯವಿತ್ತು. ಅವರ ಕಿರಾಣಿ ಅಂಗಡಿಯೂ ಇತ್ತು. ಅವರ ಪೂರ್ವಜರು ಅಡಚಣೆಯಲ್ಲಿರುವವರಿಗೆ ಸಾಲ ನೀಡುತ್ತಿದ್ದರು; ತುಕಾರಾಮರು ತಮ್ಮ ಪಾಲಿಗೆ ಬಂದ ಸಾಲಪತ್ರಗಳನ್ನು ಇಂದ್ರಾಯಣಿ ನದಿಯಲ್ಲಿ ಮುಳುಗಿಸಿದರು ಮತ್ತು ಅನೇಕರನ್ನು ಸಾಲಮುಕ್ತರನ್ನಾಗಿ ಮಾಡಿದರು. ಹತ್ತಿರದ ಗುಡ್ಡದ ಮೇಲೆ ಹೋಗಿ ಅವರು ವಿಠ್ಠಲನ ಭಜನೆ ಮಾಡುತ್ತಿದ್ದರು. ಆಷಾಢ-ಕಾರ್ತಿಕ ಮಾಸಗಳಲ್ಲಿ ಪಂಢರಪುರಕ್ಕೆ ಹೋಗುತ್ತಿದ್ದರು. ಕೀರ್ತನೆ ಮಾಡುತ್ತಿದ್ದರು, ಅಭಂಗಗಳನ್ನು ರಚಿಸುತ್ತಿದ್ದರು. ಅವುಗಳನ್ನು ಜನರಿಗೆ ಹಾಡಿ ತೋರಿಸುತ್ತಿದ್ದರು. ಸಾವಿರಾರು ಜನರು ಅವರ ಕೀರ್ತನೆಗೆ ಬರುತ್ತಿದ್ದರು. ಶಿವರಾಯರೂ ಕೂಡ ಅವರ ಕೀರ್ತನೆ ಕೇಳಲು ಹೋಗುತ್ತಿದ್ದರು. ಸಂತ ತುಕಾರಾಮರು ಜನರಿಗೆ ದಯೆ, ಕ್ಷಮೆ, ಶಾಂತಿ ಇವುಗಳನ್ನು ಬೋಧಿಸುತ್ತಿದ್ದರು. ಸಮತೆಯ ಉಪದೇಶ ಮಾಡುತ್ತಿದ್ದರು.

'ಜೆ ಕಾ ರಂಜಲೆ ಗಾಂಜಲೆ। ತ್ಯಾಂಸಿ ಮ್ಹಣೆ ಜೋ ಆಪುಲೆ
ತೋಚಿ ಸಾಧು ಓಳಖಾವಾ। ದೇವ ತೇಥೆಚಿ ಜಾಣಾವಾ।'

(ಪೀಡಿತರನ್ನು ಮತ್ತು ದುಃಖಿತರನ್ನು ತನ್ನವರೆಂದು ಭಾವಿಸುವವನಿಗೆ ಸಾಧು ಎಂದು ತಿಳಿಯಬೇಕು. ಅವರಲ್ಲಿಯೇ ದೇವರನ್ನು ಕಾಣಬೇಕು.) ಈ ಸಂದೇಶವನ್ನು ಅವರು ಜನರ ಮನಸ್ಸಿನಲ್ಲಿ ಮೂಡಿಸಿದರು. ಅವರ ಮನಸ್ಸಿನಲ್ಲಿ ವಿಚಾರಗಳನ್ನು ಜಾಗೃತಗೊಳಿಸಿದರು. ಜನರು ತುಕಾರಾಮರ ಜಯಜಯಕಾರ ಮಾಡತೊಡಗಿದರು. ಇಂದಿಗೂ ಮಹಾರಾಷ್ಟ್ರದ ತುಂಬೆಲ್ಲಾ ನಮಗೆ 'ಗ್ಯಾನಬಾ-ತುಕಾರಾಮ' ಎಂಬ ಜಯಘೋಷ ಕೇಳಿ ಬರುತ್ತದೆ. ಜ್ಞಾನೇಶ್ವರರಿಗೆ 'ಗ್ಯಾನಬಾ' ಎಂದು ಕರೆಯುತ್ತಾರೆ. 'ತುಕಾರಾಮ ಗಾಥಾ'ವನ್ನು ಇಂದಿಗೂ ಮನೆಮನೆಗಳಲ್ಲಿ ಓದಲಾಗುತ್ತದೆ.

**ಸಮರ್ಥ ರಾಮದಾಸ :** ಅದೇ ಕಾಲದಲ್ಲಿ ಮಹಾರಾಷ್ಟ್ರದ ಗಿರಿಕಂದರಗಳಲ್ಲಿ 'ಜಯ ಜಯ ರಘುವೀರ ಸಮರ್ಥ' ಎಂಬ ರಾಮದಾಸರ ಘೋಷಣೆ ಪ್ರತಿಧ್ವನಿಸುತ್ತಿತ್ತು. ಅವರ ಜನ್ಮವು ಮರಾಠವಾಡಾದಲ್ಲಿ ಗೋದಾವರಿ ನದೀ ತೀರದ ಜಾಂಬ ಎಂಬ ಊರಿನಲ್ಲಿ ರಾಮನವಮಿಯ ದಿನ ಆಯಿತು. ರಾಮದಾಸರ ಮೂಲ ಹೆಸರು ನಾರಾಯಣ, ಆದರೆ ಅವರು ತಮ್ಮನ್ನು ತಾವೇ



**ಸಮರ್ಥ ರಾಮದಾಸ**

'ರಾಮನ ದಾಸ' ಎಂದು ಹೇಳಿಕೊಳ್ಳತೊಡಗಿದರು. 'ದಾಸಬೋಧ' ಎಂಬ ತಮ್ಮ ಗ್ರಂಥದ ಮೂಲಕ ಅವರು ಜನರಿಗೆ ಅಮೂಲ್ಯ ಉಪದೇಶ ಮಾಡಿದರು. ಹಾಗೆಯೇ ಅವರು ತಮ್ಮ 'ಮನಾಚೆ ಶ್ಲೋಕ'ಗಳಿಂದ ಜನರಿಗೆ ಒಳ್ಳೆಯ ವಿಚಾರ ಮತ್ತು ಒಳ್ಳೆಯ ನಡತೆಯ ಉಪದೇಶ ಮಾಡಿದರು. ಶಕ್ತಿಯ ಉಪಾಸನೆಗಾಗಿ ಅವರು ಅಲ್ಲಲ್ಲಿ ಹನುಮಾನನ ಮಂದಿರಗಳನ್ನು ಕಟ್ಟಿದರು. ಜನರಿಗೆ ಶಕ್ತಿಯ ಆರಾಧನೆ ಮಾಡಲು ಕಲಿಸಿದರು. 'ಸಾಮರ್ಥ್ಯ ಆಹೆ ಚಳವಳೀಚೆ, ಜೋ ಜೋ ಕರೀಲ ತಯಾಚೆ' ಎಂಬ ಸಂದೇಶವನ್ನು ಅವರು ಜನರಿಗೆ ನೀಡಿದರು. ತಮ್ಮ ಸಂದೇಶಗಳ ಮುಖಾಂತರ ಅವರು ಜನರಿಗೆ ಸಂಘಟನೆ ರಚಿಸಲು ಮತ್ತು ಅನ್ಯಾಯದ ವಿರುದ್ಧ ಹೋರಾಡಲು ಸ್ಫೂರ್ತಿ ನೀಡಿದರು. ಅದರಿಂದ ಆ ಕಾಲದ ಜನರಲ್ಲಿ ಧೈರ್ಯ ಬಂತು.

ಸಾಧು ಸಂತರ ಕಾರ್ಯದಿಂದ ಜನಜಾಗೃತಿ ಆಯಿತು. ಧರ್ಮದ ಬಗ್ಗೆ ಜನರಲ್ಲಿ ಗೌರವ ಹೆಚ್ಚಿತು. ಜನರ ಮನಸ್ಸಿನಲ್ಲಿ ಆತ್ಮವಿಶ್ವಾಸ ನಿರ್ಮಾಣವಾಯಿತು. ಶಿವರಾಯರು ಸಂತರ ಕಾರ್ಯದ ಉಪಯೋಗವನ್ನು ಸ್ವರಾಜ್ಯ ಸ್ಥಾಪನೆಗಾಗಿ ಮಾಡಿಕೊಂಡರು.

## ಅಭ್ಯಾಸ

**೧. ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಶಬ್ದವನ್ನು ಬರೆಯಿರಿ.**

(ಅ) ಸಂತ ನಾಮದೇವರು ............ ನಿಸ್ಸೀಮ ಭಕ್ತರಾಗಿದ್ದರು.

(ಆ) ಜ್ಞಾನೇಶ್ವರರು ತರುಣ ವಯಸ್ಸಿನಲ್ಲಿ ಪುಣೆಯ ಹತ್ತಿರ ........... ಎಂಬಲ್ಲಿ ಜೀವಂತ ಸಮಾಧಿಯನ್ನು ಹೊಂದಿದರು.

(ಇ) ಸಂತ ತುಕಾರಾಮರು ತಮ್ಮ ಪಾಲಿಗೆ ಬಂದ ಸಾಲಪತ್ರಗಳನ್ನು ............. ನದಿಯಲ್ಲಿ ಮುಳುಗಿಸಿದರು.

(ಈ) ಸಮರ್ಥ ರಾಮದಾಸರು ಶಕ್ತಿಯ ಉಪಾಸನೆಗಾಗಿ ಅಲ್ಲಲ್ಲಿ............ ಮಂದಿರಗಳನ್ನು ಕಟ್ಟಿದರು.

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಶ್ರೀ ಚಕ್ರಧರ ಸ್ವಾಮಿಯವರಿಗೆ ಯಾವ ಭೇದಭಾವಗಳು ಒಪ್ಪಿಗೆ ಇರಲಿಲ್ಲ ?

(ಆ) ಸಂತ ನಾಮದೇವರು ಜನರ ಮನದಲ್ಲಿ ಯಾವ ನಿರ್ಧಾರವನ್ನು ಹುಟ್ಟಿಸಿದರು ?

(ಇ) ಸಂತ ಏಕನಾಥರು ಜನರಿಗೆ ಯಾವ ಉಪದೇಶ ಮಾಡಿದರು ?

(ಈ) ಸಮರ್ಥ ರಾಮದಾಸರು ಯಾವ ಸಂದೇಶ ನೀಡಿದರು ?

**೩. ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

(ಅ) ಸಂತ ಜ್ಞಾನೇಶ್ವರರು ಗುಡಿಸಲಿನ ಬಾಗಿಲನ್ನು ಮುಚ್ಚಿಕೊಂಡು ಏಕೆ ಕುಳಿತರು ?

(ಆ) ಸಂತ ತುಕಾರಾಮರು ಜನರ ಮನಸ್ಸಿನ ಮೇಲೆ ಯಾವ ಸಂದೇಶ ಬಿಂಬಿಸಿದರು ?

**ಉಪಕ್ರಮ**

ಪಾಠದಲ್ಲಿ ಬಂದ ಸಂತರನ್ನು ಬಿಟ್ಟು ಇತರ ಸಂತರ ಚಿತ್ರಗಳನ್ನು ಸಂಗ್ರಹಿಸಿ ಅವುಗಳ ಕೆಳಗೆ ಅವರ ವಿಚಾರಗಳನ್ನು ಬರೆಯಿರಿ.

8JR057

# ೩. ಮರಾಠಾ ಸರದಾರರು – ಭೋಸಲೆಯವರ ದಕ್ಷ ಮನೆತನ

**ಗಲಭೆಯ ಕಾಲ :** ಸಂತರು ಜನರ ಮನಸ್ಸಿನಲ್ಲಿ ಭಕ್ತಿ ಭಾವವನ್ನು ಉಂಟುಮಾಡಿದರು. ಹಾಗೆಯೇ, ಶೂರ ಮರಾಠಾ ಸರದಾರರು ಮಹಾರಾಷ್ಟ್ರದಲ್ಲಿ ಶೌರ್ಯದ ಪರಂಪರೆಯನ್ನು ನಿರ್ಮಿಸಿದರು.

ಆ ಕಾಲವೇ ಬಹಳ ಗಲಭೆಯದಾಗಿತ್ತು. ವಿಜಾಪುರದ ಆದಿಲಶಾಹ ಮತ್ತು ಅಹಮದನಗರದ ನಿಜಾಮಶಾಹ ಈ ಸುಲ್ತಾನರ ನಡುವ ಮಹಾರಾಷ್ಟ್ರದಲ್ಲಿ ಯಾವಾಗಲೂ ಯುದ್ಧಗಳಾಗುತ್ತಿದ್ದವು. ಯುದ್ಧದ ಸಲುವಾಗಿ ಅವರಿಗೆ ಸೈನ್ಯದ ಅವಶ್ಯಕತೆ ಇತ್ತು. ಈ ಕೆಲಸದಲ್ಲಿ ಅವರು ಮರಾಠಾ ಸರದಾರರ ಉಪಯೋಗ ಮಾಡಿಕೊಳ್ಳುತ್ತಿದ್ದರು.

**ಶೂರ ಮರಾಠಾ ಸರದಾರರು :** ಮರಾಠರು ಕಷ್ಟ ಸಹಿಷ್ಣುಗಳೂ, ಶೂರರೂ ಆಗಿದ್ದರು. ಹಾಗೆಯೇ ಅವರು ಧೈರ್ಯಶಾಲಿಗಳೂ, ಸ್ವಾಮಿನಿಷ್ಠೆಯುಳ್ಳವರೂ ಆಗಿದ್ದರು. ಯುದ್ಧದಲ್ಲಿ ಅಪ್ರತಿಮ ಪರಾಕ್ರಮಗಳನ್ನು ತೋರಿಸಲು ಅವರಿಗೆ ಬಹಳ ಅಭಿಮಾನವೆನಿಸುತ್ತಿತ್ತು. ಕೈಯಲ್ಲಿ ಭಲ್ಲೆ, ಸೊಂಟದಲ್ಲಿ ಖಡ್ಗವುಳ್ಳ ಶೂರ ಮರಾಠಾ ಸೈನಿಕರು, ಕುದುರೆಯ ಮೇಲೆ ಸವಾರರಾಗಿ ತಮ್ಮ ಸರದಾರರ ಸೈನ್ಯದಲ್ಲಿ ಬಂದು ಸೇರುತ್ತಿದ್ದರು. ಮರಾಠಾ ಸರದಾರರು ಸೈನ್ಯ ಸಮೇತರಾಗಿ ಇರುತ್ತಿದ್ದರು. ಯಾವುದೇ ಮರಾಠಾ ಸರದಾರರು ಸೈನ್ಯ ಸಮೇತ ಸುಲತಾನಾದ ಕಡೆಗೆ ಹೋದನೆಂದರೆ ಸುಲ್ತಾನನು ಅವನನ್ನು ತನ್ನ ಸೇವೆಯಲ್ಲಿಟ್ಟುಕೊಳ್ಳುತ್ತಿದ್ದನು. ಅವನಿಗೆ ಸರದಾರನನ್ನಾಗಿ ಮಾಡುತ್ತಿದ್ದನು. ಕೆಲವೊಮ್ಮೆ ಜಹಗೀರು ಕೊಡುತ್ತಿದ್ದನು. ಜಹಗೀರು ಪಡೆದ ಸರದಾರರು ತಮ್ಮನ್ನು ತಾವೇ ಜಹಗೀರುಗಳ ರಾಜರೆಂದು ತಿಳಿಯುತ್ತಿದ್ದರು.

ವಿಜಾಪುರ ಮತ್ತು ಅಹಮದನಗರದ ಸುಲ್ತಾನರ ಆಶ್ರಯದಲ್ಲಿ ಅನೇಕ ದೊಡ್ಡ ದೊಡ್ಡ ಮರಾಠಾ ಸರದಾರರಿದ್ದರು. ಅವರಲ್ಲಿ ಸಿಂದಖೇಡದ ಜಾಧವರು, ಫಲಟಣದ ನಿಂಬಾಳಕರರು, ಮುಧೋಳದ ಘೋರಪಡೆಯವರು, ಜಾವಳಿಯ ಮೋರೆಯವರು, ಎಲ್ಲೋರಾದ ಭೋಸಲೆಯವರು ಪ್ರಮುಖರಾಗಿದ್ದರು ಸಿಂದಖೇಡದ ಜಾಧವರು ದೇವಗಿರಿಯ ಯಾದವರ ವಂಶದವರು. ಶಿವರಾಯರ ಮಾತೋಶ್ರೀಯವರಾದ ಜಿಜಾಬಾಯಿಯವರು ಸಿಂದಖೇಡದ ಲಖುಜಿ ಜಾಧವರ ಕನ್ಯೆಯಾಗಿದ್ದರು.

**ಶೌರ್ಯದ ಪರಂಪರೆ :** ಈ ಎಲ್ಲಾ ಸರದಾರರು ಶೂರರು ಮತ್ತು ವೀರರಾಗಿದ್ದರು. ಆದರೆ ಅವರಲ್ಲಿಯ ಅನೇಕರಲ್ಲಿ ಪರಸ್ಪರ ಕಡು ವೈರತ್ವವಿತ್ತು. ತಮ್ಮ ಜನರಿಗಾಗಿ ಒಟ್ಟುಗೂಡಿ ಏನಾದರೂ ಮಾಡಬೇಕು ಎಂಬ ವಿಚಾರ ಅವರಲ್ಲಿ ಇರಲಿಲ್ಲ. ಆದ್ದರಿಂದ ಆ ಕಾಲದಲ್ಲಿ ಅವರ ಶೌರ್ಯದ ಉಪಯೋಗವು ಪರಕೀಯರಿಗೆ ಆಗುತ್ತಿತ್ತು. ಆದರೆ ಹೀಗಿದ್ದರೂ ಮಹಾರಾಷ್ಟ್ರದಲ್ಲಿಯ ಸಾವಿರಾರು ತರುಣರಿಗೆ ಅವರು ಪರಾಕ್ರಮದಲ್ಲಿ ಅಭಿರುಚಿಯನ್ನು ಉಂಟುಮಾಡಿದರು. ಅವರು ಅನೇಕ ಪರಾಕ್ರಮಿ ವೀರರನ್ನು ನಿರ್ಮಾಣ ಮಾಡಿದರು. ಮರಾಠಾ ಸರದಾರರು ಮಹಾರಾಷ್ಟ್ರದಲ್ಲಿ ಶೌರ್ಯವನ್ನು ಜೀವಂತವಾಗಿರಿಸಿದರು. ಮಹಾರಾಷ್ಟ್ರದ ಶೂರ ಮನೆತನಗಳಲ್ಲಿ ಎಲ್ಲೋರಾದ ಭೋಸಲೆ ಮನೆತನ ಬಹು ಪರಾಕ್ರಮಿ ಎಂದು ಹೆಸರಾಯಿತು.

**ಘೃಷ್ಣೇಶ್ವರ ಮಂದಿರ :** ಸುಮಾರು ನಾಲ್ಕುನೂರು ವರ್ಷಗಳ ಹಿಂದಿನ ಸಂಗತಿ. ಎಲ್ಲೋರಾದ ಗುಹೆಗಳ ಹತ್ತಿರದ ಘೃಷ್ಣೇಶ್ವರನ ಸುಂದರವಾದ ಮಂದಿರವು ಜೀರ್ಣವಾಗಿತ್ತು. ಅದರ ಗೋಡೆಗಳು ಬಿರುಕು ಬಿಟ್ಟಿದ್ದವು. ಮಂದಿರದ ಪೂಜಾರಿಯೂ ಮಂದಿರವನ್ನು ಬಿಟ್ಟು ಹೊರಟು ಹೋಗಿದ್ದನು. ಎಷ್ಟೊಂದು ಮಹಾನ್ ದೇವರು ! ಆದರೆ ಆ ಮಂದಿರಕ್ಕೆ ಎಂತಹ ದುರವಸ್ಥೆ ಬಂದಿತ್ತು. ಆ ಮಂದಿರದ ಕಡೆಗೆ ನೋಡಿ ಭಕ್ತರಿಗೆ ತುಂಬ ಖೇದವೆನಿಸುತ್ತಿತ್ತು. ಬರುವ ಮತ್ತು ಹೋಗುವವರೂ ದುಃಖ ಪಡುತ್ತಿದ್ದರು. ನಿಟ್ಟುಸಿರು ಬಿಡುತ್ತಿದ್ದರು. ಆದರೆ ಅದರ ಜೀರ್ಣೋದ್ಧಾರದ ವಿಚಾರವನ್ನು ಯಾರು ಮಾಡುತ್ತಾರೆ ?

ಆ ಹಾಳುಬಿದ್ದ ಮಂದಿರಕ್ಕೆ ಒಬ್ಬ ಶಿವಭಕ್ತನು ನಿತ್ಯ ನಿಯಮದಿಂದ ಬರುತ್ತಿದ್ದನು. ಶಿವಲಿಂಗದ ಮೇಲೆ ಬಿಲ್ವಪತ್ರಿಯನ್ನು ಅರ್ಪಿಸುತ್ತಿದ್ದನು. ಕೈ ಜೋಡಿಸಿ ತನ್ನ ಮನಸ್ಸಿನಲ್ಲಿದ್ದುದನ್ನು ಶ್ರೀ ಶಿವನಿಗೆ ಹೇಳುತ್ತಿದ್ದನು. ಒಂದು ದಿನ ಅವನು ಆಳುಗಳನ್ನು ಕರೆದುಕೊಂಡು ಬಂದನು. ಮಂದಿರದ ಹಾಳುಬಿದ್ದ ಗೋಡೆಗಳನ್ನು ಸರಿಪಡಿಸಿದನು. ಮಂದಿರಕ್ಕೆ ಬೇಕಾಗುವ ಎಲ್ಲಾ ವ್ಯವಸ್ಥೆ ಮಾಡಿದನು.



ಶಹಾಜೀರಾಜೇ

ಘೃಷ್ಣೇಶ್ವರ ಮಂದಿರದ ಜೀರ್ಣೋದ್ದಾರ ಮಾಡಿದನು. ಮಂದಿರದ ಒಳಗೆ ಹಾಗೂ ಹೊರಗೆ ದೀಪ ಹಚ್ಚಿದನು. ಘೃಷ್ಣೇಶ್ವರನ ಗತವೈಭವ ಮರುಕಳಿಸಿತು. ಇದನ್ನು ಯಾರು ಮಾಡಿದರು ? ಈ ಶಿವಭಕ್ತರು ಯಾರು ? ಅವರು ಮಾಲೋಜಿ ರಾಜೇ ಭೋಸಲೆಯವರಾಗಿದ್ದರು.

**ಎಲ್ಲೋರಾದ ಭೋಸಲೆ :** ಎಲ್ಲೋರಾ ಊರಿನ ಪಾಟೀಲ ಮಾಲೋಜಿ ರಾಜೇ ಭೋಸಲೆಯವರು ದೊಡ್ಡ ಶಿವಭಕ್ತರಾಗಿದ್ದರು. ವಿಠೋಜಿರಾಜೇ ಅವರ ತಮ್ಮ ಇವರು. ಎಲ್ಲೋರಾದ ಬಾಬಾಜಿರಾಜೇ ಭೋಸಲೆಯವರ ಮಕ್ಕಳು. ಬಾಬಾಜಿರಾಜೇ ಭೋಸಲೆಯವರು ಎಲ್ಲೋರಾ ಊರಿನ ಪಾಟೀಲರಾಗಿದ್ದರು.

ಮಾಲೋಜಿರಾಜೇ ಮತ್ತು ವಿಠೋಜಿರಾಜೇ ಅತ್ಯಂತ ದಕ್ಷರಾಗಿದ್ದರು. ಅದರಂತೆ ಅವರು ಶೂರರೂ ಆಗಿದ್ದರು. ಅವರ ಆಶ್ರಯದಲ್ಲಿ ಅನೇಕ ಸಶಸ್ತ್ರ ಮರಾಠಾ ಸೈನಿಕರಿದ್ದರು. ಆಗಿನ ಕಾಲವು ಬಹಳ ಗಲಭೆಯದಾಗಿತ್ತು. ನಿಜಾಮಶಾಹಿಯ ಮೇಲೆ ಉತ್ತರದ ಮುಘಲ ಬಾದಶಾಹನು ದಾಳಿ ಮಾಡಿದ್ದನು. ಆ ಕಾಲದಲ್ಲಿ ದೌಲತಾಬಾದವು ನಿಜಾಮಶಾಹನ ರಾಜಧಾನಿಯಾಗಿತ್ತು. ಅಲ್ಲಿ ಮಲಿಕ ಅಂಬರ ಎಂಬವನು ಅವನ ವಜೀರನಾಗಿದ್ದನು. ಅವನು ದಕ್ಷ ಹಾಗೂ ಬುದ್ಧಿವಂತನಾಗಿದ್ದನು. ಅವನು ದೌಲತಾಬಾದ ಹತ್ತಿರದ ಎಲ್ಲೋರಾದ ಭೋಸಲೆ ಬಂಧುಗಳ ಕರ್ತವ್ಯ ದಕ್ಷತೆಯನ್ನು ನೋಡಿದನು. ಅವನು ನಿಜಾಮಶಾಹನಲ್ಲಿ ಅವರ ಕರ್ತವ್ಯ ನಿಷ್ಠೆಯನ್ನು ಹೊಗಳಿದನು. ನಿಜಾಮಶಾಹನು ಮಾಲೋಜಿರಾಜರಿಗೆ ಪುಣೆ ಮತ್ತು ಸುಪೆ ಪ್ರಾಂತಗಳನ್ನು ಜಹಗೀರು ಎಂದು ಕೊಟ್ಟನು.

ಭೋಸಲೆಯವರ ಮನೆಯಲ್ಲಿ ವೈಭವ ಬಂದಿತು. ಉಮಾಬಾಯಿ ಮಾಲೋಜಿರಾಜರ ಪತ್ನಿ. ಅವಳು ಫಲಟಣದ ನಿಂಬಾಳಕರ ಮನೆತನದವಳು. ಈ ದಂಪತಿಗಳಿಗೆ ಇಬ್ಬರು ಮಕ್ಕಳಿದ್ದರು. ಒಬ್ಬನ ಹೆಸರು ಶಹಾಜಿ ಮತ್ತು ಇನ್ನೊಬ್ಬನ ಹೆಸರು ಶರೀಫಜಿ. ಶಹಾಜಿರಾಜೇ ಐದು ವರ್ಷದವರಿದ್ದಾಗ ಮಾಲೋಜಿರಾಜೇ ಇಂದಾಪುರ ಯುದ್ಧದಲ್ಲಿ ಕೊಲ್ಲಲ್ಪಟ್ಟರು. ವಿಠೋಜಿರಾಜೇ ತನ್ನ ಅಣ್ಣನ ಮಕ್ಕಳನ್ನು ಮತ್ತು ಜಹಗೀರನ್ನು ಕಾಪಾಡಿದನು. ಅನಂತರ ಅವನು ಶಹಾಜಿಯ ಸಲುವಾಗಿ ಲಖುಜಿರಾವ ಜಾಧವರ ಮಗಳನ್ನು ಕೇಳಿದನು. ಜಾಧವರ ಮಗಳಾದ ಜಿಜಾಬಯಿಯು ಒಳ್ಳೆಯ ರೂಪವತಿಯಾಗಿದ್ದಳು. ಜಿಜಾಬಾಯಿ ಸಲುವಾಗಿ ವಿಠೋಜಿರಾಜೇ ಮಾಡಿದ ಬೇಡಿಕೆಯನ್ನು ಲಖುಜಿರಾವ ಸ್ವೀಕರಿಸಿದರು. ಲಖುಜಿರಾವ ನಿಜಾಮ ಶಾಹಿಯಲ್ಲಿಯ ಒಬ್ಬ ಶೂರ ಮತ್ತು ಪರಾಕ್ರಮಿ ಸರದಾರರಾಗಿದ್ದರು. ಅವರ ಕಡೆಗೆ ದೊಡ್ಡ ಸೈನ್ಯದಳವಿತ್ತು. ನಿಜಾಮಶಾಹನ ಆಸ್ಥಾನದಲ್ಲಿ ಅವರಿಗೆ ಬಹುದೊಡ್ಡ ಪ್ರತಿಷ್ಠೆ ಇತ್ತು. ಅವರು ಶಹಾಜಿರಾಜೇ ಮತ್ತು ಜಿಜಾಬಾಯಿ ಇವರ ವಿವಾಹವನ್ನು ಅದ್ದೂರಿಯಿಂದ ಮಾಡಿದರು. ಜಿಜಾಬಾಯಿಯು ಭೋಸಲೆ ಕುಲದ ಲಕ್ಷ್ಮೀಯಾದಳು.

**ಶಹಾಜಿರಾಜೇ:** ನಿಜಾಮಶಾಹನು ಮಾಲೋಜಿರಾಜರ ಜಹಗೀರನ್ನು ಶಹಾಜಿರಾಜರಿಗೆ ಕೊಟ್ಟನು. ಶಹಾಜಿರಾಜೇ ಬಹಳ ಪರಾಕ್ರಮಿಯಾಗಿದ್ದರು. ನಿಜಾಮಶಾಹನ ಆಸ್ಥಾನದಲ್ಲಿ ಅವರಿಗೆ ತುಂಬ ಗೌರವ ಇತ್ತು. ಮುಘಲ ಬಾದಶಾಹನು ನಿಜಾಮಶಾಹಿಯನ್ನು ಗೆಲ್ಲಬೇಕೆಂದು ನಿಶ್ಚಯಿಸಿದನು. ವಿಜಾಪುರದ ಆದಿಲಶಾಹನೂ ಅವನನ್ನು ಕೂಡಿಕೊಂಡನು. ಆಗ ನಿಜಾಮಶಾಹಿಯನ್ನು ರಕ್ಷಿಸಲು ಮಲಿಕ ಅಂಬರ ಮತ್ತು ಶಹಾಜಿರಾಜೇ ಇವರಿಬ್ಬರೂ ಬಹಳ ಧೈರ್ಯದಿಂದ ಹೋರಾಡಿದರು. ಎರಡೂ ಸೈನ್ಯಗಳನ್ನು ಅವರು ಸೋಲಿಸಿದರು. ಅಹಮದ ನಗರದ ಹತ್ತಿರ ಭಾತವಡಿಯಲ್ಲಿ ಈ ಪ್ರಸಿದ್ಧ ಯುದ್ಧ ಸಂಭವಿಸಿತು. ಈ ಯುದ್ಧದಲ್ಲಿ ಶರೀಫಜೀಯವರು ಕೊಲ್ಲಲ್ಪಟ್ಟರು, ಆದರೆ ಶಹಾಜಿರಾಜೇ ಇವರು ಅಪ್ರತಿಮ ಪರಾಕ್ರಮ ತೋರಿಸಿದರು. ಆದ್ದರಿಂದ ಶೂರ ಸೇನಾನಿ ಎಂದು ಎಲ್ಲ ಕಡೆಗೂ ಅವರು ವಿಖ್ಯಾತರಾದರು. ಆಸ್ಥಾನದಲ್ಲಿ ಅವರ ಪ್ರತಿಷ್ಠೆ ಹೆಚ್ಚಾಯಿತು. ಇದರಿಂದ ಸ್ವತಃ ಮಲಿಕ ಅಂಬರನಿಗೆ ಅವರ ಬಗ್ಗೆ ಅಸೂಯೆಯಾಯಿತು. ಇದರಿಂದ ಅವರಿಬ್ಬರಲ್ಲಿ ದ್ವೇಷ ಹುಟ್ಟಿಕೊಂಡಿದ್ದರಿಂದ. ಶಹಾಜಿರಾಜೇಯವರು ನಿಜಾಮಶಾಹಿಯನ್ನು ಬಿಟ್ಟು ವಿಜಾಪುರದ ಆದಿಲಶಾಹಿಯನ್ನು ಕೂಡಿಕೊಂಡರು. ಆದಿಲಶಾಹನು ಅವರಿಗೆ 'ಸರಲಷ್ಕರ' ಎಂಬ ಪದವಿಯನ್ನು ಕೊಟ್ಟು ಅವರನ್ನು ಸನ್ಮಾನಿಸಿದನು. ಮುಂದೆ ನಿಜಾಮಶಾಹಿಯಲ್ಲಿ ಅನೇಕ ಬದಲಾವಣೆಗಳಾದವು. ವಜೀರ ಮಲೀಕ ಅಂಬರ ಮರಣ ಹೊಂದಿದನು. ಅವನ ಮಗ ಫತ್ತೇಖಾನನು ಮಹಾ ಕಪಟಿಯಾಗಿದ್ದನು. ಅವನು ಆಗ ನಿಜಾಮಶಾಹಿಯ ವಜೀರನಾದನು. ಅವನ ಕಾಲದಲ್ಲಿ ನಿಜಾಮಶಾಹಿಗೆ ಅವನತಿಯ ಕಾಲ ಆರಂಭವಾಯಿತು. ಮುಘಲರ ಆಕ್ರಮಣದ ಗಂಡಾಂತರ ನಿರ್ಮಾಣವಾಯಿತು. ಇದರಿಂದ ನಿಜಾಮಶಾಹಿಯನ್ನು ಉಳಿಸಲು ನಿಜಾಮಶಾಹನ ತಾಯಿಯು ಶಹಾಜಿರಾಜೇಯವರಿಗೆ ಮರಳಿ ಬರುವಂತೆ ವಿನಂತಿಸಿಕೊಂಡಳು. ಆಗ ಶಹಾಜಿರಾಜೇಯವರು ಆದಿಲಶಾಹಿಯನ್ನು ಬಿಟ್ಟು ನಿಜಾಮಶಾಹಿಯ ಕಡೆಗೆ ಬಂದರು.

**೧. ಬಿಟ್ಟ ಸ್ಥಳಗಳಲ್ಲಿ ಕಂಸದಲ್ಲಿಯ ಯೋಗ್ಯ ಪರ್ಯಾಯವನ್ನು ಬರೆಯಿರಿ.**

(ಅ) ಮಹಾರಾಷ್ಟ್ರದ ಶೂರ ಮನೆತನಗಳಲ್ಲಿಯ ಎಲ್ಲೋರಾದ ............ ಮನೆತನವು ಬಹುಪರಾಕ್ರಮಿ ಎಂದು ಹೆಸರಾಯಿತು.

(ಮೋರೆ, ಘೋರಪಡೆ, ಭೋಸಲೆ)

(ಆ) ಬಾಬಾಜಿರಾಜೇ ಭೋಸಲೆಯವರಿಗೆ ಮಾಲೋಜಿ ಮತ್ತು ........... ಎಂಬ ಇಬ್ಬರು ಮಕ್ಕಳಿದ್ದರು.

(ವಿಠೋಜಿ, ಶಹಾಜಿ, ಶರೀಫಜಿ)

(ಇ) ನಿಜಾಮಶಾಹರ ............ ಎಂಬವನು ಕರ್ತವ್ಯನಿಷ್ಠ ವಜೀರನಾಗಿದ್ದನು.

(ಮಲಿಕ ಅಂಬರ, ಫತ್ತೇಖಾನ, ಶರೀಫಜಿ)

**೨. ಪರಸ್ಪರ ಸಂಬಂಧವನ್ನು ಬರೆಯಿರಿ.**

(ಅ) ಮಾಲೋಜಿ ರಾಜೇ– ವಿಠೋಜಿರಾಜೇ .............

(ಆ) ಶಹಾಜಿರಾಜೇ– ಲಖುಜಿರಾವ ಜಾಧವ .............

(ಇ) ಶಹಾಜಿರಾಜೇ– ಶರೀಫಜೀ ...............

(ಈ) ಬಾಬಾಜಿರಾಜೇ– ವಿಠೋಜಿರಾಜೇ ...............

**೩. 'ಅ' ಗುಂಪು ಮತ್ತು 'ಬ' ಗುಂಪುಗಳನ್ನು ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| (ಅ) ಸಿಂದಖೇಡದ | (೧) ನಿಂಬಾಳಕರ |
| (ಆ) ಫಲಟಣದ | (೨) ಘೋರಪಡೆ |
| (ಇ) ಜಾವಳಿಯ | (೩) ಭೋಸಲೆ |
| (ಈ) ಮುಧೋಳದ | (೪) ಮೋರೆ |
| | (೫) ಜಾಧವ |

**೪. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಘೃಷ್ಣೇಶ್ವರದ ಮಂದಿರದ ಜೀರ್ಣೋದ್ಧಾರ ಯಾರು ಮಾಡಿದರು ?

(ಆ) ನಿಜಾಮಶಾಹನು ಮಾಲೋಜಿರಾಜರಿಗೆ ಯಾವ ಪ್ರಾಂತದ ಜಹಗೀರು ಕೊಟ್ಟನು ?

(ಇ) ನಿಜಾಮಶಾಹಿಯನ್ನು ರಕ್ಷಿಸುವ ಸಲುವಾಗಿ ಯಾರು ಧೈರ್ಯದಿಂದ ಹೋರಾಡಿದರು ?

(ಈ) ಆದಿಲಶಾಹನು ಶಹಾಜಿರಾಜರಿಗೆ ಯಾವ ಪದವಿಯನ್ನು ನೀಡಿದನು ?

(ಉ) ಶಹಾಜಿರಾಜೇ ಆದಿಲಶಾಹಿ ಬಿಟ್ಟು ನಿಜಾಮಶಾಹಿಗೆ ಏಕೆ ಮರಳಿ ಬಂದರು ?

**ಉಪಕ್ರಮ**

ಮಹಾರಾಷ್ಟ್ರದ ನಕಾಶೆಯಲ್ಲಿ ಅಹಮದನಗರ, ಫಲಟಣ, ಎಲ್ಲೋರಾ, ಪುಣೆ, ಸುಪೆ ಈ ಸ್ಥಳಗಳನ್ನು ತೋರಿಸಿರಿ.

**ಸೂಚನೆ :** ಇದರಲ್ಲಿಯ 'ಮರಾಠಾ' ಈ ಶಬ್ದವು 'ವಿಶಿಷ್ಟ ಜಾತಿಯ ವ್ಯಕ್ತಿ' ಎಂಬ ಅರ್ಥವುಳ್ಳದ್ದಾಗಿರದೆ 'ಮರಾಠಿ ಭಾಷೆಯನ್ನು ಮಾತನಾಡುವವರು' ಅಥವಾ 'ಮಹಾರಾಷ್ಟ್ರೀಯ' ಎಂಬ ಅರ್ಥದ್ದಾಗಿದೆ.

BK196U

# ೪. ಶಿವರಾಯರ ಬಾಲ್ಯ



**ಶಿವನೇರಿ ಕೋಟೆ ಶಿವರಾಯರ ಜನ್ಮಸ್ಥಾನ**

**ಶಿವರಾಯರ ಜನ್ಮ :** ಆ ಕಾಲವು ಬಹಳ ಗಲಭೆಯಿಂದ ಕೂಡಿತ್ತು. ಉತ್ತರ ದಿಕ್ಕಿನಿಂದ ಮುಘಲ ಬಾದಶಹ ಶಹಾಜಹಾನನು ದಖ್ಖನವನ್ನು ಗೆಲ್ಲಲು ದೊಡ್ಡ ಸೈನ್ಯವನ್ನು ಕಳಿಸಿದ್ದನು. ಶಹಾಜಿ ರಾಜರಿಗೆ ಜಹಾಗೀರಾಗಿ ದೊರೆತ ಊರು ಪುಣೆ. ವಿಜಾಪುರದ ಆದಿಲಶಾಹನು ಪುಣೆಯನ್ನು ಸಂಪೂರ್ಣ ನಾಶಗೊಳಿಸಿದ್ದನು. ಶಹಾಜಿರಾಜರು ಅಡಚಣೆಯಲ್ಲಿ ಸಿಲುಕಿದ್ದರು. ಇತ್ತ ದರಿ, ಅತ್ತ ಪುಲಿ ! ಶಹಾಜಿರಾಜರ ಪಾಲಿಗೆ ಅಲೆದಾಟದ ಆಯುಷ್ಯ ಬಂದಿತು.

ಆ ಸ್ಥಿತಿಯಲ್ಲಿ ಜಿಜಾಬಾಯಿ ಗರ್ಭಿಣಿ ಇದ್ದರು. ಈ ಗಲಾಟೆ ಮತ್ತು ಅಲೆದಾಟದಲ್ಲಿ ಅವರನ್ನು ಎಲ್ಲಿ ಇರಿಸುವುದು ಎಂಬ ಪ್ರಶ್ನೆ ನಿರ್ಮಾಣವಾಯಿತು. ಶಹಾಜಿರಾಜರಿಗೆ ಶಿವನೇರಿ ಕೋಟೆಯ ನೆನಪಾಯಿತು. ಜಿಜಾಬಾಯಿಯವರನ್ನು ಅವರು ಶಿವನೇರಿಯಲ್ಲಿ ಇರಿಸುವುದೆಂದು ನಿರ್ಧರಿಸಿದರು. ಶಿವನೇರಿ ಇದು ಪುಣೆ ಜಿಲ್ಲೆಯ ಜುನ್ನರದ ಹತ್ತಿರವಿದ್ದ ಕೋಟೆ. ಅದರ ನಾಲ್ಕೂ ಬದಿಗೆ ಕಡಿದಾದ ಗೋಪುರಗಳಿದ್ದವು. ಭದ್ರವಾದ ಗೋಡೆಗಳು ಮತ್ತು ಸುಭದ್ರವಾದ ಬಾಗಿಲುಗಳಿದ್ದವು.

ಈ ಕೋಟೆ ಬಹಳ ಭದ್ರವಾಗಿತ್ತು. ಅಲ್ಲಿ ವಿಜಯರಾಜ ಎಂಬ ಕಿಲ್ಲೇದಾರರಿದ್ದರು. ಅವರು ಭೋಸಲೆಯವರ ಸಂಬಂಧಿಕರೇ ಆಗಿದ್ದರು. ಜಿಜಾಬಾಯಿಯವರ ರಕ್ಷಣೆಯ ಜವಾಬ್ದಾರಿಯನ್ನು ಅವರು ಸ್ವೀಕರಿಸಿದರು. ಶಹಾಜಿರಾಜರು ಆಗ ಜಿಜಾಬಾಯಿಯವರನ್ನು ಶಿವನೇರಿಯಲ್ಲಿ ಇರಿಸಿದರು. ನಂತರ ಮುಘಲರನ್ನು ಎದುರಿಸಲು ಹೋದರು.


.... ಹಾಗೂ ಆ ಸುವರ್ಣ ದಿನ ಉದಯಿಸಿತು. ಫಾಲ್ಗುಣ ವದ್ಯ ತೃತೀಯಾ, ಶಕೆ ೧೫೫೧ ಅಂದರೇನೆ ಇಂಗ್ಲಿಷ ವರ್ಷದ ಪ್ರಕಾರ ೧೯ ಫೆಬ್ರುವರಿ ೧೬೩೦. ಶಿವನೇರಿಯ ನಗಾರಿಖಾನೆಯಲ್ಲಿ ಸನಾದಿ ಮುಂತಾದ ಮಂಗಲ ವಾದ್ಯಗಳು ಮೊಳಗುತ್ತಿದ್ದವು. ಇಂತಹ ಮಂಗಲಮಯ ಕ್ಷಣದಲ್ಲಿ ಜಿಜಾಬಾಯಿಯವರ ಉದರದಲ್ಲಿ ಪುತ್ರನು ಜನಿಸಿದನು. ಕೋಟೆಯಲ್ಲಿ ಆನಂದವೇ ಆನಂದವಾಯಿತು. ಮಗುವಿನ ನಾಮಕರಣವಾಯಿತು. ಶಿವನೇರಿ ಕೋಟೆಯಲ್ಲಿ ಜನನವಾದುದರಿಂದ ಮಗುವಿನ ಹೆಸರನ್ನು 'ಶಿವಾಜಿ' ಎಂದಿಟ್ಟರು.

**ಶಿವರಾಯರ ಬಾಲ್ಯ :** ಶಿವರಾಯರ ವಯಸ್ಸಿನ ಮೊದಲ ಆರು ವರ್ಷಗಳು ಅಲೆದಾಟದಲ್ಲಿಯೇ ಕಳೆದವು. ಆದರೆ ಈ ಅಲೆದಾಟದಲ್ಲಿಯೂ ಜಿಜಾಬಾಯಿಯವರು ಶಿವರಾಯರಿಗೆ ಉತ್ತಮ ಶಿಕ್ಷಣ ನೀಡಿದರು. ಅವರು ಸಂಜೆ ದೀಪ ಹಚ್ಚಿ ಬಾಲಕ ಶಿವಬಾರನ್ನು ಹತ್ತಿರ ಕರೆದು, ಪ್ರೀತಿಯಿಂದ ಅವರನ್ನು ನೇವರಿಸಿ ಅವರಿಗೆ ರಾಮನ ಮತ್ತು ಕೃಷ್ಣನ, ಭೀಮನ ಮತ್ತು ಅಭಿಮನ್ಯುವಿನ ಕತೆಗಳನ್ನು ಹೇಳುತ್ತಿದ್ದರು. ಹಾಗೆಯೇ ಆಗಾಗ ಜ್ಞಾನೇಶ್ವರ, ನಾಮದೇವ ಮತ್ತು ಏಕನಾಥರ ಅಭಂಗಗಳನ್ನು ಶಿವರಾಯರಿಗೆ ಹಾಡಿ ತೋರಿಸುತ್ತಿದ್ದರು. ಶಿವರಾಯರಿಗೆ ವೀರ ಪುರುಷರ ಕತೆ ಎಂದರೆ ತುಂಬಾ ಇಷ್ಟ. ದೊಡ್ಡವನಾದ ಮೇಲೆ ಅವರಂತೆ ಪರಾಕ್ರಮ ಮಾಡಬೇಕು ಎಂದು ಅವರಿಗೆ ಅನಿಸುತ್ತಿತ್ತು. ಜಿಜಾಬಾಯಿಯವರು ಸಾಧುಸಂತರ ಚರಿತ್ರೆಗಳಲ್ಲಿಯ ಕತೆಗಳನ್ನೂ ಅವರಿಗೆ ಹೇಳುತ್ತಿದ್ದರು. ಅದರಿಂದಲೇ ಅವರಲ್ಲಿ ಸಾಧು ಸಂತರ ಬಗ್ಗೆ ಗೌರವದ ಭಾವನೆ ನಿರ್ಮಾಣವಾಯಿತು.

ಬಡ ಮಾವಳೆಗಳ ಮಕ್ಕಳು ಶಿವರಾಯರ ಜೊತೆ ಆಡಲು ಬರುತ್ತಿದ್ದರು. ಕೆಲವೊಮ್ಮೆ ಶಿವಬಾ ಕೂಡ ಅವರ



**ವೀರಮಾತಾ ಜಿಜಾಬಾಯಿಯವರು ಶಿವರಾಯರಿಗೆ ಕತೆಗಳನ್ನು ಹೇಳುತ್ತಿರುವಾಗ**



**ಸಂಗಡಿಗರೊಂದಿಗೆ ಶಿವರಾಯರು**

ಗುಡಿಸಲಿಗೆ ಹೋಗುತ್ತಿದ್ದರು. ಅವರ ರೊಟ್ಟಿಯನ್ನು ಬಹಳ ಸಂತೋಷದಿಂದ ತಿನ್ನುತ್ತಿದ್ದರು. ಅವರೊಡನೆ ಮೋಜಿನ ಆಟಗಳನ್ನು ಆಡುತ್ತಿದ್ದರು. ಮಾವಳೆಗಳ ಮಕ್ಕಳೆಂದರೆ ಕಾಡಿನಲ್ಲಿಯ ಪಕ್ಷಿಗಳಂತೆ ! ಆ ಮಕ್ಕಳು ಗಿಳಿ, ಕೋಗಿಲೆ, ಹುಲಿ ಮೊದಲಾದವುಗಳಂತೆ ಧ್ವನಿ ತೆಗೆಯುತ್ತಿದ್ದರು. ಮಣ್ಣಿನಿಂದ ಆನೆ ಮತ್ತು ಕುದುರೆಗಳನ್ನು ಮಾಡುವುದು; ಮಣ್ಣಿನಿಂದ ಕೋಟೆ ಕಟ್ಟುವುದು ಇವೇ ಅವರ ಹವ್ಯಾಸಗಳು. ಕಣ್ಣು ಮುಚ್ಚಾಲೆ, ಬಗರಿ, ಚೆಂಡು ಇವು ಅವರ ದಿನನಿತ್ಯದ ಆಟಗಳು. ಶಿವರಾಯರು ಕೂಡ ಈ ಆಟಗಳನ್ನು ಅವರೊಡನೆ ಆಡುತ್ತಿದ್ದರು. ಮಾವಳೆಗಳ ಮಕ್ಕಳಿಗೆ ಶಿವರಾಯರೆಂದರೆ ತುಂಬ ಪ್ರೀತಿ.

**ಶಹಾಜಿರಾಜರು ಮುಘಲ ಬಾದಶಾಹಿಯ ಕಡೆಗೆ:** ಶಹಾಜಿರಾಜೆ ನಿಜಾಮಶಾಹಿಗೆ ಮರಳಿದರೇನೋ ನಿಜ, ಆದರೆ ಅಲ್ಲಿ ಅವರಿಗೆ ಸಮಾಧಾನ ದೊರೆಯಲಿಲ್ಲ, ಏಕೆಂದರೆ ಸ್ವತಃ ನಿಜಾಮಶಾಹನು ಸಿಕ್ಕವರ ಮಾತುಗಳನ್ನು ಕೇಳುವ ಹಾಗೂ ಚಂಚಲ ಸ್ವಭಾವದವನಾಗಿದ್ದನು. ಹೀಗಾಗಿ ದರಬಾರಿನಲ್ಲಿ ಕಾರಸ್ಥಾನ ಮತ್ತು ದ್ವೇಷಾಸೂಯೆಗಳು ಹೆಚ್ಚಿದ್ದವು. ಇದರಿಂದಾಗಿ ನಿಜಾಮಶಹನ ಪ್ರಚೋದನೆಯಿಂದ ತುಂಬಿದ ದರಬಾರಿನಲ್ಲಿ ಲಖುಜಿರಾವ ಜಾಧವರ ಕೊಲೆ ಮಾಡಲಾಯಿತು. ಈ ಘಟನೆಯಿಂದ ಸಂತಾಪಗೊಂಡ ಶಹಾಜಿರಾಜರು ನಿಜಾಮಶಾಹಿಯನ್ನು ತ್ಯಜಿಸಿದರು ಹಾಗೂ ಅವರು ಮುಘಲರ ಸೇವೆಯಲ್ಲಿ ಹಾಜರಾದರು. ಮುಘಲ ಬಾದಶಹ ಶಾಹಜಹಾನನು ಅವರಿಗೆ ಸರದಾರ ಪದವಿಯನ್ನು ಕೊಟ್ಟನು.

ಅದೇ ಸಮಯದಲ್ಲಿ ವಜೀರ ಫತ್ತೇಖಾನನು ಮುಘಲರೊಂದಿಗೆ ಕೈಕೂಡಿಸಿ ನಿಜಾಮಶಾಹನನ್ನೇ ಕೊಲೆ ಮಾಡಿದನು. ನಿಜಾಮಶಾಹಿಯಲ್ಲಿ ಅರಾಜಕತೆ ಉಂಟಾಯಿತು. ಫತ್ತೇಖಾನನು ಕಪಟ ಕಾರಸ್ಥಾನದಿಂದ ನಿಜಾಮಶಾಹಿಯನ್ನು ಮುಘಲರ ಕೈಗೆ ಒಪ್ಪಿಸುವನೆಂಬುದು ಸ್ಪಷ್ಟವಾಯಿತು. ಇದಿಷ್ಟೇ ಅಲ್ಲದೆ

ಆದಕ್ಕೆ ಬಹುಮಾನವೆಂದು ಶಹಾಜಿರಾಜರ ವಶದಲ್ಲಿರುವ ಪ್ರದೇಶಗಳನ್ನು ಮುಘಲರು ಅವನಿಗೆ ಪರಸ್ಪರವಾಗಿ ಕೊಟ್ಟುಬಿಟ್ಟರು. ಆಗ ಶಹಾಜಿರಾಜರು ಸಂತಾಪಗೊಂಡು ಮುಘಲರ ಪಕ್ಷವನ್ನು ತ್ಯಜಿಸಿದರು ಹಾಗೂ ಅವರು ತಮ್ಮ ಸಾಮರ್ಥ್ಯದ ಬಲದಿಂದ ಮುಘಲರಿಗೆ ಒಳ್ಳೆಯ ಪಾಠ ಕಲಿಸುವ ನಿರ್ಧಾರ ಮಾಡಿದರು.

**ಹೊಸ ನಿಜಾಮಶಾಹಿಯ ಸ್ಥಾಪನೆ :** ವಜೀರ ಫತ್ತೇಖಾನನಿಗೆ ಹಾಗೂ ಮುಘಲ ಬಾದಶಾಹನಿಗೆ ಎದುರಿಸಿ ಪಾಠ ಕಲಿಸುವ ಸಲುವಾಗಿ ಶಹಾಜಿರಾಜರು ನಿಜಾಮಶಾಹನ ವಂಶದಲ್ಲಿಯ ಒಂದು ಮಗುವನ್ನು ಹುಡುಕಿ ತೆಗೆದರು ಹಾಗೂ ಜುನ್ನರ ಹತ್ತಿರದ ಪೇಮಗಿರಿ ಕೋಟೆಯಲ್ಲಿ ಅವನನ್ನು ನಿಜಾಮಶಾಹನೆಂದು ಘೋಷಣೆ ಮಾಡಿದರು. ಈ ರೀತಿ ಅವರು ಒಂದು ಹೊಸ ರಾಜ್ಯವನ್ನೇ ಸ್ಥಾಪಿಸಿದರು. ಈ ರಾಜ್ಯದಲ್ಲಿ ಗೋದಾವರಿಯಿಂದ ನೀರಾದವರೆಗಿನ ಪ್ರದೇಶಗಳ ಸಮಾವೇಶವಾಗುತ್ತಿತ್ತು. ತಮ್ಮ ಈ ರಾಜ್ಯದ ಸಂರಕ್ಷಣೆ ಮಾಡುವ ಸಲುವಾಗಿ ಶಹಾಜಿರಾಜರು ಶೌರ್ಯದಿಂದ ಕಾದಾಡಿದರು. ಈ ಕಾರ್ಯದಲ್ಲಿ ಆದಿಲಶಾಹನು ಮೊದಲು ಅವರಿಗೆ ಸಹಾಯ ಮಾಡಿದನು. ಆದರೆ ನಂತರ ಸ್ವತಃ ಮುಘಲ ಬಾದಶಹ ಶಹಾಜಹಾನನು ದಕ್ಷಿಣದಲ್ಲಿ ಶಹಾಜಿರಾಜರ ಮೇಲೆ ದಂಡೆತ್ತಿ ಬಂದನು ಹಾಗೂ ಅವನು ಆದಿಲಶಾಹನಿಗೆ ಎಚ್ಚರಿಗೆ ಕೊಟ್ಟನು. ಆಗ ಆದಿಲಶಾಹನು ಶಹಾಜಿರಾಜರ ವಿರುದ್ಧ ಅವನೊಡನೆ ಮೈತ್ರಿಯ ಒಪ್ಪಂದ ಮಾಡಿಕೊಂಡನು.

ಈಗ ಮುಘಲ ಮತ್ತು ಆದಿಲಶಾಹಿಯ ಸಂಯುಕ್ತ ಸೈನ್ಯದೊಡನೆ ಶಹಾಜಿರಾಜರು ಕೂಟ ಯುದ್ಧನೀತಿಯಿಂದ ಹೋರಾಡತೊಡಗಿದರು; ಆದರೆ ಒಬ್ಬರೇ ಶಹಾಜಿರಾಜರು ಅವರೊಡನೆ ಎಷ್ಟು ದಿನ ಕಾದಾಡಬಲ್ಲರು ? ಅವರ ಶಕ್ತಿ ಕಡಿಮೆ ಬೀಳತೊಡಗಿತು. ಆಗ ನಿರುಪಾಯರಾಗಿ ಕ್ರಿ.ಶ. ೧೬೩೬ ರಲ್ಲಿ ಅವರು ಮುಘಲರ ಜೊತೆ ಒಪ್ಪಂದ ಮಾಡಿಕೊಂಡರು. ಶಹಾಜಿರಾಜರಿಗೆ ಸಮಯ ಅನುಕೂಲವಿರಲಿಲ್ಲ, ಆದ್ದರಿಂದ ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವ ಅವರ ಪ್ರಯತ್ನ ಪೂರ್ಣವಾಗಲಿಲ್ಲ; ಆದರೆ ಅವರ ಈ ಎದೆಗಾರಿಕೆಯಿಂದಾಗಿ ಮರಾಠಿ ಜನರಲ್ಲಿ ಆತ್ಮವಿಶ್ವಾಸ ನಿರ್ಮಾಣವಾಯಿತು. ಶಿವರಾಯರಿಗೆ ಈ ಆತ್ಮವಿಶ್ವಾಸವು ಮುಂದೆ ಸ್ವರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಉಪಯುಕ್ತವಾಯಿತು.

**ಜಿಜಾಬಾಯಿ ಮತ್ತು ಶಿವರಾಯರು ಕರ್ನಾಟಕದಲ್ಲಿ:** ಶಹಾಜಿರಾಜರ ನಿಜಾಮಹಾಹಿ ಮುಳುಗಿದ ನಂತರ ಅದರ ಪ್ರದೇಶಗಳನ್ನು ಮುಘಲ ಮತ್ತು ಆದಿಲಶಾಹರು ಹಂಚಿಕೊಂಡರು. ಶಹಾಜಿರಾಜರಿಗೆ ಮೊದಲಿನಿಂದ ಬಂದ ಪುಣೆ-ಸುಪೆ ಈ ಜಹಗೀರು ಆದಿಲಶಾಹಿ ರಾಜ್ಯದಲ್ಲಿ ಸೇರಿತು. ಆಗ ಆದಿಲಶಾಹನು ಆ ಜಹಗೀರನ್ನು ತನ್ನ ವತಿಯಿಂದ ಅವರಿಗೆ ನೀಡಿದನು. ಈಗ ಶಹಾಜಿರಾಜರು ಆದಿಲಶಾಹನ ಸೇವೆಯನ್ನು ಸ್ವೀಕರಿಸಿದರು. ಆದಿಲಶಾಹನು ಅವರನ್ನು ಪುಣೆಯಿಂದ ದೂರವಿರುವ ಕರ್ನಾಟಕದಲ್ಲಿಯ ಪ್ರದೇಶಗಳನ್ನು ಗೆಲ್ಲುವ ಕಾರ್ಯಕ್ಕೆ ನೇಮಿಸಿದನು. ಶಹಾಜಿರಾಜರು ಕರ್ನಾಟಕಕ್ಕೆ ಹೋದ ಮೇಲೆ ಕೆಲವು ಸಮಯದ ನಂತರ ಜಿಜಾಬಾಯಿ ಮತ್ತು ಶಿವರಾಯರು ಅವರ ಕಡೆಗೆ ಹೋದರು.

ಶಿವರಾಯರ ಮಹಾರಾಷ್ಟ್ರದಲ್ಲಿಯ ಬಾಲ್ಯವು ಅಲೆದಾಟದಲ್ಲಿ ಕಳೆದಿತ್ತು. ಇಂದು ಈ ಕೋಟೆಯಲ್ಲಿ, ನಾಳೆ ಆ ಕೋಟೆಯಲ್ಲಿ, ಈ ರೀತಿ ಜಿಜಾಬಾಯಿ-ಶಿವಬಾರ ಅಲೆದಾಟ ನಡೆಯುತ್ತಿತ್ತು. ಆ ಸಮಯದಲ್ಲಿ ತಂದೆಯ ಪರಾಕ್ರಮದ ಕತೆಗಳು ಬಾಲಕ ಶಿವಬಾರ ಕಿವಿಗೆ ಬೀಳುತ್ತಿದ್ದವು. ಮುಂದೆ ಕರ್ನಾಟಕಕ್ಕೆ ಬಂದ ಮೇಲೆ ಈ ತಾಯಿ ಮಕ್ಕಳಿಗೆ ಸ್ವಲ್ಪ ಸಮಾಧಾನ ಲಭಿಸಿತು. ಕರ್ನಾಟಕದಲ್ಲಿಯ ಅನೇಕ ರಾಜರನ್ನು ಶಹಾಜಿರಾಜರು ಸೋಲಿಸಿದರು. ಆಗ ಆದಿಲಶಾಹನು ಅವರಿಗೆ ಬೆಂಗಳೂರಿನ ಜಹಗೀರನ್ನು ಬಹುಮಾನವೆಂದು ಕೊಟ್ಟನು. ಈಗ ಬೆಂಗಳೂರನ್ನು ಶಹಾಜಿರಾಜರು ಮುಖ್ಯ ಕೇಂದ್ರವನ್ನಾಗಿ ಮಾಡಿದರು ಮತ್ತು ಅಲ್ಲಿ ಅವರು ಒಬ್ಬ ರಾಜನಂತೆ ವೈಭವದಲ್ಲಿ ಇರತೊಡಗಿದರು. ದರಬಾರನ್ನು ಕರೆಯತೊಡಗಿದರು.

## ಅಭ್ಯಾಸ

**೧. ಬಿಟ್ಟ ಸ್ಥಳಗಳಲ್ಲಿ ಕಂಸದಲ್ಲಿಯ ಯೋಗ್ಯ ಪರ್ಯಾಯವನ್ನು ಬರೆಯಿರಿ.**

(ಅ) ಶಿವರಾಯರ ಜನ್ಮ......... ಕೋಟೆಯಲ್ಲಿ ಆಯಿತು. (ಪುರಂದರ, ಶಿವನೇರಿ, ಪನ್ಹಾಳಾ)

(ಆ) ಆದಿಲಶಾಹನು ಶಹಾಜಿರಾಜರಿಗೆ ............ ಪ್ರದೇಶಗಳನ್ನು ಗೆದ್ದುಕೊಳ್ಳುವ ಕಾರ್ಯಕ್ಕೆ ನೇಮಿಸಿದನು.

(ಕರ್ನಾಟಕದಲ್ಲಿಯ, ಖಾನದೇಶದಲ್ಲಿಯ, ಕೊಂಕಣದಲ್ಲಿಯ)

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಜಿಜಾಬಾಯಿಯವರ ಉಪದೇಶದಿಂದ ಶಿವರಾಯರ ಮನದಲ್ಲಿ ಯಾವ ವಿಚಾರಗಳು ಸುಳಿದವು ?

(ಆ) ಶಿವರಾಯರು ಮಾವಳೆಯ ಮಕ್ಕಳೊಂದಿಗೆ ಯಾವ ಆಟಗಳನ್ನು ಆಡುತ್ತಿದ್ದರು ?

(ಇ) ಶಹಾಜಿರಾಜರು ನಿಜಾಮಶಾಹಿಯನ್ನು ಏಕೆ ತ್ಯಜಿಸಿದರು ?

**೩. ಎರಡು-ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಜಿಜಾಬಾಯಿಯವರು ಶಿವರಾಯರಿಗೆ ಯಾರ-ಯಾರ ಕಥೆಗಳನ್ನು ಹೇಳುತ್ತಿದ್ದರು ?

(ಆ) ಶಹಾಜಿರಾಜರು ನಿಜಾಮಶಾಹಿಯ ವಂಶದಲ್ಲಿಯ ಮಗುವಿಗೆ ನಿಜಾಮಶಹಾ ಎಂದು ಏಕೆ ಘೋಷಣೆ ಮಾಡಿದರು ?

**ಉಪಕ್ರಮ**

(ಅ) ಶಿವನೇರಿ ಕೋಟೆಗೆ ಪ್ರವಾಸ ಕೈಕೊಳ್ಳಿರಿ. ಅಲ್ಲಿಯ ಶಿವಜನ್ಮ ಸ್ಥಳದ ಮಾಹಿತಿ ಪಡೆಯಿರಿ.

(ಆ) ನೀವು ಆಡುತ್ತಿರುವ ಪರಂಪರಾಗತ ಆಟಗಳ ಹೆಸರುಗಳನ್ನು ಬರೆಯಿರಿ. ಅವುಗಳ ಪೈಕಿ ಒಂದು ಆಟವನ್ನು ಕುರಿತು ೧೦ ಸಾಲುಗಳಲ್ಲಿ ಮಾಹಿತಿ ಬರೆಯಿರಿ.



**ಶಿವನೇರಿ ಕೋಟೆ- ಮಹಾದ್ವಾರ**

BKR58H

# ೫. ಶಿವರಾಯರ ಶಿಕ್ಷಣ

**ಶಿವರಾಯರ ಶಿಕ್ಷಣದ ಪ್ರಾರಂಭ :** ಶಹಾಜಿರಾಜೇ ಇವರು ಸ್ವತಃ ಸಂಸ್ಕೃತದ ಅಗಾಧ ಪಂಡಿತರಾಗಿದ್ದರು. ಅವರು ತಮ್ಮ ಬೆಂಗಳೂರಿನ ದರಬಾರಿನಲ್ಲಿ ಅನೇಕ ಭಾಷೆಗಳ ಪಂಡಿತರಿಗೆ ಮತ್ತು ಕಲಾವಿದರಿಗೆ ಆಶ್ರಯ ನೀಡಿದ್ದರು. ಶಿವರಾಯರ ಸಲುವಾಗಿ ಅವರು ತಜ್ಞಶಿಕ್ಷಕರ ನೇಮಕ ಮಾಡಿದ್ದರು. ಶಿವರಾಯರಿಗೆ ಏಳು ವರ್ಷ ವಯಸ್ಸಾದ ನಂತರ ಅವರ ಶಿಕ್ಷಣ ಆರಂಭವಾಯಿತು. ಕೆಲವೇ ಸಮಯದಲ್ಲಿ ಶಿವರಾಯರು ಓದು-ಬರಹದ ಕಲೆಯಲ್ಲಿ ಪಾರಂಗತರಾದರು. ರಾಮಾಯಣ, ಮಹಾಭಾರತ, ಭಾಗವತ ಇವುಗಳಲ್ಲಿಯ ಕತೆಗಳನ್ನು ಅವರು ಸ್ವತಃ ಓದತೊಡಗಿದರು. ಶಹಾಜಿ ರಾಜರು ಶಿವರಾಯರಿಗೆ ಯುದ್ಧಕಲೆಯನ್ನು ಕಲಿಸುವ ಸಲುವಾಗಿ ಕೆಲವು ತಜ್ಞ ಶಿಕ್ಷಕರ ನೇಮಕ ಮಾಡಿದ್ದರು. ಅವರು ಶಿವರಾಯರಿಗೆ ಕುದುರೆ ಸವಾರಿ ಮಾಡುವುದು, ಕುಸ್ತಿ ಆಡುವುದು, ಖಡ್ಗವನ್ನು ತಿರುಗಿಸುವುದು ಇತ್ಯಾದಿ ವಿದ್ಯೆಗಳನ್ನು ಕಲಿಸಲು ಆರಂಭಿಸಿದರು. ಈ ರೀತಿ ವಯಸ್ಸಿನ ಹನ್ನೆರಡನೆಯ ವರ್ಷದವರೆಗೆ ಶಿವರಾಯರಿಗೆ ವಿವಿಧ ವಿದ್ಯೆ ಹಾಗೂ ಕಲೆಗಳ ಪರಿಚಯವಾಯಿತು.

ಶೀಘ್ರವೇ ಆದಿಲಶಾಹನು ಶಹಾಜಿರಾಜರನ್ನು ಕರ್ನಾಟಕದಲ್ಲಿಯ ನಾಯಕರ ರಾಜ್ಯಗಳನ್ನು ಗೆಲ್ಲುವ ಅಭಿಯಾನಕ್ಕಾಗಿ ಕಳುಹಿಸಿದನು. ಈ ದಂಡಯಾತ್ರೆಗೆ ಹೋಗುವ ಮೊದಲು ಶಹಾಜಿರಾಜರು ಜಿಜಾವೂ ಮತ್ತು ಶಿವರಾಯರನ್ನು ಪುಣೆ ಜಹಗೀರಿನ ಕಡೆಗೆ ಕಳಿಸಿದರು. ಆ ಸಮಯದಲ್ಲಿ ಅವರ ಜೊತೆಗೆ ಶಹಾಜಿರಾಜರು ಆನೆ, ಕುದುರೆ, ಕಾಲ್ದಳ, ಸಂಪತ್ತು, ಧ್ವಜ ಅದರಂತೆ ವಿಶ್ವಾಸವುಳ್ಳ ಪ್ರಧಾನಿ, ಶೂರ ಸೇನಾನಿ ಹಾಗೂ ತಜ್ಞ ಶಿಕ್ಷಕರನ್ನು ಕಳುಹಿಸಿದರು.

**ಪುಣೆಯ ಸಂಪೂರ್ಣ ರೂಪ ಬದಲಾವಣೆ:** ಜಿಜಾವೂ ಮತ್ತು ಶಿವರಾಯರು ಪುಣೆಗೆ ಬಂದರು. ಶಿವರಾಯರಿಗೆ



ಶಹಾಜಿರಾಜೇಯವರ ನೇತೃತ್ವದಲ್ಲಿ ಶಿವರಾಯರ ಶಿಕ್ಷಣ

ಬಾಲ್ಯದ ದಿನಗಳು ನೆನಪಾದವು. ಬಾಲ್ಯದಲ್ಲಿ ಶಿವನೇರಿಯ ಮಣ್ಣಿನಲ್ಲಿ ಅವರು ಆಡಿದ್ದರು. ಸಹ್ಯಾದ್ರಿಯ ಎತ್ತರವಾದ ಶಿಖರಗಳು ಅವರಿಗೆ ಮತ್ತೆ ಕಾಣಿಸಿದವು. ಅವರಿಗೆ ತುಂಬಾ ಸಂತೋಷವಾಯಿತು. ಆಗಿನ ಪುಣೆ ಇಂದಿನಷ್ಟು ದೊಡ್ಡದಾಗಿರಲಿಲ್ಲ, ಶಹಾಜಿರಾಜರ ಶತ್ರುಗಳು ಈ ಸುಂದರವಾದ ಊರನ್ನು ಹಾಳು ಮಾಡಿಬಿಟ್ಟಿದ್ದರು. ಊರಲ್ಲಿಯ ಸಂಪತ್ತು ನಾಶವಾಗಿತ್ತು. ಮನೆಗಳು ಹಾಗೂ ದೇವಾಲಯಗಳು ಬಿದ್ದು ಹೋಗಿದ್ದವು. ಶತ್ರುಗಳ ಭೀತಿಯಿಂದ ಜನರು ಊರನ್ನು ಬಿಟ್ಟು ಓಡಿಹೋಗಿದ್ದರು. ಹೊಲಗಳು ಹಾಳು ಬಿದ್ದಿದ್ದವು. ಅರಣ್ಯಗಳು ಬೆಳೆದಿದ್ದವು. ಅರಣ್ಯದಲ್ಲಿ ತೋಳಗಳು ಸೊಕ್ಕಿದ್ದವು. ಈ ರೀತಿ ಪುಣೆಯ ದೈನ್ಯಾವಸ್ಥೆಯಾಗಿತ್ತು.

ಜಿಜಾಬಾಯಿಯವರು ಶಿವರಾಯರೊಂದಿಗೆ ಪುಣೆಯಲ್ಲಿ ಇರತೊಡಗಿದ್ದಾರೆ ಎಂಬುದು ಸುತ್ತಮುತ್ತಲಿನ ಊರುಗಳಲ್ಲಿಯ ಜನರಿಗೆ ತಿಳಿಯಿತು. ಆಗ ಅವರಿಗೆ ಸಾಕಷ್ಟು ಧೈರ್ಯ ಬಂದಿತು. ಜಿಜಾಬಾಯಿಯವರು ಅವರನ್ನು ಸಮೀಪ ಕರೆದು ಅವರಿಗೆ ಭರವಸೆಯನ್ನು ನೀಡಿದರು. ಜನರು ಪುಣೆಗೆ ಬಂದು ನೆಲೆಸತೊಡಗಿದರು. ಹೊಲಗಳಿಗೆ ಹೋಗತೊಡಗಿದರು. ಜಿಜಾಬಾಯಿಯವರು ಹಾಳುಬಿದ್ದ ದೇವಾಲಯಗಳನ್ನು ದುರಸ್ತಿ ಮಾಡಿಸಿದರು. ದೇವಾಲಯಗಳಲ್ಲಿ ಮುಂಜಾನೆ-ಸಂಜೆಗೆ ಪೂಜೆಯಾಗತೊಡಗಿತು. ಊರು ಜನರಿಂದ ತುಂಬಿ ಹೋಯಿತು. ಹೀಗಾಗಿ ಪುಣೆಯ ಸಂಪೂರ್ಣ ರೂಪ ಬದಲಾಯಿತು.

**ದಾದಾಜಿ ಕೊಂಡದೇವರ ಕಾರ್ಯ :** ಜಿಜಾವೂ ಮತ್ತು ಶಿವರಾಯರು ಕರ್ನಾಟಕದಲ್ಲಿರುವಾಗ ಇತ್ತ ಪುಣೆ ಜಹಗೀರಿನ ವ್ಯವಸ್ಥೆಯನ್ನು ದಾದಾಜಿ ಕೊಂಡದೇವರು ನೋಡಿಕೊಳ್ಳುತ್ತಿದ್ದರು. ಅವರು ಕೊಂಢಾಣಾದ ಸುಭೇದಾರರೂ ಆಗಿದ್ದರು. ಅವರು ಅತ್ಯಂತ ಸ್ವಾಮಿನಿಷ್ಠ ಸೇವಕರಾಗಿದ್ದರು. ಆಡಳಿತದಲ್ಲಿ ನಿಪುಣರಾಗಿದ್ದರು. ಅದೇ ರೀತಿ ಅವರು ನ್ಯಾಯಶೀಲರಾಗಿದ್ದರು. ಅವರು ಕಠೋರ ಶಿಸ್ತಿನವರಾಗಿದ್ದರು. ಅವರು ನಿಷ್ಠಾವಂತರಾಗಿದ್ದರು. ಶಹಾಜಿರಾಜರ ಆಜ್ಞೆಯಂತೆ ಜಿಜಾಬಾಯಿ ಮತ್ತು ಶಿವರಾಯರಿಗೆ ಇರಲು ಪುಣೆಯಲ್ಲಿ ಒಂದು ದೊಡ್ಡ ವಾಡೆಯನ್ನು ಕಟ್ಟಿಸಿದರು. ಅದರ ಹೆಸರು ಲಾಲ ಮಹಲ. ರೈತರು ಹೊಲದ ಸಾಗುವಳಿ ಮಾಡಲೆಂದು ದಾದಾಜಿಯವರು ಅವರಿಗೆ ಕೆಲವು ವರ್ಷ ಭೂಕಂದಾಯದಲ್ಲಿ ರಿಯಾಯತಿ ಕೊಟ್ಟರು. ಹೀಗಾಗಿ ಹೊಲಗಳಲ್ಲಿ ಸಾಗುವಳಿ ಆರಂಭವಾಯಿತು. ಸೊಕ್ಕಿದ ತೋಳಗಳು ರೈತರಿಗೆ ತೊಂದರೆ ಕೊಡುತ್ತಿದ್ದವು. ಆದ್ದರಿಂದ ತೋಳಗಳನ್ನು ಕೊಲ್ಲಲು ಅವರು ಬಹುಮಾನಗಳನ್ನು ಇಟ್ಟರು. ಇದರಿಂದಾಗಿ ಅನೇಕ ತೋಳಗಳು ಕೊಲ್ಲಲ್ಪಟ್ಟವು. ಕಳ್ಳಕಾಕರ ಭಯ ಹೆಚ್ಚಾಗಿತ್ತು. ದಾದಾಜಿಯವರು ರೈತರ ಗುಂಪುಗಳನ್ನು ಮಾಡಿದರು ಹಾಗೂ ಅವರ ಮೇಲೆ ಕಾವಲನ್ನು ಇರಿಸಿದರು. ಕಳ್ಳರನ್ನು ಹತೋಟಿಯಲ್ಲಿಟ್ಟರು. ಭೂಮಿಯ ಫಲವತ್ತತೆಯನ್ನು ನಿರ್ಧರಿಸಿ ಅದರ ಆಧಾರದ ಮೇಲೆ ಅವರು ಭೂಕಂದಾಯವನ್ನು ಆಕರಿಸಿದರು. ಆದ್ದರಿಂದ ಜನರಿಗೆ ಆನಂದವಾಯಿತು. ದಾದಾಜಿ ಕೊಂಡದೇವ ಮತ್ತು ನಿಜಾಮ ಶಾಹಿಯ ವಜೀರನಾದ ಮಲೀಕ ಅಂಬರ ಇವರ ಕಾರ್ಯವು ಕೃಷಿ ಸುಧಾರಣೆ ಮತ್ತು ಕಂದಾಯ ವಸೂಲಿ ಕ್ಷೇತ್ರದಲ್ಲಿ ಅಮೂಲ್ಯವಾದ ಅಡಿಪಾಯವೆಂದು ತಿಳಿಯಲಾಗುತ್ತದೆ.

**ಶಿವರಾಯರ ಶಿಕ್ಷಣ :** ಶಿವರಾಯರು ಪುಣೆ ಜಹಗೀರಿಗೆ ಬಂದರು, ಆದರೂ ಅವರ ಶಿಕ್ಷಣವು ಜಿಜಾಬಾಯಿಯವರ ಮಾರ್ಗದರ್ಶನದಲ್ಲಿ ನಡೆದೇ ಇತ್ತು. ಬೆಂಗಳೂರಿನಿಂದ ಬರುವಾಗ ಶಹಾಜಿರಾಜರು ಜೊತೆಗೆ ಕಳುಹಿಸಿಕೊಟ್ಟ ಹೆಸರಾಂತ ಶಿಕ್ಷಕರು ಶಿವರಾಯರಿಗೆ ಅನೇಕ ಶಾಸ್ತ್ರಗಳನ್ನು ವಿದ್ಯೆ ಹಾಗೂ ಭಾಷೆಗಳನ್ನು ಕಲಿಸಿದರು.

ಉತ್ತಮ ರಾಜ್ಯಾಡಳಿತವನ್ನು ಹೇಗೆ ಮಾಡಬೇಕು, ಶತ್ರುಗಳೊಡನೆ ಯುದ್ಧವನ್ನು ಹೇಗೆ ಮಾಡಬೇಕು, ಕೋಟೆಗಳನ್ನು ಹೇಗೆ ಕಟ್ಟಬೇಕು, ಕುದುರೆ ಹಾಗೂ ಆನೆಗಳನ್ನು ಹೇಗೆ ಪರೀಕ್ಷಿಸಬೇಕು, ಶತ್ರುಗಳ ದುರ್ಗಮ ಪ್ರದೇಶಗಳಿಂದ ಹೇಗೆ ಪಾರಾಗಿ ಹೋಗಬೇಕು ಮುಂತಾದ ಅನೇಕ ವಿದ್ಯೆಗಳಲ್ಲಿ ಶಿವರಾಯರು ಪಾರಂಗತರಾದರು. ಶಿಕ್ಷಣದಲ್ಲಿಯ ಶಿವರಾಯರ ಪ್ರಗತಿಯನ್ನು ಕಂಡು ಜಿಜಾವೂಗೆ ಅತ್ಯಂತ ಆನಂದವಾಯಿತು.

**ಶಿವರಾಯರಿಗೆ ವೀರಮಾತೆ ಜಿಜಾಬಾಯಿಯವರ ಉಪದೇಶ:** ಜಿಜಾಬಾಯಿಯವರು ಅಸಾಮಾನ್ಯ ಸ್ತ್ರೀ ಆಗಿದ್ದರು. ಅವರು ಬಲಾಢ್ಯ ಸರದಾರರಾದ ಲಖೂಜಿರಾವ ಜಾಧವರ ಮಗಳು ಮತ್ತು ಪರಾಕ್ರಮಿ ಪುರುಷರಾದ ಶಹಾಜಿರಾಜೆಯವರ ಪತ್ನಿಯಾಗಿದ್ದರು. ರಾಜಕಾರಣದ ಮತ್ತು ಯುದ್ಧನೀತಿಯ ಶಿಕ್ಷಣ ಜಿಜಾಬಾಯಿಯವರಿಗೆ ಬಾಲ್ಯದಿಂದಲೇ ದೊರಕಿತ್ತು.

ಜಾಧವ ಮತ್ತು ಭೋಸಲೆ ಈ ಎರಡೂ ಪ್ರಸಿದ್ಧ ಮನೆತನಗಳ ಹೋರಾಟದ ಪರಂಪರೆಗಳು ಅವರಲ್ಲಿ ಒಂದುಗೂಡಿದ್ದವು. ಜಿಜಾಬಾಯಿಯವರು ತುಂಬಾ ಸ್ವಾಭಿಮಾನಿಗಳು ಮತ್ತು ಸ್ವಾತಂತ್ರ್ಯಪ್ರಿಯರಾಗಿದ್ದರು. ಮರಾಠಾ ಸರದಾರರು ಎಷ್ಟೇ ಪರಾಕ್ರಮ ಮಾಡಿದರೂ ಸುಲ್ತಾನರ ದರಬಾರಿನಲ್ಲಿ ಅದಕ್ಕೆ ಬೆಲೆಯೇ ಇರಲಿಲ್ಲ ಎಂಬುದರ ಬಗ್ಗೆ ಅವರಿಗೆ ಕಟು ಅನುಭವವಾಗಿತ್ತು. ನಿಜಾಮಶಾಹನು ತುಂಬಿದ ದರಬಾರಿನಲ್ಲಿ ಅವರ ತಂದೆಯ ಕೊಲೆ ಮಾಡಿದ್ದನು. ಆ ದುಃಖವನ್ನು ಅವರು ಸಹಿಸಿಕೊಂಡಿದ್ದರು. ಜಿಜಾಬಾಯಿಯವರು ತಮ್ಮ ಶಿವಬಾ ಪರಕೀಯರ ಚಾಕರಿ ಮಾಡಕೊಡದು ಎಂಬ ನಿರ್ಧಾರ ಮಾಡಿದ್ದರು. ಅವನು ತಮ್ಮ ಜನರ ರಾಜ್ಯ ಎಂದರೆ ಸ್ವರಾಜ್ಯ ಸ್ಥಾಪನೆ ಮಾಡುವನು ಎಂಬ ವಿಚಾರದಿಂದಲೇ ಅವರು ಶಿವರಾಯರಿಗೆ ಪಾಲನೆ ಮಾಡುತ್ತಿದ್ದರು.

ಮಾವಳದಲ್ಲಿಇರುವ ಜನರಿಗೆ ಮಾವಳೆ ಎನ್ನುತ್ತಿದ್ದರು. ಮಾವಳೆಗಳು ಪ್ರಾಮಾಣಿಕರೂ, ಕಷ್ಟಸಹಿಷ್ಣುಗಳೂ ಹಾಗೂ ಚಪಲರೂ ಆಗಿದ್ದರು. ಶಕ್ತಿ–ಸಾಮರ್ಥ್ಯದಲ್ಲಿ ಅವರ ಕೈ ಹಿಡಿಯುವವರು ಯಾರೂ ಇರಲಿಲ್ಲ, ಆದರೆ ಅವರು ಸುಲ್ತಾನರ ಆಡಳಿತದಲ್ಲಿ ಶೋಷಣೆಗೆ ಒಳಗಾಗಿದ್ದರು. ಸುಲ್ತಾನರ ಸೈನ್ಯದ ಮುಖಾಂತರ ಊರಿಗೆ ಊರೇ ಲೂಟಿಯಾಗುತ್ತಿತ್ತು. ಪ್ರಜೆಗಳು ಊರು ಬಿಡುತ್ತಿದ್ದರು. ಅವರನ್ನು ಯಾರೂ ಕೇಳುವವರೇ ಇರಲಿಲ್ಲ, ಇಂಥ ದುಃಖಿತ ಹಾಗೂ ಕಷ್ಟದಲ್ಲಿರುವ ಜನರ ಸಲುವಾಗಿ ನಾವು ಏನಾದರೂ ಮಾಡಬೇಕು ಎಂದು ಶಿವರಾಯರಿಗೆ ಅನಿಸುತ್ತಿತ್ತು.

ಮನೆಗೆ ಹಿಂದಿರುಗಿದ ಮೇಲೆ ಶಿವರಾಯರು ಜಿಜಾಬಾಯಿಯವರೊಡನೆ ಆಪ್ತಾಲೋಚನೆ ಮಾಡುತ್ತಿದ್ದರು. ಜಿಜಾಬಾಯಿ ಹೇಳುತ್ತಿದ್ದರು, ''ಶಿವಬಾ, ಭೋಸಲೆಯವರ ಪೂರ್ವಜ ಶ್ರೀರಾಮಚಂದ್ರ, ಶ್ರೀರಾಮಚಂದ್ರನು ದುಷ್ಟ ರಾವಣವನ್ನು ಕೊಂದನು ಹಾಗೂ ಪ್ರಜೆಗಳಿಗೆ ಸುಖವನ್ನುಂಟು ಮಾಡಿದನು. ಜಾಧವರ ಪೂರ್ವಜ ಶ್ರೀಕೃಷ್ಣ ಅವನು ದುಷ್ಟ ಕಂಸನ ವಧೆ ಮಾಡಿದನು ಮತ್ತು ಪ್ರಜೆಗಳಿಗೆ ಸುಖವನ್ನುಂಟು ಮಾಡಿದನು. ಶ್ರೀರಾಮ ಮತ್ತು ಶ್ರೀಕೃಷ್ಣರ ವಂಶದಲ್ಲಿ ನಿನ್ನ ಜನ್ಮವಾಗಿದೆ. ಮಗೂ, ನೀನೂ ಕೂಡ ದುಷ್ಟರ ಸಂಹಾರ ಮಾಡಬಲ್ಲೆ, ನೀನೂ ಬಡಜನರನ್ನು ಸುಖಿಯನ್ನಾಗಿ ಮಾಡಬಲ್ಲೆ.



**ವೀರಮಾತಾ ಜಿಜಾಬಾಯಿ**

ತಾಯಿಯ ಉಪದೇಶದಿಂದ ಶಿವರಾಯರಲ್ಲಿ ಹುರುಪು ಉಂಟಾಗುತ್ತಿತ್ತು. ರಾಮ, ಕೃಷ್ಣ, ಭೀಮ, ಅರ್ಜುನ ಈ ವೀರರ ಕತೆಗಳು ಅವರಿಗೆ ನೆನಪಾಗುತ್ತಿದ್ದವು. ಈ ವೀರ ಪುರುಷರು ಶಿವರಾಯರಿಗೆ ಯಾವಾಗಲೂ ಧ್ಯಾನದಲ್ಲಿ, ಮನದಲ್ಲಿ ಹಾಗೂ ಸ್ವಪ್ನದಲ್ಲಿ ಕಾಣಿಸುತ್ತಿದ್ದರು. ಈ ವೀರರು ಅನ್ಯಾಯದ ವಿರುದ್ಧ ಹೋರಾಡಿದಂತೆ ತಾನೂ ಹೋರಾಡಬೇಕು, ಅವರು ದುಷ್ಟರ ನಾಶ ಮಾಡಿದಂತೆ ತಾನೂ ಮಾಡಬೇಕು, ಅವರು ಪ್ರಜೆಗಳಿಗೆ ಸುಖವನ್ನುಂಟು ಮಾಡಿದಂತೆ ತಾನೂ ಮಾಡಬೇಕು, ತಾನು ನ್ಯಾಯಶೀಲನಾಗಬೇಕು, ಧೈರ್ಯಶಾಲಿಯಾಗಬೇಕು, ಪರಾಕ್ರಮಿಯಾಗಬೇಕು ಎಂದು ಶಿವರಾಯರಿಗೆ ಯಾವಾಗಲೂ ಅನಿಸುತ್ತಿತ್ತು.

**ಶಿವರಾಯರ ಹೊಸ ಆಡಳಿತ :** ಪುಣೆ ಜಹಗೀರಿನಲ್ಲಿ ಈಗ ಜಿಜಾಬಾಯಿಯವರ ಮಾರ್ಗದರ್ಶನದಲ್ಲಿ

ಶಿವರಾಯರ ಹೊಸ ಆಡಳಿತ ಪ್ರಾರಂಭವಾಯಿತು. ಈ ಕಾರ್ಯಕ್ಕಾಗಿ ಶಹಾಜಿರಾಜರು ಪೂರ್ವತಯಾರಿ ಮಾಡಿಕೊಟ್ಟಿದ್ದರು. ಶಿವರಾಯರನ್ನು ಬೆಂಗಳೂರಿನಿಂದ ಪುಣೆಗೆ ಕಳುಹಿಸುವಾಗ ಅವರ ಜೊತೆಯಲ್ಲಿ ಸಾಮರಾಜ ನೀಲಕಂಠ ಪೇಶವೆ, ಬಾಳಕೃಷ್ಣ ಹಣಮಂತೆ ಮುಜುಮದಾರ, ಮಾಣಕೋಜಿ ದಹಾತೊಂಡೆ ಸರನೋಬತ, ರಘುನಾಥ ಬಲ್ಲಾಳ ಸಬನೀಸ, ಸೋನೋಪಂತ ಡಬೀರ ಮುಂತಾದ ಪ್ರತಿಷ್ಠಿತ ವ್ಯಕ್ತಿಗಳನ್ನು ಶಹಾಜಿರಾಜರು ಕಳುಹಿಸಿದ್ದರು. ಅವರೆಲ್ಲರೂ ಸ್ವತಂತ್ರ ರಾಜನ ಅಧಿಕಾರಿಗಳಾಗುವ ಸಾಮರ್ಥ್ಯವುಳ್ಳವರು. ಶಿವರಾಯರು ತಮ್ಮ ಜಹಗೀರಿನ ಆಡಳಿತವನ್ನು ಉತ್ತಮ ರೀತಿಯಿಂದ ನಿರ್ವಹಿಸಬೇಕೆಂದೇ ಶಹಾಜಿರಾಜರು ಈ ಅಧಿಕಾರಿಗಳನ್ನು ಪುಣೆಗೆ ಕಳುಹಿಸಿದ್ದರು. ಅವರ ಸಹಾಯದಿಂದ ಶಿವರಾಯರು ಜಹಗೀರಿನ ಆಡಳಿತವನ್ನು ನೋಡಿಕೊಳ್ಳತೊಡಗಿದರು. ಜನರ ಸುಖ-ದುಃಖಗಳ ಕಡೆಗೆ ಗಮನ ಹರಿಸತೊಡಗಿದರು. ಪ್ರಜೆಗಳ ಮೇಲೆ ಅನ್ಯಾಯ ಮಾಡುವವರಿಗೆ ಶಿಕ್ಷೆಯಾಗತೊಡಗಿತು. ಒಂದು ರೀತಿಯಿಂದ ಶಹಾಜಿರಾಜರ ಜಹಗೀರಿನ ಸಂಪೂರ್ಣ ರೂಪವು ಬದಲಾಗುತ್ತಿತ್ತು. ಮುಂದೆ ಬರಲಿರುವ ಸ್ವರಾಜ್ಯದ ಮಾದರಿಯೇ ಮಾವಳಗಳಿಗೆ ನೋಡಲು ಸಿಗುತ್ತಿತ್ತು. ಅದು ಸ್ವರಾಜ್ಯದ ಅರುಣೋದಯವೇ ಆಗಿತ್ತು!

**ಶಿವರಾಯರ ವಿವಾಹ :** ಆ ಕಾಲದಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡುವ ಪದ್ಧತಿ ಇತ್ತು. ಆಗ ಜಿಜಾಬಾಯಿಯವರು ಹೇಳಿದರು, ''ಈಗ ನಮ್ಮ ಶಿವಬಾನ ಮದುವೆ ಮಾಡಬೇಕು. ಅದಕ್ಕಾಗಿ ಶಿವಬಾನ ಸಲುವಾಗಿ ವಧುವಿನ ಶೋಧ ಆರಂಭವಾಯಿತು. ಒಬ್ಬ ಕನ್ಯೆ ಅವರಿಗೆ ಮೆಚ್ಚುಗೆಯಾದಳು. ಅವಳ ಹೆಸರು ಸಯೀಬಾಯಿ. ಫಲಟಣದ ನಾಯಿಕ ನಿಂಬಾಳಕರ ಮನೆತನದವಳು ಆ ಹುಡುಗಿ. ಈ ಮದುವೆಯ ಅತ್ಯಂತ ವಿಜೃಂಭಣೆಯಿಂದ ಜರುಗಿತು.

## ಅಭ್ಯಾಸ

**೧. ಬಿಟ್ಟ ಸ್ಥಳಗಳಲ್ಲಿ ಕಂಸದಲ್ಲಿಯ ಯೋಗ್ಯ ಪರ್ಯಾಯವನ್ನು ಬರೆಯಿರಿ.**

(ಅ) ಶಹಾಜಿರಾಜೆಯವರು .................. ಅಗಾಧ ಪಂಡಿತರಾಗಿದ್ದರು.

(ಸಂಸ್ಕೃತದ, ಕನ್ನಡದ, ತಮಿಳಿನ)

(ಆ) ಮಾವಳದಲ್ಲಿ ಇರುವ ಜನರಿಗೆ .............. ಅನ್ನುತ್ತಾರೆ.

(ಒಕ್ಕಲಿಗರು, ಸೈನಿಕರು, ಮಾವಳರು)

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಶಿವರಾಯರಿಗೆ ಕಲಿಸುವ ಸಲುವಾಗಿ ಶಿಕ್ಷಕರನ್ನು ಯಾರು ಮತ್ತು ಎಲ್ಲಿ ನೇಮಿಸಿದರು ?

(ಆ) ಶಿವರಾಯರಿಗೆ ಶಿಕ್ಷಕರು ಯಾವ ಯಾವ ವಿದ್ಯೆಗಳನ್ನು ಕಲಿಸಲು ಪ್ರಾರಂಭಿಸಿದರು ?

(ಇ) ದಾದಾಜಿ ಕೊಂಡದೇವರು ರೈತರಿಗೆ ಭೂಕಂದಾಯದಲ್ಲಿ ರಿಯಾಯತಿಯನ್ನು ಏಕೆ ನೀಡಿದರು ?

**೩. ಎರಡು-ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಪುಣೆಯ ಸಂಪೂರ್ಣ ರೂಪ ಹೇಗೆ ಬದಲಾಯಿತು?

(ಆ) ಶಿವರಾಯರು ಯಾವ ವಿದ್ಯೆಗಳಲ್ಲಿ ಪಾರಂಗತರಾದರು?

(ಇ) ಜಿಜಾಬಾಯಿಯವರು ಯಾವ ನಿರ್ಧಾರ ಮಾಡಿದ್ದರು?

**ಉಪಕ್ರಮ**

(ಅ) ಜಿಜಾಬಾಯಿ ಮತ್ತು ಶಿವರಾಯರ ನಡುವಿನ ಸಂವಾದವನ್ನು ಅಭಿನಯಿಸಿರಿ.

(ಆ) ವೀರಮಾತಾ ಜಿಜಾಬಾಯಿಯವರ ಚರಿತ್ರೆಯನ್ನು ಓದಿರಿ.

BKFDLB

# ೬. ಸ್ವರಾಜ್ಯ ಸ್ಥಾಪನೆಯ ಪ್ರತಿಜ್ಞೆ

**ರಾಯರೇಶ್ವರನ ದೇವಾಲಯ :** ಪುಣೆಯ ನೈಋತ್ಯಕ್ಕೆ ಇರುವ ರಾಯರೇಶ್ವರನ ದೇವಾಲಯವು ಬಹಳ ರಮಣೀಯ ಸ್ಥಾನವಾಗಿತ್ತು. ಅಲ್ಲಿ ೧೬೪೫ ರಲ್ಲಿ ಒಂದು ವಿಲಕ್ಷಣ ಘಟನೆ ನಡೆಯಿತು. ಶಿವರಾಯರು ಮತ್ತು ಅಕ್ಕಪಕ್ಕದ ಗಿರಿಕಂದರಗಳ ಕೆಲವು ಮಾವಳೆ ಜನರು ವಿಚಾರ ವಿನಿಮಯಕ್ಕಾಗಿ ಅಲ್ಲಿ ಸೇರಿದ್ದರು. ಆ ದಟ್ಟ ಅರಣ್ಯದಲ್ಲಿ ಗಿಡಗಂಟಿಗಳಲ್ಲಿ ಅಡಗಿದ್ದ ರಾಯರೇಶ್ವರನ ದೇವಾಲಯದಲ್ಲಿ ಶಿವರಾಯರ ಜೊತೆ ಅದೆಂತಹ ಆಲೋಚನೆಯನ್ನು ಮಾವಳೆ ಜನರು ಮಾಡುತ್ತಿದ್ದರು ? ಶ್ರೀ ಶಂಕರನಿಂದ ಯಾವ ವರ ಬೇಡುತ್ತಿದ್ದರು ?

**ಬಾಲಕ ಶಿವಬಾರ ತೇಜಸ್ವಿ ವಾಣಿ :** ಶಿವರಾಯರು ಇನ್ನೂ ವಯಸ್ಸಿನಲ್ಲಿ ತುಂಬ ಚಿಕ್ಕವರಿದ್ದರು. ಆದರೆ ಅವರ ಮಹತ್ವಾಕಾಂಕ್ಷೆ ಮಾತ್ರ ತುಂಬಾ ಹಿರಿದಾಗಿತ್ತು. ಅವರು ಒಂದು ದೊಡ್ಡ ನಿರ್ಧಾರ ಮಾಡಿದ್ದರು. ಆ ದೇವಾಲಯದಲ್ಲಿ ನೆರೆದ ಎಲ್ಲಾ ಸಂಗಾತಿಗಳಿಗೆ ಅವರು ಕಳಕಳಿಯಿಂದ ಹೇಳಿದರು, ''ಗೆಳೆಯರೇ, ಇಂದು ನಾನು ನಿಮಗೆ ನನ್ನ ಮನಸ್ಸಿನ ಒಂದು ವಿಚಾರವನ್ನು ಹೇಳಲೇನು? ನನ್ನ ತಂದೆ ಶಹಾಜಿರಾಜರು ವಿಜಾಪುರದ ಸರದಾರರಿದ್ದಾರೆ. ಅವರೇ ನಮಗೆ ಇಲ್ಲಿಯ ಜಹಗೀರಿನ ಅಧಿಕಾರ ಕೊಟ್ಟಿದ್ದಾರೆ. ಎಲ್ಲವೂ ಚೆನ್ನಾಗಿ ನಡೆಯುತ್ತಿದೆ. ಆದರೆ ಗೆಳೆಯರೇ, ನನಗೆ ಇದರಲ್ಲಿ ಸ್ವಲ್ಪವೂ ಆನಂದವೆನಿಸುವುದಿಲ್ಲ. ಸುಲ್ತಾನನ ಜಹಗೀರುದಾರಿಕೆ ಮೇಲೆ ನಾವು ಸಂತುಷ್ಟರಾಗಿ ಇರಬೇಕೇನು ? ಬೇರೆಯವರ ಬೊಗಸೆಯಿಂದಲೇ ನಾವು ನೀರು ಕುಡಿಯಬೇಕೇನು ? ನಮ್ಮ ನಾಲ್ಕೂ ಬದಿಗೆ ಅನೇಕ ಪರಕೀಯ ರಾಜ್ಯಗಳಿವೆ. ಅವರೊಳಗೆ ಯಾವಾಗಲೂ ಯುದ್ಧಗಳು ನಡೆಯುತ್ತ ಇರುತ್ತವೆ. ನಮ್ಮ ಜನರು ಈ ಯುದ್ಧಗಳಲ್ಲಿ ಅನಾವಶ್ಯಕವಾಗಿ ಮಡಿಯುತ್ತಾರೆ. ಅನೇಕಾನೇಕ ಕುಟುಂಬಗಳು ನಾಶವಾಗುತ್ತಿವೆ. ನಮ್ಮ ದೇಶ ಹಾಳಾಗುತ್ತಿದೆ. ಇಷ್ಟೆಲ್ಲ ಸಹಿಸಿಯೂ ನಮ್ಮ ಪಾಲಿಗೆ ಬರುವುದೇನು ? ಗುಲಾಮಗಿರಿ ! ನಾವು ಇದನ್ನು ಎಷ್ಟು ದಿನ ಸಹಿಸುವುದು? ಬೇರೆಯವರಿಗಾಗಿ ನಾವು ಎಷ್ಟೊಂದು ಕಷ್ಟಪಡುವುದು ? ಹೇಳಿ, ನೀವೆ ಹೇಳಿ ! ವತನದ ಆಸೆಯಿಂದ ಇದನ್ನು ನಾವು ಹೀಗೆಯೇ ನಡೆಯಲು ಬಿಡುವುದೇ ?''

ಶಿವರಾಯರು ಆವೇಶದಿಂದ ಮಾತನಾಡುತ್ತಿದ್ದರು. ಅವರ ಮುಖವು ಸಿಟ್ಟಿನಿಂದ ಕೆಂಪೇರಿತ್ತು. ಮಾತನಾಡುತ್ತ ಅವರು ತಡೆದರು. ತನ್ನ ತರುಣ ಸಂಗಡಿಗರ ಕಡೆ ನೋಡತೊಡಗಿದರು. ರಾಯರೇಶ್ವರನ ಗರ್ಭಗುಡಿಯಲ್ಲಿ ಸೇರಿದ ಆ ತರುಣ ಮಾವಳೆಗಳು ಶಿವರಾಯರ ಮಾತಿನಿಂದ ನಡುಗಿದರು. ಹೊಸದೃಷ್ಟಿ ಅವರಿಗೆ ದೊರೆಯಿತು. ಅವರಲ್ಲಿಯ ಒಬ್ಬನು ಅಂದನು, ''ಹೇಳಿ, ಯುವರಾಜರೇ ಹೇಳಿ, ನಿಮ್ಮ ಮನದಿಂಗಿತವನ್ನು ಹೇಳಿರಿ. ನೀವು ಹೇಳಿದುದನ್ನು ಮಾಡಲು ನಾವು ನಿಂತ ಕಾಲ ಮೇಲೆ ಸಿದ್ಧರಿದ್ದೇವೆ !'' ''ಹೌದು ರಾಜರೆ, ನೀವು ಏನು ಹೇಳುವಿರೋ ಅದನ್ನು ನಾವು ಮಾಡಲು ಸಿದ್ಧರಿದ್ದೇವೆ, ನಮ್ಮ ಪ್ರಾಣವನ್ನೂ ಕೊಡುವೆವು'' ಆ ಎಲ್ಲಾ ತೇಜಸ್ವೀ ತರುಣವೀರರು ಒಂದೇ ಧ್ವನಿಯಲ್ಲಿ ಹೇಳಿದರು.

**ಸ್ವರಾಜ್ಯದ ಪ್ರತಿಜ್ಞೆ:** ಮಾವಳೆಯವರ ಈ ಶಬ್ದಗಳಿಂದ ಶಿವರಾಯರಿಗೆ ಹೊಸ ಸ್ಫೂರ್ತಿ ಬಂತು. ಒಬ್ಬೊಬ್ಬರ ಕಡೆ ನೋಡುತ್ತಾ ಅವರು ಆನಂದದಿಂದ ಹೇಳಿದರು, ''ಗೆಳೆಯರೇ ! ನಮ್ಮ ಮಾರ್ಗ ನಿಶ್ಚಿತವಾಯಿತು. ನಮ್ಮ ಧ್ಯೇಯದ ಸಲುವಾಗಿ ನಾವೆಲ್ಲರೂ ಪ್ರಯತ್ನಿಸಬೇಕು, ಎಲ್ಲರೂ ಶ್ರಮಿಸಬೇಕು, ಎಲ್ಲರೂ ಪ್ರಾಣವನ್ನು ಅರ್ಪಿಸಲೂ ಸಿದ್ಧರಾಗಬೇಕು. ಆ ನಮ್ಮ ಧ್ಯೇಯವೆಂದರೆ 'ಹಿಂದವೀ ಸ್ವರಾಜ್ಯ !' ನಿಮ್ಮ ನನ್ನ ಎಲ್ಲರ ಸ್ವತಂತ್ರ ರಾಜ್ಯವನ್ನು ಸ್ಥಾಪನೆ ಮಾಡುವುದು. ಪರಕೀಯರ ಗುಲಾಮಗಿರಿ ಇನ್ನು ಬೇಡ. ಎದ್ದೇಳಿ, ಈ ರಾಯರೇಶ್ವರನನ್ನು ಸಾಕ್ಷಿಯಾಗಿರಿಸಿ ನಾವು ಪ್ರತಿಜ್ಞೆ ಮಾಡೋಣ. ಸ್ವರಾಜ್ಯ ಸ್ಥಾಪನೆಗಾಗಿ ನಾವು ನಮ್ಮ ಸರ್ವಸ್ವವನ್ನೂ ಅರ್ಪಿಸುವೆವು.''

ಇಡೀ ಮಂದಿರವೇ ಶಿವರಾಯರ ಶಬ್ದಗಳಿಂದ ಪ್ರತಿಧ್ವನಿಸತೊಡಗಿತು. ''ಹಿಂದವೀ ಸ್ವರಾಜ್ಯದ ರೂಪದಲ್ಲಿ ಈ ರಾಜ್ಯವಾಗಬೇಕು ಎಂಬುದು ಪರಮೇಶ್ವರನ ಮನಸ್ಸಿನಲ್ಲಿ ಇದೆ. ಪರಮೇಶ್ವರನ ಇಚ್ಛೆಯನ್ನು ನಾವು ಪೂರ್ಣಗೊಳಿಸುವಾ'' ಎಂದು ಶಿವರಾಯರು ಕೊನೆಗೆ ತಮ್ಮ ನಿರ್ಧಾರವನ್ನು ಹೇಳಿದರು.



ಸ್ವರಾಜ್ಯ ಸ್ಥಾಪನೆಯ ಪ್ರತಿಜ್ಞೆ

ರಾಯರೇಶ್ವರನ ಮಂದಿರದಿಂದ ಎಲ್ಲಾ ಮಾವಳೆಗಳು ಸ್ವರಾಜ್ಯದ ಪ್ರತಿಜ್ಞೆ ಮಾಡಿಯೇ ಹೊರಬಿದ್ದರು. ಶಿವರಾಯರ ಮನಸ್ಸು ತುಂಬಿ ಬಂತು. ಪುಣೆಗೆ ತಲುಪಿದಾಕ್ಷಣ ಅವರು ಲಾಲ ಮಹಲಿನಲ್ಲಿ ಮಾತೊಶ್ರೀಯವರ ಕಡೆಗೆ ಹೋದರು. ನಡೆದ ಪ್ರಸಂಗವನ್ನು ಅವರು ಜಿಜಾಬಾಯಿಯವರಿಗೆ ವಿವರಿಸಿದರು. ಆ ಮಾತೆಗೆ ತಾನು ಧನ್ಯಳೆನಿಸಿತು. ತಾನು ಮನಸ್ಸಿನಲ್ಲಿ ಎಣಿಸಿದುದನ್ನು ಬಾಲರಾಜೇಯವರು ಪೂರ್ಣ ಮಾಡುವರು ಎಂಬ ಆಸೆ, ವಿಶ್ವಾಸ ಅವರಿಗೆ ಹುಟ್ಟಿತು.

**ಮಾವಳ ಕಂದರದಲ್ಲಿಯ ಜಮಾವಣೆ :** ಶಿವರಾಯರು ತಮ್ಮ ಹೊಸ ಕಾರ್ಯದಲ್ಲಿ ತೊಡಗಿದರು. ಮಾವಳೆ ಜನರೊಡನೆ ಖಡ್ಗ ತಿರುಗಿಸುವದು, ಕುದುರೆ ಸವಾರಿ ಮಾಡುವುದು, ಗುಡ್ಡಗಳಲ್ಲಿಯ ಅಡ್ಡದಾರಿ ಹುಡುಕುವುದು, ಕಂದರ, ಪರ್ವತ, ಕಳ್ಳದಾರಿಗಳನ್ನು ಕಂಡುಹಿಡಿಯುವುದು ಹೀಗೆ ಅವರ ನಿತ್ಯಕ್ರಮ ಶುರುವಾಯಿತು. ಶಿವರಾಯರು ಮಾವಳೆ ಜನರ ಅಂತಃಕರಣಗಳನ್ನು ಗೆದ್ದುಕೊಂಡರು. ತರುಣ ಮಾವಳೆಗಳು ಶಿವರಾಯರಿಗೆ ಮರುಳಾದರು. ಶಿವರಾಯರಿಗಾಗಿ ಜೀವಿಸುವುದು, ಶಿವರಾಯರಿಗಾಗಿ ಮಡಿಯುವುದು, ಎಂದು ಅವರು ಭಾವಿಸತೊಡಗಿದರು. ಈಗ ಶಿವರಾಯರ ಚಟುವಟಿಕೆಗಳು ಸಮುದ್ರದಲ್ಲಿಯ ತೆರೆಗಳಂತೆ ಉಕ್ಕೇರಿ ಬರತೊಡಗಿದವು. ಶಿವರಾಯರು ತನ್ನ ಗೆಳೆಯರೊಡನೆ ಪುಣೆಯಲ್ಲಿಯ ಎಲ್ಲಾ ಕೋಟೆಗಳನ್ನು ಬಹಳ ತಿಕ್ಷ್ಣ ದೃಷ್ಟಿಯಿಂದ ನಿರೀಕ್ಷಿಸಿದರು. ಕಳ್ಳದಾರಿ, ಸುರಂಗಮಾರ್ಗ, ನೆಲಮನೆ, ಮದ್ದುಗುಂಡು ಶಸ್ತ್ರಾಸ್ತ್ರಗಳು ಮತ್ತು ಶತ್ರು ಸೈನ್ಯದ ಪಾಳೆಯಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆದರು.

**ಮಾವಳೆ ಜೊತೆಗಾರರು :** ಹನ್ನೆರಡು ಮಾವಳಾಗಳ ಅಲ್ಲಲ್ಲಿ ಕೆಲವು ದೇಶಮುಖರು ತಮ್ಮ ವತನವನ್ನು ಕಾಯ್ದುಕೊಂಡಿದ್ದರು. ಅವರಿಗೆ ತಮ್ಮ ವತನದ ಮೇಲೆ ತುಂಬಾ ಲೋಭವಿತ್ತು. ವತನದ ಸಲುವಾಗಿ ಅವರು ತಮ್ಮ ತಮ್ಮಲ್ಲಿ ಜಗಳವಾಡುತ್ತಿದ್ದರು. ಆ ಜಗಳಗಳಲ್ಲಿ ಮರಾಠರ ಶಕ್ತಿ ವ್ಯರ್ಥವಾಗುತ್ತಿದ್ದದನ್ನು ಶಿವರಾಯರು ಕಂಡುಕೊಂಡರು. ಅದಕ್ಕೆ ಪ್ರತಿಬಂಧ ಹಾಕುವ ನಿರ್ಧಾರವನ್ನು ಮಾಡಿದರು. ಶಿವರಾಯರು ದೇಶಮುಖರ ಊರುಗಳಿಗೆ ಭೇಟಿ ಕೊಡುತ್ತಿದ್ದರು. ಅವರಿಗೆ ತಿಳಿಸಿ ಹೇಳುತ್ತಿದ್ದರು. ಸ್ವರಾಜ್ಯದ ಧ್ಯೇಯದಿಂದ ಅವರನ್ನು ಪ್ರೇರೇಪಿಸುತ್ತಿದ್ದರು. ಶಿವರಾಯರು ಸವಿ ಮಾತಿನಿಂದ ಅವರನ್ನು ತಮ್ಮಡೆಗೆ ಸೆಳೆದರು, ಆದರೆ ಕೆಲವರು ವಿರೋಧಿಸಿದರು, ಅವರನ್ನೂ ಶಿವರಾಯರು ಯೋಗ್ಯ ಹಾದಿಗೆ ತಂದರು. ಮರಾಠರ ಪರಸ್ಪರರಲ್ಲಿಯ ಜಗಳಗಳನ್ನು ಅವರು ನಿಲ್ಲಿಸಿದರು. ಎಲ್ಲರೂ ಅವರಿಗೆ ಧನ್ಯವಾದ ಹೇಳತೊಡಗಿದರು. ಮಾವಳಾ ಕೊಳ್ಳದಲ್ಲಿಯ ಝುಂಜಾರರಾವ ಮರಳ, ಹೈಬತರಾವ ಶಿಳಮಕರ, ಬಾಜೀ ಪಾಸಲಕರ, ವಿಠೋಜಿ ಶಿತೋಳೆ, ಜೇಧೆ, ಪಾಯಗುಡೆ, ಬಾಂದಲ ಇತ್ಯಾದಿ ದೇಶಮುಖರು ಶಿವರಾಯರ ಮಾತನ್ನು ಮನ್ನಿಸತೊಡಗಿದರು. ಮಾವಳಾದಲ್ಲಿ ಸ್ವರಾಜ್ಯದ ಚಟುವಟಿಕೆಗಳು ಶೀಘ್ರಗೊಂಡವು.

**ಶಿವರಾಯರ ರಾಜಮುದ್ರೆ :** ಶಿವರಾಯರ ಹೆಸರಿನಲ್ಲಿ ಜಹಗೀರಿನ ಆಡಳಿತ ಪ್ರಾರಂಭವಾಗಿತ್ತು. ಶಹಾಜಿರಾಜರು ಶಿವರಾಯರ ಸ್ವತಂತ್ರ ರಾಜಮುದ್ರೆಯನ್ನು ತಯಾರಿಸಿದ್ದರು. ಆ ಮುದ್ರೆ ಹೀಗಿತ್ತು :

''ಪ್ರತಿಪಚ್ಚಂದ್ರಲೇಖೇವ ವರ್ಧಿಷ್ಣುರ್ವಿಶ್ವವಂದಿತಾ ॥

ಶಾಹಸೂನೋಃ ಶಿವಸ್ಯೈಷಾಮುದ್ರಾ ಭದ್ರಾಯ ರಾಜತೆ'' ॥

ಪ್ರತಿಪದೆಯ ಚಂದ್ರಕಳೆಯಂತೆ ಬೆಳೆಯುತ್ತ ಹೋಗುವ ಮತ್ತು ಇಡೀ ವಿಶ್ವಕ್ಕೆ ಪೂಜ್ಯವೆನಿಸುವಂತಹ, ಶಹಾಜಿರಾಜರ ಪುತ್ರ ಶಿವಾಜಿರಾಜೇ ಇವರ ರಾಜಮುದ್ರೆಯು ಜನರ ಕಲ್ಯಾಣಕ್ಕಾಗಿ ಇದೆ; ಎಂದು ಹೇಳುವ ಈ ರಾಜಮುದ್ರೆ ಅಂದರೆ ಅದು ಸ್ವರಾಜ್ಯದ ಸ್ಥಾಪನೆಯ ಸಂಕೇತವೇ ಆಗಿತ್ತು.



ರಾಜಮುದ್ರೆ

ಆ ಕಾಲದಲ್ಲಿ ರಾಜಮುದ್ರೆಗಳು ಹೆಚ್ಚಾಗಿ ಪಾರ್ಸಿ ಭಾಷೆಯಲ್ಲಿ ಕೊರೆಯಲ್ಪಡುತ್ತಿದ್ದವು. ಆದರೆ ಶಿವರಾಯರ ಮುದ್ರೆಯ ಸಂಸ್ಕೃತ ಭಾಷೆಯಲ್ಲಿ ಇತ್ತು. ಸ್ವರಾಜ್ಯ ಬೇಕು, ಅದರಂತೆ ಸ್ವಭಾಷೆಯೂ ಬೇಕು, ಸ್ವಧರ್ಮವೂ ಬೇಕು. ಅದರ ಜೊತೆ ಬೇರೆ ಧರ್ಮಗಳ ದ್ವೇಷವೂ ಬೇಡ. ಶಿವರಾಯರು ತಮ್ಮ ಆಡಳಿತವನ್ನು ಜನತೆಯ ಕಲ್ಯಾಣದ ಸಲುವಾಗಿ ಪ್ರಾರಂಭ ಮಾಡಿದ್ದಾರೆ ಎಂಬುದು ಎಲ್ಲಾ ಮಾವಳೆಯವರಿಗೆ ತಕ್ಷಣ ಹೊಳೆಯಿತು.

## ಅಭ್ಯಾಸ

**೧. ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಶಬ್ದಗಳನ್ನು ಬರೆಯಿರಿ.**

(ಅ) ಪುಣೆಯ ನೈಋುತ್ಯಕ್ಕೆ ಇರುವ ................. ದೇವಾಲಯವು ಬಹಳ ರಮಣೀಯವಾಗಿತ್ತು.

(ಆ) ಮಾವಳಾದಲ್ಲಿ ಅಲ್ಲಲ್ಲಿ ಕೆಲವು ............. ರು ತಮ್ಮ ವತನವನ್ನು ಕಾಯ್ದುಕೊಂಡು ಇದ್ದರು.

(ಇ) ಶಹಾಜಿರಾಜರು ಶಿವರಾಯರ ಸ್ವತಂತ್ರ ............. ತಯಾರಿಸಿದ್ದರು.

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ರಾಯರೇಶ್ವರನ ದೇವಾಲಯದಲ್ಲಿ ಶಿವರಾಯರು ಕೊನೆಗೆ ನಿರ್ಧಾರದಿಂದ ಏನು ಮಾತನಾಡಿದರು ?

(ಆ) ಜಿಜಾಬಾಯಿಯವರಿಗೆ ಯಾವ ವಿಶ್ವಾಸ ಹುಟ್ಟಿತು ?

(ಇ) ಶಿವರಾಯರು ಯಾವ ವಿಷಯಗಳ ಸಂಪೂರ್ಣ ಮಾಹಿತಿ ಪಡೆದರು ?

(ಈ) ಶಿವರಾಯರು ಯಾವ ಸಂಗತಿಗೆ ಪ್ರತಿಬಂಧ ಹಾಕುವ ವಿಚಾರ ಮಾಡಿದರು ?

**೩. ಎರಡು-ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಶಿವರಾಯರ ಧ್ಯೇಯಗಳು ಯಾವುವು ಆಗಿದ್ದವು ?

(ಆ) ಶಿವರಾಯರ ಯಾವ ನಿತ್ಯಕ್ರಮ ಶುರುವಾಯಿತು ?

**ಉಪಕ್ರಮ**

ಶಿಕ್ಷಕರ ಸಹಾಯದಿಂದ ಸ್ವರಾಜ್ಯ ಸ್ಥಾಪನೆಯ ಪ್ರಸಂಗದ ಚಿತ್ರವನ್ನು ತಯಾರಿಸಿರಿ.

BK.J1A5

# ೭. ಸ್ವರಾಜ್ಯದ ತೋರಣ ಕಟ್ಟಿದರು

ರಾಯರೇಶ್ವರನ ದೇವಾಲಯದಲ್ಲಿ ಶಿವರಾಯರು ತಮ್ಮ ಸಂಗಡಿಗರೊಂದಿಗೆ ಸ್ವರಾಜ್ಯ ಸ್ಥಾಪನೆಯ ಪ್ರತಿಜ್ಞೆ ಮಾಡಿದರು. ಆದರೆ ಅದು ಎಷ್ಟೊಂದು ಕಠಿಣ ಕೆಲಸವಾಗಿತ್ತು! ದಿಲ್ಲಿಯ ಮುಘಲ ಬಾದಶಾಹ, ವಿಜಾಪುರದ ಆದಿಲಶಾಹ ಸುಲ್ತಾನ, ಗೋವೆಯ ಪೋರ್ತುಗೀಜ ಮತ್ತು ಜಂಜೀರಾದ ಸಿದ್ದಿ ಈ ನಾಲ್ಕು ಆಡಳಿತಗಳು ಆ ಕಾಲದಲ್ಲಿ ಮಹಾರಾಷ್ಟ್ರದ ಮೇಲೆ ಅಧಿಕಾರ ನಡೆಸುತ್ತಿದ್ದವು. ಈ ಆಡಳಿತಗಳ ದರ್ಪ ವಿಪರೀತವಾಗಿತ್ತು. ಅವರ ವಿರುದ್ಧ ಮಾತನಾಡಲು ಯಾರಿಗೂ ಧೈರ್ಯವಿರಲಿಲ್ಲ. ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಶಿವರಾಯರು ಸ್ವರಾಜ್ಯದ ಮಂತ್ರವನ್ನು ಘೋಷಿಸಿದ್ದರು. ಶತ್ರುಗಳ ಸೇನೆಯ ಅಪಾರ ಬಲವೆಲ್ಲಿ ? ಶಿವರಾಯರ ಸಂಗಡಿಗರ ಅಲ್ಪ ಬಲವೆಲ್ಲಿ ? ಆದರೆ ಶಿವರಾಯರ ನಿಶ್ಚಯ ದೃಢವಾಗಿತ್ತು. ಅದರಿಂದಲೇ ಸಾಕಷ್ಟು ಬಲವು ನಿರ್ಮಾಣವಾಯಿತು.

**ತೋರಣಗಡ :** ಶಿವರಾಯರ ಕಡೆಗೆ ಪುಣೆ, ಸುಪೆ, ಚಾಕಣ ಮತ್ತು ಇಂದಾಪುರ ಈ ಪರಗಣೆಗಳ ಜಹಗೀರು ಇತ್ತು. ಈ ಜಹಗೀರುಗಳಲ್ಲಿಯ ಕೋಟೆಗಳು ವಿಜಾಪುರದ ದರಬಾರಿನಲ್ಲಿಯ ಅಧಿಕಾರಿಗಳ ಕೈಯಲ್ಲಿ ಇತ್ತು. ಕೋಟೆಯಿಲ್ಲದೆ ಸ್ವರಾಜ್ಯ ಹೇಗೆ ದೊರಕೀತು! ಯಾರ ಕೋಟೆಗಳೋ ಅವರದೇ ರಾಜ್ಯ ! ಕೋಟೆ ವಶದಲ್ಲಿ ಇದ್ದರೆ ಸುತ್ತಲಿನ ಪ್ರದೇಶದ ಮೇಲೆ ಅಧಿಕಾರ ನಡೆಯುತ್ತದೆ. ಗುಡ್ಡದ ಮೇಲಿನ ಕೋಟೆ ಎಂದರೆ ರಾಜ್ಯದ ಒಂದು ಮುಖ್ಯ ಆಧಾರ. ಆಗ, ಒಂದು ಭದ್ರವಾದ ಕೋಟೆಯನ್ನು ಆದಷ್ಟು ಬೇಗ ವಶಮಾಡಿಕೊಳ್ಳಬೇಕು ಎಂದು ಶಿವರಾಯರು ಮನಸ್ಸಿನಲ್ಲಿ ನಿಶ್ಚಯಿಸಿದರು. ತೋರಣಾ ಕೋಟೆಯು ಶಿವರಾಯರ ಕಣ್ಣು ಮುಂದೆ ಇತ್ತು. ಪುಣೆಯ ನೈಋತ್ಯಕ್ಕೆ ಅರವತ್ನಾಲ್ಕು ಕಿಲೋಮೀಟರ ದೂರದಲ್ಲಿ ಕಾನದ ಕಂದರದಲ್ಲಿ ಈ ಕೋಟೆ ಇದೆ. ಗುಡ್ಡಗಳಲ್ಲಿಯ ಕೋಟೆಗಳಲ್ಲಿ ತೋರಣಾಕೋಟೆ ಬಹು ಭದ್ರವಾಗಿತ್ತು. ಆ ಕೋಟೆಯ ಮೇಲೆ ಎರಡು ಭದ್ರವಾದ ಮಾಚಿಗಳು ಇದ್ದವು. ಒಂದು ಝೂಂಜಾರ ಮಾಚಿ, ಇನ್ನೊಂದು ಬುಧಲಾ ಮಾಚಿ. ಮಾಚಿ ಎಂದರೆ ಕೋಟೆ ಏರುವ ಮಾರ್ಗದಲ್ಲಿ ನೈಸರ್ಗಿಕವಾಗಿ ಸಪಾಟಾದ ಭಾಗದಲ್ಲಿ ಕಟ್ಟಿದ ರಕ್ಷಣಾ ಗೋಡೆ. ಹೆಸರಿಗೆ ತಕ್ಕಂತೆ ಝೂಂಜಾರ ಮಾಚಿಯು ಅಜೇಯವಾಗಿದೆ, ಕಾದಾಟಕ್ಕೆ ಅನುಕೂಲವಾಗಿದೆ. ಕೋಟೆಯಿಂದ ಕೆಳಗೆ ಇಳಿಯಲು



**ತೋರಣಾ ಕೋಟೆ (ಝೂಂಜಾರ ಮಾಚಿ)**

ಒಂದೇ ದಾರಿಯಿದೆ. ಇದು ಝೂಂಜಾರ ಮಾಚಿಯ ಮೇಲಿಂದ ಹಾಯ್ದು ಹೋಗುತ್ತದೆ. ಈ ದಾರಿ ಬಹಳ ದುರ್ಗಮವಾಗಿದೆ. ದಾರಿಯಲ್ಲಿ ನಡೆಯುವಾಗ ಸ್ವಲ್ಪ ಜೋಲಿ ತಪ್ಪಿದರೂ ನಡೆಯುವವನು ಕೆಳಗೆ ಕಂದರದಲ್ಲಿ ಬೀಳುವನು! ಮಹಾರಾಷ್ಟ್ರದಲ್ಲಿಯ ಭದ್ರವಾದ ಕೋಟೆಗಳಲ್ಲಿ ತೋರಣಾ ಕೋಟೆಯೂ ಒಂದು ಎಂದು ಪರಿಗಣಿಸಲಾಗುತ್ತದೆ. ಈ ಕೋಟೆಯಲ್ಲಿ ತೋರಣಜಾಯಿ ದೇವಿಯ ಮಂದಿರವಿದೆ. ಅದರ ಮೇಲಿಂದ ಈ ಕೋಟೆಗೆ 'ತೋರಣಾ' ಎಂಬ ಹೆಸರು ಬಂತು. ಎಷ್ಟೊಂದು ಅದ್ಭುತವಾದ ಕೋಟೆ! ಆದರೆ ಈ ಕೋಟೆಯ ಕಡೆಗೆ ಆದಿಲಶಾಹನ ಹೆಚ್ಚು ಗಮನವಿರಲಿಲ್ಲ. ಕೋಟೆಯಲ್ಲಿ ಸಾಕಷ್ಟು ಕಾವಲುಗಾರರೂ ಇರಲ್ಲಿಲ್ಲ. ಮದ್ದುಗುಂಡು ಇರಲಿಲ್ಲ. ಇದನ್ನು ಶಿವರಾಯರು ಗುಪ್ತಚಾರರಿಂದ ತಿಳಿದರು. ಶಿವರಾಯರಿಗೆ ಇದೇ ಬೇಕಿತ್ತು. ತೋರಣಾ ಗೆದ್ದು ಸ್ವರಾಜ್ಯದ ತೋರಣ ಕಟ್ಟುವದು ಎಂದು ಅವರು ನಿಶ್ಚಯಿಸಿದರು.

**ಸ್ವರಾಜ್ಯದ ನಗಾರಿ ಬಾರಿಸಿತು :** ಆಯ್ಕೆ ಮಾಡಿದ ಮಾವಳೆಗಳ ತಂಡಗಳೊಂದಿಗೆ ಶಿವರಾಯರು ಕಾನದ ಕಣಿವೆಯಲ್ಲಿ ಇಳಿದರು. ಎಲ್ಲಾ ಮಾವಳೆಗಳೊಡನೆ ಅವರು ಸಿಂಹದ ಎದೆಗಾರಿಕೆಯಿಂದ, ಜಿಂಕೆಯ ವೇಗದಿಂದ ಸರಸರನೆ ತೋರಣಾ ಹತ್ತಿ ಹೋದರು. ಮಾವಳೆಗಳು ಭರಭರನೆ ಆಯಕಟ್ಟಿನ ಸ್ಥಳಗಳನ್ನು ವಶಪಡಿಸಿಕೊಂಡರು. ತಾನಾಜಿ ಮಾಲುಸರೆ ಎಂಬ ವೀರನು ಮಹಾದ್ವಾರದ ಮೇಲೆ ಮರಾಠರ ಧ್ವಜವನ್ನು ಏರಿಸಿದನು. ಯೇಸಾಜಿ ಕಂಕ ಇವನು ಶಿವರಾಯರ ವಿಶ್ವಾಸಿಕ ಮತ್ತು ನಿಷ್ಠಾವಂತ ಸಹಕಾರಿ. ಅವನು ಚೌಕಿಯಲ್ಲಿ ಪಹರೆ ಇಟ್ಟನು. ಕೋಟೆ ವಶವಾಯಿತು. ಎಲ್ಲರೂ ಶಿವರಾಯರ ಜಯ ಜಯಕಾರ ಮಾಡಿದರು. ಹಿಂದವೀ ಸ್ವರಾಜ್ಯದ ನಗಾರಿ ಬಾರಿಸಿತು. ನಗಾರಿಯ ಮತ್ತು ಕಹಳೆಯ ಧ್ವನಿ ಸಹ್ಯಾದ್ರಿಯ ಗಿರಿಕಂದರಗಳಲ್ಲಿ ಪ್ರತಿಧ್ವನಿಸಿತು. ಶಿವರಾಯರು ಈ ಕೋಟೆಗೆ 'ಪ್ರಚಂಡಗಡ' ಎಂದು ಹೆಸರಿಟ್ಟರು.

**ಭವಾನಿ ಮಾತೆಯ ಆಶೀರ್ವಾದ :** ತೋರಣಾ ಕೋಟೆಯಲ್ಲಿ ಶಿವರಾಯರ ಆಡಳಿತ ಪ್ರಾರಂಭವಾಯಿತು. ಅವರು ಕೋಟೆಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರು. ಕೋಟೆಯಲ್ಲಿ ಮರಾಠಾ ಕಿಲ್ಲೇದಾರ, ಬ್ರಾಹ್ಮಣ ಸಬನೀಸ, ಪ್ರಭು ಕಾರ್ಖಾನೀಸ ಮುಂತಾದ ಅಧಿಕಾರಿಗಳ ನೇಮಕ ಮಾಡಿದರು. ಕೋಟೆಯ ಕಾವಲುದಳದಲ್ಲಿ ಮಾವಳೆ, ಕೋಳಿ, ರಾಮೋಶಿ, ಮಹಾರ ಇತ್ಯಾದಿ ಜಾತಿ ಪಂಗಡಗಳಲ್ಲಿಯ ಶೂರ ಜನರನ್ನು ನೇಮಿಸಿದರು. ಸ್ವರಾಜ್ಯದ ಸೈನ್ಯದಲ್ಲಿ ಜಾತಿಭೇದ, ವರ್ಣಭೇದ ಈ ಪ್ರಕಾರದ ಯಾವ ಭೇದ ಭಾವವೂ ಇರಲಿಲ್ಲ. ಕೋಟೆಯಲ್ಲಿ ದುರಸ್ತಿಯ ಕೆಲಸ ಪ್ರಾರಂಭವಾಯಿತು. ಎಂತಹ ಆಶ್ಚರ್ಯ! ಕೋಟೆಯಲ್ಲಿ ಕೆಲಸ ನಡೆದಾಗ ಮೊಹರುಗಳಿಂದ ಸಂಪೂರ್ಣ ತುಂಬಿದ ನಾಲ್ಕು ಕೊಡಗಳು ಸಿಕ್ಕವು ! ಕೆಲಸಗಾರರಿಗೆ ಅತ್ಯಂತ ಆನಂದವಾಯಿತು. 'ಶಿವರಾಯರಿಗೆ ಭವಾನಿ ದೇವಿ ಪ್ರಸನ್ನಳಾಗಿದ್ದಾಳೆ, ಅವಳೇ ಸಂಪತ್ತನ್ನು ಕೊಟ್ಟಳು' ಎಂದು ಎಲ್ಲರೂ ಹೇಳತೊಡಗಿದರು. ಕೆಲಸಗಾರರು ಬಹಳ ಆನಂದದಿಂದ ಮೊಹರುಗಳ ಕೊಡಗಳನ್ನು ಶಿವರಾಯರಿಗೆ ತಂದುಕೊಟ್ಟರು. ಅವುಗಳಲ್ಲಿ ಒಂದು ಮೊಹರನ್ನೂ ಯಾರೂ ಮುಟ್ಟಲಿಲ್ಲ. ಅದು ಸ್ವರಾಜ್ಯದ ಸಂಪತ್ತಾಗಿತ್ತು. ಅದನ್ನು ಅವರು ತನ್ನ ಒಡೆಯನ ಸ್ವಾಧೀನಪಡಿಸಿದರು. ಸ್ವರಾಜ್ಯ ಕೆಲಸಕ್ಕಾಗಿ ಇಷ್ಟೊಂದು ಸಂಪತ್ತು ಒಮ್ಮೆಲೆ ಸಿಕ್ಕಿದ್ದರಿಂದ ಶಿವರಾಯರಿಗೆ ಉತ್ಸಾಹ ಬಂದಿತು. ತನ್ನ ಕೆಲಸಕ್ಕೆ ಭವಾನಿ ದೇವಿಯ ಆಶೀರ್ವಾದವಿದೆ ಎಂದು ಅವರಿಗೆ ತೋರಿತು.

ಈ ಸಂಪತ್ತು ಸ್ವರಾಜ್ಯದ ಕಾರ್ಯಕ್ಕೆ ಉಪಯೋಗವಾಯಿತು. ಈ ಸಂಪತ್ತಿನಿಂದ ಶಿವರಾಯರು ಶಸ್ತ್ರಗಳನ್ನು ಕೊಂಡುಕೊಂಡರು. ಮದ್ದು ಗುಂಡುಗಳನ್ನು ಒಟ್ಟುಗೂಡಿಸಿದರು. ಉಳಿದ ಸಂಪತ್ತಿನಿಂದ ಅವರೊಂದು ಯೋಜನೆಯನ್ನು ಪೂರ್ಣ ಮಾಡುವ ನಿರ್ಧಾರ ಮಾಡಿದರು. ಆ ಯೋಜನೆಯು ಹೀಗಿತ್ತು. ತೋರಣ ಗಡದಿಂದ ಹದಿನೈದು ಕಿಲೋಮೀಟರ ಪೂರ್ವದಲ್ಲಿ ಮುರುಂಬ ದೇವರ ಗುಡ್ಡವಿದೆ. ಶಿವರಾಯರು ಇದನ್ನು ಗುಪ್ತವಾಗಿ ನೋಡಿಟ್ಟಿದ್ದರು. ಈ ಗುಡ್ಡವು ಬಹಳ ಎತ್ತರ, ಏರಲಸಾಧ್ಯ ಮತ್ತು ಮಹತ್ವದ್ದಾಗಿತ್ತು. ಆದಿಲಶಾಹನು ಈ ಗುಡ್ಡದ ಮೇಲೆ ಒಂದು ಕೋಟೆಯನ್ನು ಅರ್ಧಕಟ್ಟಿ ಬಿಟ್ಟಿದ್ದನು. ಈ ಕೋಟೆಯಲ್ಲೂ ಸಡಿಲ ಕಾವಲುವಾಗಿತ್ತು. ಸ್ವರಾಜ್ಯದ ರಾಜಧಾನಿಗಾಗಿ ಈ ಕೋಟೆಯನ್ನು ವಶಡಿಸಿಕೊಳ್ಳಬೇಕೆಂದು ಶಿವರಾಯರು ನಿಶ್ಚಯಿಸಿದರು.

**ಸ್ವರಾಜ್ಯದ ಮೊದಲ ರಾಜಧಾನಿ :** ಒಂದು ದಿನ ಶಿವರಾಯರು ತನ್ನ ಆಯ್ದ ಸಂಗಡಿಗರೊಡನೆ ಈ ಕೋಟೆಯನ್ನು ಏರಿ, ಕೋಟೆಯನ್ನು ವಶಪಡಿಸಿಕೊಂಡರು. ತೋರಣಾದಲ್ಲಿ ಸಿಕ್ಕ ಸ್ವಲ್ಪ ಸಂಪತ್ತು ಮುರುಂಬ ದೇವರ ಕೋಟೆಯನ್ನು ದುರುಸ್ತಿ ಮಾಡಲು ಖರ್ಚಾಯಿತು.



**ರಾಜಗಡ- ಪಾಲಿ ದ್ವಾರ**

ಶಿವರಾಯರು ಈ ಕೋಟೆಗೆ 'ರಾಜಗಡ' ಎಂದು ಹೆಸರಿಟ್ಟರು. ಕೋಟೆಯಲ್ಲಿ ಕಲ್ಲು ಒಡೆಯುವವರು ಕಲ್ಲು ಕಟೆದರು. ಕಮ್ಮಾರರು ಕುಲುಮೆ ಊದಿದರು. ಬಡಿಗರು, ಗವಂಡಿಗಳು, ಕೂಲಿಕಾರರು, ಭಿಸ್ತಿಗಳು – ಈ ರೀತಿ ಎಲ್ಲ ಜನರು ಕೆಲಸದಲ್ಲಿ ತೊಡಗಿದರು. ಅರಮನೆ, ಬಾರಾಮಹಾಲ, ಹದಿನೆಂಟು ಕಾರಖಾನೆಗಳು ಮತ್ತು ರಾಜ ಸಿಂಹಾಸನ ಸಿದ್ಧವಾಯಿತು. ರಾಜಗಡವು ಸ್ವರಾಜ್ಯದ ಮೊದಲ ರಾಜಧಾನಿಯಾಗಿ ಶೃಂಗರಿಸಲ್ಪಟ್ಟಿತು.

**ಸ್ವರಾಜ್ಯದ ನಾಗಾಲೋಟ :** ಸ್ವರಾಜ್ಯಕ್ಕಾಗಿ ಶಿವರಾಯರ ನಾಗಾಲೋಟ ಪ್ರಾರಂಭವಾಯಿತು. ಹನ್ನೆರಡು ಮಾವಳಾಗಳಲ್ಲಿಯ ಕೋಟೆಗಳನ್ನು ಒಂದರ ನಂತರ ಒಂದನ್ನು ಅವರು ವಶಪಡಿಸಿಕೊಂಡರು. ಹನ್ನೆರಡು ಮಾವಳಾಗಳಲ್ಲಿಯ ಜನರಲ್ಲಿ ಆನಂದ ಮತ್ತು ಉತ್ಸಾಹಗಳು ಉಕ್ಕೇರಿ ಬಂದವು. ಊರೂರಿನ ಪಾಟೀಲರು, ದೇಶಮುಖರು ಶಿವರಾಯರಿಗೆ ಗೌರವ ಸಲ್ಲಿಸಲು ಬರತೊಡಗಿದರು. ಆದರೆ ಅಕ್ಕಿಯಲ್ಲಿ ಹರಳುಗಳು ಇರುವಂತೆ ಮಾವಳಾದಲ್ಲಿಯೂ ಕೆಲವು ದುಷ್ಟ ಜನರು ಇದ್ದರು. ಶಿವರಾಯರ ಉತ್ಕರ್ಷವನ್ನು ನೋಡಿ ಅವರಿಗೆ ಹೊಟ್ಟೆಕಿಚ್ಚಾಯಿತು. ಶಿರವಳದ ಆದಿಲಶಾಹನ ಠಾಣೆದಾರರಲ್ಲಿ ಶಿವರಾಯರ ವಿರುದ್ಧ ತಕರಾರುಗಳು ಹೋದವು. ಠಾಣೆದಾರನು ವಿಜಾಪುರಕ್ಕೆ ಒಂಟೆ ಸವಾರನನ್ನು ಕಳುಹಿಸಿ ಶಿವರಾಯರ ನಾಗಾಲೋಟದ ವಿವರವನ್ನು ಆದಿಲಶಾಹನ ಕಿವಿಗೆ ಮುಟ್ಟಿಸಿದನು.

**ಶಿವರಾಯರ ಚಾತುರ್ಯ :** ಆದಿಲಶಾಹನು ಚಕಿತನಾದನು. ಅವನು ಶಹಾಜಿ ರಾಜನಿಗೆ ಸ್ಪಷ್ಟೀಕರಣ ಕೇಳಿದನು. ಶಹಾಜಿರಾಜರು ದೊಡ್ಡ ಇಕ್ಕಟ್ಟಿನಲ್ಲಿ ಸಿಲುಕಿದರು. 'ಜಹಗೀರಿನ ರಕ್ಷಣೆ ಮಾಡಲು ತನ್ನಲ್ಲಿ ಒಂದೂ ಕೋಟೆಯಿಲ್ಲ, ಎಂದು ಶಿವಾಜಿ ರಾಜರು ಕೋಟೆಯನ್ನು ವಶಪಡಿಸಿಕೊಂಡಿರಬೇಕು' ಎಂದು ಶಹಾಜಿರಾಜರು ಆದಿಲಶಾಹನಿಗೆ ಹೇಳಿ, ಸಮಸ್ಯೆಯನ್ನು ಬಗೆಹರಿಸಿದರು. ಶಿವರಾಯರೂ ಆದಿಲಶಾಹನ ಕಡೆಗೆ ತನ್ನ ಪ್ರತಿನಿಧಿಯನ್ನು ಕಳುಹಿಸಿದರು. ''ಜಹಗೀರಿನ ಆಡಳಿತವು ಚೆನ್ನಾಗಿ ನಡೆಯಬೇಕೆಂದು ನಾವು ಕೋಟೆಯನ್ನು ವಶಪಡಿಸಿಕೊಂಡೆವು. ಆದಿಲಶಾಹನ ಹಿತಕ್ಕಾಗಿಯೇ ಕೋಟೆಯನ್ನು ಪಡೆದೆವು. ಇದರಲ್ಲಿ ಇತರ ಯಾವ ಉದ್ದೇಶವೂ ಇಲ್ಲ' ಎಂಬ ಧೂರ್ತತನದ ಉತ್ತರವನ್ನು ಶಿವರಾಯರು ಕಳುಹಿಸಿದರು.

ಕೊಂಢಾಣಾ ಮತ್ತು ಪುರಂದರ ಇವೆರಡೂ ಮಹತ್ವದ ಕೋಟೆಗಳಾಗಿದ್ದವು. ಈ ಕೋಟೆಗಳನ್ನು ಶಿವರಾಯರು ಉಪಾಯದಿಂದ ವಶಪಡಿಸಿಕೊಂಡರು. ಇದರ ನಂತರ ರೋಹಿಡಾ ಕೋಟೆಯನ್ನು ವಶಪಡಿಸಿಕೊಂಡರು. ಹೀಗೆ ಸ್ವರಾಜ್ಯದ ನಾಗಾಲೋಟವು ಆರಂಭವಾಯಿತು.

## ಅಭ್ಯಾಸ

**೧. ಬಿಟ್ಟ ಸ್ಥಳಗಳಲ್ಲಿ ಕಂಸದಲ್ಲಿಯ ಯೋಗ್ಯ ಪರ್ಯಾಯವನ್ನು ಬರೆಯಿರಿ.**

(ಅ) ಶಿವರಾಯರ ಕಡೆಗೆ ಪುಣೆ, ಸುಪೆ, ಚಾಕಣ ಮತ್ತು ........ ಈ ಪರಗಣೆಗಳ ಜಹಗೀರು ಇತ್ತು.

(ಇಂದಾಪೂರ, ಸಾಸವಡ, ವೆಲ್ಹೆ)

(ಆ) ಶಿವರಾಯರು .......... ಗೆದ್ದು ಸ್ವರಾಜ್ಯದ ತೋರಣ ಕಟ್ಟುವದು ಎಂದು ನಿಶ್ಚಯಿಸಿದರು.

(ಸಿಂಹಗಡ, ಶಿವನೇರಿ, ತೋರಣ)

(ಇ) ......... ಸ್ವರಾಜ್ಯದ ಮೊದಲ ರಾಜಧಾನಿಯಾಗಿ ಶೃಂಗರಿಸಲ್ಪಟ್ಟಿತು.

(ರಾಜಗಡ, ರಾಯಗಡ, ಪ್ರತಾಪಗಡ)

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಮಹಾರಾಷ್ಟ್ರದಲ್ಲಿ ಯಾವ ನಾಲ್ಕು ಅಡಳಿತಗಳು ಅಧಿಕಾರ ನಡೆಸುತ್ತಿದ್ದವು ?

(ಆ) ಶಿವರಾಯರು ತೋರಣಾ ಕೋಟೆಗಳ ಮೇಲೆ ಯಾವ ಅಧಿಕಾರಿಗಳನ್ನು ನೇಮಿಸಿದರು ?

(ಇ) ಶಿವರಾಯರು ಆದಿಲಶಾಹರಿಗೆ ಯಾವ ಉತ್ತರವನ್ನು ಕಳುಹಿಸಿದರು ?

**೩. ಕಾರಣಗಳನ್ನು ಬರೆಯಿರಿ.**

(ಅ) ಸ್ವರಾಜ್ಯದ ತೋರಣವನ್ನು ಕಟ್ಟುವ ಸಲುವಾಗಿ ಶಿವರಾಯರು ತೋರಣಾ ಕೋಟೆಯನ್ನು ಆಯ್ಕೆ ಮಾಡಿದರು.

(ಆ) ತೋರಣಾ ಕೋಟೆಯಲ್ಲಿ ದೊರೆತ ಮೊಹರುಗಳ ಕೊಡವನ್ನು ಕೆಲಸಗಾರರು ಶಿವರಾಯರಿಗೆ ತಂದು ಕೊಟ್ಟರು.

**ಉಪಕ್ರಮ**

ಶಿಕ್ಷಕರ ಸಹಾಯದಿಂದ ನಿಮ್ಮ ಪರಿಸರದಲ್ಲಿಯ ಕೋಟೆಗೆ ಪ್ರವಾಸವನ್ನು ಕೈಗೊಳ್ಳಿರಿ.

BKP9HV

# ೮. ಸ್ವಕೀಯ ಶತ್ರುಗಳ ನಿಯಂತ್ರಣ

**ಹೆದರಿಕೆ ಮೂಡಿತು :** ಶಿವರಾಯರ ಸುತ್ತಮುತ್ತಲೂ ಹನ್ನೆರಡು ಮಾವಳೆಗಳಲ್ಲಿಯ ಮಾವಳೆ ಜನರು ಸೇರಿಕೊಂಡರು. ಶಿವರಾಯರು ಹೇಳಿದ ಎಲ್ಲಾ ಕೆಲಸಗಳನ್ನು ಅವರು ಮಾಡುತ್ತಿದ್ದರು. ಸ್ವರಾಜ್ಯದ ಸಲುವಾಗಿ ಬಾಳುವುದು, ಸ್ವರಾಜ್ಯದ ಸಲುವಾಗಿ ಮಡಿಯುವುದು ಎಂದು ಅವರು ಭಾವಿಸುತ್ತಿದ್ದರು. ಅವರು ಸರಳ ನಡವಳಿಕೆಯ ಮುಗ್ಧ ಮರಾಠೀ ಜನರು ! ಅವರಿಗೆ ಶಿವರಾಯರೆಂದರೆ ಪಂಚಪ್ರಾಣ. ಆದರೆ ಕೆಲವು ಜನರಿಗೆ ಶಿವರಾಯರ ಕರ್ತೃತ್ವದ ಬಗ್ಗೆ ಅಸೂಯೆಯಾಗುತ್ತಿತ್ತು. ಇಂಥವರನ್ನು ಹಿಡಿತದಲ್ಲಿ ತರುವುದು ಶಿವರಾಯರಿಗೆ ಅಗತ್ಯವೆನಿಸಿತು.

ಖಂಡೋಜಿ ಮತ್ತು ಬಾಜಿ ಘೋರಪಡೆ ಈ ಸರದಾರರು ಆದಿಲಶಾಹನ ಸೇವೆಯಲ್ಲಿ ಇದ್ದರು. ಆದಿಲಶಾಹನು ಶಿವರಾಯರ ವಿರುದ್ಧ ಅವರ ಕಿವಿ ಊದಿದನು. ಕೊಂಢಾಣಾ ಭಾಗದಲ್ಲಿ ಅವರು ಗೊಂದಲವೆಬ್ಬಿಸಿದರು. ಆದರೆ ಶಿವರಾಯರು ಅವರ ಬೇಳೆಯನ್ನು ಬೇಯಗೊಡಲಿಲ್ಲ. ಅವರನ್ನು ಓಡಿಸಿಬಿಟ್ಟರು.

ಅದೇ ರೀತಿ ಫಲಟಣದ ಬಜಾಜಿ ನಾಯಿಕ ನಿಂಬಾಳಕರ, ಇವರಂತೂ ಶಿವರಾಯರ ಭಾವಮೈದುನ. ಶಿವರಾಯರು ಅವರ ವಿರುದ್ಧ ಕೂಡ ಯುದ್ಧ ಮಾಡಬೇಕಾಯಿತು. ಆದಾಗ್ಯೂ ಮುಂದೆ ಈ ಮನೆತನದಲ್ಲಿಯ ವ್ಯಕ್ತಿಗಳು ಶಿವರಾಯರ ಜೊತೆ ಉಳಿದರು.

ಶಿವರಾಯರ ಹತ್ತಿರದ ಸಂಬಂಧಿಕನಾದ ಸಂಭಾಜಿ ಮೋಹಿತೆ ಇವನು ಅವರ ಸುಪೆ ಪರಗಣೆಯಲ್ಲಿದ್ದನು. ಅವನೂ ಶಿವರಾಯರ ವಿರುದ್ಧ ಒಳಸಂಚು ಮಾಡತೊಡಗಿದನು. ಶಿವರಾಯರು ಸುಪೆಗೆ ಹೋಗಿ ಅವನನ್ನೂ ಸೆರೆಹಿಡಿದು ಕರ್ನಾಟಕಕ್ಕೆ ಅಟ್ಟಿದರು. ಕರ್ತವ್ಯದ ಮುಂದೆ ಶಿವರಾಯರು ಸಂಬಂಧಗಳನ್ನು ಲೆಕ್ಕಿಸುತ್ತಿರಲಿಲ್ಲ.

**ಜಾವಳಿಯ ಚಂದ್ರರಾವ ಮೋರೆ :** ಶಿವರಾಯರ ಕಾರ್ಯದ ಮಹತಿಯು ಎಲ್ಲಾ ಮಾವಳಿಗಳಿಗೆ ಮನವರಿಕೆಯಾಯಿತು. ಅವರ ಹೆಸರು ಎಲ್ಲೆಡೆಯಲ್ಲಿಯೂ ಪಸರಿಸಿತು. ಶಿವರಾಯರು ಜನರ ರಾಜರಾದರು. ಆದರೆ ಅದನ್ನು ಕೆಲವರಿಗೆ ಸಹಿಸಲಾಗಲಿಲ್ಲ. ಜಾವಳಿಯ ಮೋರೆ ಅಂಥವರಲ್ಲಿ ಒಬ್ಬರು. ಮೋರೆ ಜಾವಳಿಯ ಜಹಗೀರುದಾರರು. ಅವರ ಜಹಗೀರು ರಾಯಗಡದಿಂದ ಕೊಯನಾ ಕೊಳ್ಳದವರೆಗೆ ಹಬ್ಬಿತ್ತು. ಅವರು ವಿಜಾಪುರದ ಆದಿಲಶಾಹನ ಜಹಗೀರುದಾರರಾಗಿದ್ದರು. ಆದಿಲಶಾಹನು ಅವರಿಗೆ 'ಚಂದ್ರರಾವ' ಎಂಬ ಬಿರುದು ಕೊಟ್ಟಿದ್ದನು. ಜಾವಳಿಯ ಅರಣ್ಯ ಬಹಳ ದಟ್ಟವಾಗಿತ್ತು. ಹಾಡು ಹಗಲಿನಲ್ಲಿ ಸೂರ್ಯ ಕಿರಣಗಳೂ ಅಲ್ಲಿ ಮುಟ್ಟುತ್ತಿರಲಿಲ್ಲ. ಅದರಲ್ಲಿ ಹುಲಿ, ತೋಳ, ಕರಡಿ ಮೊದಲಾದ ಕಾಡುಮೃಗಗಳು ಸಂಚರಿಸುತ್ತಿದ್ದವು. ಮೋರೆಯವರ ಜಾವಳಿಯೆಂದರೆ ಹುಲಿಗಳ ಜಾಲವೇ ಆಗಿತ್ತು ! ಆದುದರಿಂದ ಮೋರೆಯವರ ಗೊಡವೆಗೆ ಯಾರೂ ಹೋಗುತ್ತಿರಲಿಲ್ಲ. ಆದರೆ ಶೂರ ಶಿವರಾಯರು ಆ ಸಾಹಸವನ್ನು ಮಾಡಿದರು.

ಅದಕ್ಕೆ ಕಾರಣವೇನೆಂದರೆ ದೌಲತರಾವ ಮೋರೆ ೧೬೪೫ ರಲ್ಲಿ ಮರಣ ಹೊಂದಿದನು. ಅವನ ವಾರಸುದಾರರಲ್ಲಿ ಕಲಹ ಆರಂಭವಾಯಿತು. ಶಿವರಾಯರು ಯಶವಂತರಾವ ಮೋರೆ ಇವನಿಗೆ ಸಹಾಯ ಮಾಡಿದರು. ಅವರ ಸಹಾಯದಿಂದಲೇ ಯಶವಂತರಾವ ಜಾವಳಿಯ ಗದ್ದುಗೆಯ ಮೇಲೆ ಚಂದ್ರರಾವ ಎಂದು ಏರಿದನು. ಆ ಸಮಯದಲ್ಲಿ ಯಶವಂತರಾವನು ಶಿವರಾಯರಿಗೆ ಕಪ್ಪಕಾಣಿಕೆ ಕೊಡುವುದನ್ನು ಒಪ್ಪಿಕೊಂಡನು. ಅವರ ಕಾರ್ಯದಲ್ಲಿ ಸಹಾಯ ಮಾಡುವುದಾಗಿಯೂ ಒಪ್ಪಿಕೊಂಡಿದ್ದನು. ಆದರೆ ಗದ್ದುಗೆ ಏರಿದ ಮೇಲೆ ಮಾತ್ರ ಅವನು ಅದನ್ನೆಲ್ಲಾ ಮರೆತನು. ಎಲ್ಲಿಯ ಶಿವಾಜಿ, ಎಲ್ಲಿಯ ಕರಾರು! ಎಂದು ಅವನು ಅಸಡ್ಡೆಯಿಂದ ವರ್ತಿಸತೊಡಗಿದನು. ಸ್ವರಾಜ್ಯದ ಪ್ರದೇಶಗಳ ಮೇಲೆ ದಾಳಿ ಮಾಡುವುದು, ಪ್ರಜೆಗಳಿಗೆ ತೊಂದರೆ ಕೊಡುವುದು ಇಂಥ ಪುಂಡತನವನ್ನು ಯಶವಂತರಾವ ಮಾಡತೊಡಗಿದನು. ಯೋಗ್ಯ ಸಮಯದಲ್ಲಿ ಮೋರೆಯನ್ನು ಹತೋಟಿಗೆ ತರದಿದ್ದರೆ ಸ್ವರಾಜ್ಯಕ್ಕೆ ಧಕ್ಕೆ ಉಂಟಾಗಬಹುದು ಎಂಬುದನ್ನು ಶಿವರಾಯರು ಗುರುತಿಸಿದರು.

**'ದಂಗೆ ಎದ್ದರೆ ಕೊಲ್ಲಲ್ಪಡುವಿರಿ' :** ಮೊದಲು ಶಿವರಾಯರು ಯಶವಂತರಾವ ಮೋರೆಗೆ ಒಂದು ಕಠೋರವಾದ ಪತ್ರ ಕಳುಹಿಸಿದರು. 'ನೀವು ಅರಸ

ಎಂದು ಕರೆದುಕೊಳ್ಳುತ್ತೀರಿ. ಅರಸರು ನಾವು. ನಮಗೆ ಶ್ರೀಶಂಭುವೇ ರಾಜ್ಯವನ್ನು ಕೊಟ್ಟಿದ್ದಾನೆ, ಆದ್ದರಿಂದ ನೀವು ಅರಸರೆಂದು ಹೇಳಿಕೊಳ್ಳಬಾರದು.'

ಯಶವಂತರಾವ ಮೋರೆ ಸೊಕ್ಕಿನಿಂದ ಉತ್ತರ ಬರೆದನು. 'ನೀವು ನಿನ್ನೆ ಅರಸರಾಗಿರುವಿರಿ. ನಿಮಗೆ ರಾಜ್ಯ ಯಾರು ಕೊಟ್ಟರು? ಬರುವಾಗ ಜಾವಳಿ, ಹೋಗುವಾಗ ಗೋವಲೀ ...... ನಮಗೆ ದೇವರ ಕೃಪೆಯಿಂದ ಆದಿಲಶಾಹನು ದಯ ತೋರಿ ರಾಜ ಈ ಪದವಿಯನ್ನೂ, ಛತ್ರಚಾಮರವನ್ನೂ, ಸಿಂಹಾಸನವನ್ನೂ ದಯಪಾಲಿಸಿದನು. ಇಲ್ಲಿ ಕುತಂತ್ರ ಮಾಡಿದರೆ ನಿಮಗೇ ಅಪಾಯವಾದೀತು.'

ಶಿವರಾಯರು ಪ್ರತ್ಯುತ್ತರ ಕಳುಹಿಸಿದರು. 'ಜಾವಳಿ ಬಿಟ್ಟು ಕೊಟ್ಟು ರಾಜನೆಂದು ಕರೆದುಕೊಳ್ಳದೆ, ಛತ್ರಚಾಮರಗಳನ್ನು ಬದಿಗೆ ಇಟ್ಟು ನಮ್ರತೆಯಿಂದ ಭೇಟಿಗೆ ಬಂದು ಮಹಾರಾಜರ ಸೇವೆ ಮಾಡುವುದು. ಇದನ್ನು ಬಿಟ್ಟು ದಂಗೆ ಎದ್ದರೆ ಕೊಲ್ಲಲ್ಪಡುವಿರಿ.'

ಜಾವಳಿಯ ಸುತ್ತ ದಟ್ಟವಾದ ಅರಣ್ಯವಿತ್ತು. ರಾಯರಿಯ ಕೋಟೆಯು ಅಜಿಂಕ್ಯವಾಗಿತ್ತು. ಮೋರೆಯ ಜನರೂ ತುಂಬಾ ಇದ್ದರು. ಜಾವಳಿ ಗೆಲ್ಲುವುದು ಸುಲಭವಾಗಿರಲಿಲ್ಲ, ಸಾಕಷ್ಟು ಸಿದ್ಧತೆ ಮಾಡಿಕೊಂಡು ಶಿವರಾಯರು ಜಾವಳಿಯ ಮೇಲೆ ದಾಳಿ ಮಾಡಿದರು. ಸುಮಾರು ಒಂದು ತಿಂಗಳತನಕ ಯಶವಂತರಾವನು ಕಾದಾಡಿದನು. ಆದರೆ ಅವನ ಅನೇಕ ಸೈನಿಕರು ಕೊಲ್ಲಲ್ಪಟ್ಟರು. ಕೊನೆಗೆ ತನ್ನ ಮಕ್ಕಳನ್ನು ಕರೆದುಕೊಂಡು ಯಶವಂತರಾವ ರಾಯರಿಗೆ ಓಡಿ ಹೋದನು. ಶಿವರಾಯರು ಜಾವಳಿ ವಶಪಡಿಸಿಕೊಂಡರು. ನಂತರ ಶಿವರಾಯರು ರಾಯರಿಯ ಮೇಲೆ ಏರಿ ಹೋದರು. ಅವರು ರಾಯರಿಯ ಕೋಟೆಗೆ ಮುತ್ತಿಗೆ ಹಾಕಿದರು. ಯಶವಂತರಾವ ಮೂರು ತಿಂಗಳು ಧೈರ್ಯದಿಂದ ಕಾದಾಡಿದನು. ಕೊನೆಗೆ ಅವನು ಸೋಲನ್ನು ಒಪ್ಪಿಕೊಳ್ಳಬೇಕಾಯಿತು.

**ರಾಯಗಡ ಕೋಟೆ :** ಜಾವಳಿಯ ವಿಜಯವು ಬಹಳ ಮಹತ್ವದ್ದಾಗಿತ್ತು. ಆ ವಿಜಯದಿಂದ ಸ್ವರಾಜ್ಯ ಮೊದಲಿಗಿಂತ ಎರಡು ಪಟ್ಟು ಹೆಚ್ಚಾಯಿತು. ಯಶವಂತರಾವರ ಸೈನ್ಯವೂ ಶಿವರಾಯರನ್ನು ಬಂದು ಸೇರಿತು. ರಾಯರಿಯ ಪ್ರಚಂಡ ಕೋಟೆಯು ಸ್ವರಾಜ್ಯಕ್ಕೆ ಸೇರಿತು. ಈ ಕೋಟೆಯನ್ನು ನೋಡಿ ಶಿವರಾಯರಿಗೆ ಧನ್ಯವೆನಿಸಿತು. ಅವರು ಈ ಕೋಟೆಗೆ 'ರಾಯಗಡ' ಎಂದು ಹೆಸರಿಟ್ಟರು. ಹತ್ತಿರದ ಭೋರಪ್ಯಾ ಗುಡ್ಡದ ಮೇಲೆ ಶಿವರಾಯರು ಒಂದು ಹೊಸ ಕೋಟೆಯನ್ನು ಕಟ್ಟಿಸಿದರು. ಅದಕ್ಕೆ ಪ್ರತಾಪಗಡ ಎಂದು ಹೆಸರಿಟ್ಟರು.



**ರಾಯಗಡ ಕೋಟೆ**

## ಅಭ್ಯಾಸ

**೧. ತಪ್ಪಾದ ಜೋಡಿಯನ್ನು ಗುರುತಿಸಿರಿ.**

(ಅ) ಫಲಟಣ - ನಿಂಬಾಳಕರ

(ಆ) ಜಾವಳಿ - ಮೋರೆ

(ಇ) ಸುಪೆ - ಜಾಧವ

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಜಾವಳಿಯ ಮೋರೆಯವರಿಗೆ ಆದಿಲಶಾಹನು ಯಾವ ಬಿರುದು ನೀಡಿದ್ದನು ?

(ಆ) ಜಾವಳಿಯ ವಿಜಯವು ಏಕೆ ಮಹತ್ವದ್ದಾಗಿತ್ತು ?

**೩. ಎರಡು-ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಜಾವಳಿಯ ಮೋರೆಯವರ ಗೊಡವೆಗೆ ಯಾರೂ ಏಕೆ ಹೋಗುತ್ತಿರಲಿಲ್ಲ ?

(ಆ) ಶಿವರಾಯರು ಯಶವಂತರಾವ ಮೋರೆಗೆ ಯಾವ ಕಠೋರವಾದ ಪತ್ರ ಕಳುಹಿಸಿದರು ?

**ಉಪಕ್ರಮ**

(ಅ) ರಾಯಗಡದ ಚಿತ್ರಗಳನ್ನು ಸಂಗ್ರಹಿಸಿರಿ.

(ಆ) ದೀಪಾವಳಿಯ ರಜೆಯಲ್ಲಿ ನಿಮ್ಮ ಗೆಳೆಯರೊಂದಿಗೆ ರಾಯಗಡದ ಪ್ರತಿಕೃತಿಯನ್ನು ತಯಾರಿಸಿರಿ.

8KSH85

# ೯. ಪ್ರತಾಪಗಡದಲ್ಲಿಯ ಪರಾಕ್ರಮ

**ಆದಿಲಶಾಹಿ ನಡುಗಿತು :** ವಿಜಾಪುರದ ದರಬಾರಿನ ಒಂದು ಸಂಗತಿ. ಶಿವರಾಯರ ಹೆಚ್ಚುತ್ತಲಿದ್ದ ಚಟುವಟಿಕೆಗಳನ್ನು ಕೇಳಿ ಆದಿಲಶಾಹನ ದರಬಾರವು ಚಿಂತೆಯಲ್ಲಿ ಮುಳುಗಿತು. ದರಬಾರಿನಲ್ಲಿ ಎಲ್ಲ ಸರದಾರರು ಒಟ್ಟುಗೂಡಿದರು. ಒಬ್ಬೊಬ್ಬ ಪ್ರಸಿದ್ಧ ಕಠಾರಿ ವೀರನೂ ದರಬಾರಿನಲ್ಲಿ ಹಾಜರಿದ್ದನು. ಆದಿಲಶಾಹಿಯ ಆಡಳಿತವನ್ನು ನೋಡಿಕೊಳ್ಳುವ ಮಹಾರಾಣಿಯು ಸ್ವತಃ ದರಬಾರಿನಲ್ಲಿ ಹಾಜರಿದ್ದಳು. 'ಶಿವಾಜಿಯನ್ನು ಸದೆಬಡಿಯುವುದು ಹೇಗೆ ?' ಎಂಬುದು ದರಬಾರಿನ ಮುಂದಿನ ಮಹತ್ವದ ಪ್ರಶ್ನೆಯಾಗಿತ್ತು.

ಮಹಾರಾಣಿಯು ದರಬಾರಿನ ಸರದಾರರಿಗೆ ನೇರ ಪ್ರಶ್ನೆ ಹಾಕಿದಳು, ''ಹೇಳಿ, ಯಾರು ಸಿದ್ಧರಿದ್ದೀರಿ, ಶಿವಾಜಿಯನ್ನು ಹತೋಟಿಗೆ ತರಲು ?''

ದರಬಾರಿನಲ್ಲಿ ಶಾಂತತೆ ಪಸರಿಸಿತು. ಪ್ರತಿಯೊಬ್ಬನೂ ತನ್ನ ಸ್ಥಾನದಲ್ಲಿ ನಿಶ್ಯಬ್ದನಾದನು. ಶಿವರಾಯರನ್ನು ಎದುರಿಸುವ ಧೈರ್ಯ ತೋರಿಸುವವರು ಯಾರು ? ಒಬ್ಬ ಇನ್ನೊಬ್ಬನ ಮುಖ ನೋಡತೊಡಗಿದನು. ಅಷ್ಟರಲ್ಲಿ ದಷ್ಟಪುಷ್ಟ ದೇಹದ ಒಬ್ಬ ಸರದಾರನು ಬಾಗಿ ಮುಜುರೆ ಮಾಡಿ ಮುಂದೆ ಬಂದನು. ಅವನ ಹೆಸರು ಅಫಜಲಖಾನ.

**ಖಾನನು ವೀಳ್ಯ ಸ್ವೀಕರಿಸಿದನು :** ಹರಿವಾಣದಿಂದ ವೀಳ್ಯವನ್ನು ಎತ್ತುತ್ತ ಅಫಜಲಖಾನನು ಹೇಳಿದನು, ''ಶಿವಾಜಿ ? ಎಲ್ಲಿಯ ಶಿವಾಜಿ ? ಅವನನ್ನು ನಾನು ಜೀವಂತ ಸೆರೆ ಹಿಡಿದು ಇಲ್ಲಿ ತರುವೆನು. ಇಲ್ಲದಿದ್ದರೆ ಅವನನ್ನು ಕೊಂದು ವಿಜಾಪುರಕ್ಕೆ ತರುತ್ತೇನೆ.''

ಅಫಜಲಖಾನನೆಂದರೆ ವಿಜಾಪುರ ದರಬಾರಿನ ದೊಡ್ಡ ಸರದಾರ. ಪ್ರಚಂಡ ಶಕ್ತಿವಂತ ! ಉಕ್ಕಿನ ಹಾರೆಯನ್ನು ಕೈಯಿಂದ ಬಗ್ಗಿಸುವಂಥವನು. ಯೋಗ್ಯ ಅಯೋಗ್ಯ ಯಾವುದೇ ಮಾರ್ಗದಿಂದ ಆಗಲಿ ತನ್ನ ಕೆಲಸವನ್ನು ಸಾಧಿಸುವುದರಲ್ಲಿ ಅವನು ಪಳಗಿದವನು. ಇಂಥ ಅಫಜಲಖಾನನು ಶಿವರಾಯರನ್ನು ಜೀವಂತ ಇಲ್ಲವೆ ಕೊಂದು ತರುವ ವೀಳ್ಯವನ್ನು ತುಂಬಿದ ದರಬಾರಿನಲ್ಲಿ ಸ್ವೀಕರಿಸಿದನು. ಇಡೀ ದರಬಾರಕ್ಕೆ ಸಂತೋಷವಾಯಿತು. ದರಬಾರಿನಲ್ಲಿ ಹಾಜರಿದ್ದ ಪ್ರತಿಯೊಬ್ಬನಿಗೂ ಅನಿಸಿತು, 'ಈಗ ಶಿವಾಜಿ ಭೋಸಲೆ ಹೇಗೆ ಜೀವಂತ ಉಳಿಯಬಲ್ಲನು? ಕೆಲವೇ ದಿವಸಗಳಲ್ಲಿ ವಿಜಾಪುರದ ದರಬಾರಿನಲ್ಲಿ ಸಂಕೋಲೆಗಳಿಂದ ಬಂಧಿಸಲ್ಪಟ್ಟ ಅವಸ್ಥೆಯಲ್ಲಿ ಶಿವಾಜಿ ಹಾಜರಾಗುವನು, ಅದಿಲ್ಲದಿದ್ದರೆ ಅವನ ರುಂಡವಾದರೂ ದರಬಾರಕ್ಕೆ ಬರುವುದು.'

ಅಫಜಲಖಾನನು ಬಹಳ ಗರ್ವ ಮತ್ತು ಸಡಗರದಿಂದ ವಿಜಾಪುರದಿಂದ ಹೊರಟನು. ಅವನು ತನ್ನ ಜೊತೆಯಲ್ಲಿ ದೊಡ್ಡ ಸೈನ್ಯವನ್ನೂ, ಯುದ್ಧದ ಸಾಮಗ್ರಿಗಳನ್ನೂ ತೆಗೆದುಕೊಂಡನು. ಈ ಮೊದಲು ಅಫಜಲಖಾನನು ಹನ್ನೆರಡು ವರ್ಷ ವಾಯಿಯ ಸುಭೇದಾರನಾಗಿದ್ದನು. ಆದ್ದರಿಂದ ಅವನಿಗೆ ಆ ಪ್ರಾಂತವು ಚೆನ್ನಾಗಿ ಗೊತ್ತಿತ್ತು. ಅವನು ಮಹಾ ಗರ್ವದಿಂದ ಮಹಾರಾಷ್ಟ್ರದ ದಾರಿ ಹಿಡಿದು ನಡೆಯತೊಡಗಿದನು.

**ಸ್ವರಾಜ್ಯದ ಮೇಲಿನ ಸಂಕಟ :** ಶಿವರಾಯರು ಆ ಸಮಯದಲ್ಲಿ ರಾಯಗಡದಲ್ಲಿ ಇದ್ದರು. ಅವರಿಗೆ ಅಫಜಲಖಾನನು ದಂಡೆತ್ತಿ ಬರಲಿರುವನೆಂದು ತಿಳಿಯಿತು. ಸ್ವರಾಜ್ಯದ ಮೇಲೆ ದೊಡ್ಡ ಸಂಕಟ ಬಂದಿತೆಂದು ಅವರು ತಿಳಿದರು. ಆದರೆ ಅವರು ಧೈರ್ಯಗೆಡಲಿಲ್ಲ. ಖಾನನು ಮೋಸಗಾರನು. ಅವನ ಸೇವೆ ದೊಡ್ಡದು. ನಮ್ಮ ರಾಜ್ಯ ಚಿಕ್ಕದು, ನಮ್ಮ ಸೈನ್ಯ ಚಿಕ್ಕದು. ತೆರೆದ ಮೈದಾನದಲ್ಲಂತೂ ಖಾನನ ಮುಂದೆ ತನ್ನ ಶಕ್ತಿ ಸಾಲದು ! ಎಂದು ಅವರು ಆಲೋಚಿಸಿದರು. ಅವನ ಜೊತೆ ಯುಕ್ತಿಯಿಂದ ಕಾದಾಡಬೇಕೆಂದು ಶಿವರಾಯರು ನಿರ್ಣಯಿಸಿದರು. ಅವರು ರಾಜಗಡದಲ್ಲಿ ಜಿಜಾಮಾತೆಯೊಂದಿಗೆ ವಿಚಾರ ವಿನಿಮಯ ಮಾಡಿ ಹಾಗೂ ಅವರ ಆಶೀರ್ವಾದ ಪಡೆದು ಪ್ರತಾಪಗಡದ ಕಡೆಗೆ ಹೊರಟರು.

**ಅಫಜಲಖಾನನ ಒಳಸಂಚು :** ಶಿವರಾಯರು ಪ್ರತಾಪಗಡಕ್ಕೆ ಹೋದರೆಂಬ ಸುದ್ದಿ ತಿಳಿದ ತಕ್ಷಣ ಖಾನನು ಕುಪಿತನಾದನು. ಪ್ರತಾಪಗಡ ಏರಿ ಹೋಗುವದೇನೂ ಸುಲಭವಲ್ಲ ಎಂಬುದು ಅವನಿಗೆ ತಿಳಿದಿತ್ತು. ಕಾರಣ ಆ ಕೋಟೆ ಪರ್ವತದ ಮೇಲೆ ಇತ್ತು. ಸುತ್ತಲೂ ದಟ್ಟ ಅರಣ್ಯವಿತ್ತು. ದಾರಿಯಲ್ಲಿ ಎತ್ತರವಾದ ಪರ್ವತ ಶಿಖರಗಳಿದ್ದವು. ಸೇನೆಗೆ ಮುಂದೆ ಸಾಗಲು

ಯೋಗ್ಯ ಮಾರ್ಗವಿರಲಿಲ್ಲ, ತೋಪುಗಳನ್ನು ಒಯ್ಯಲು ಮಾರ್ಗವಿರಲಿಲ್ಲ. ಅಲ್ಲದೆ ಅಲ್ಲಿ ಕಾಡು ಮೃಗಗಳ ತೊಂದರೆಯಂತೂ ಭಯಂಕರವಾಗಿತ್ತು !

ಶಿವರಾಯರು ಪ್ರತಾಪಗಡವನ್ನು ಇಳಿದು ಬರಬೇಕೆಂದು ಖಾನನು ಒಳಸಂಚು ಮಾಡತೊಡಗಿದನು. ತುಳಜಾಪುರ, ಪಂಢರಪುರ ಈ ದೇವಸ್ಥಾನಗಳಿಗೆ ತೊಂದರೆ ಕೊಟ್ಟನು. ಪ್ರಜೆಗಳನ್ನು ತುಂಬಾ ಪೀಡಿಸಿದನು. ಇದನ್ನು ಕೇಳಿಯಾದರೂ ಶಿವರಾಯರು ಪ್ರತಾಪಗಡ ಬಿಟ್ಟು ಹೊರಗೆ ಬರಬಹುದು ಎಂಬುದೇ ಖಾನನ ಯುಕ್ತಿಯಾಗಿತ್ತು. ಶಿವರಾಯರು ಖಾನನ ಯುಕ್ತಿಯನ್ನು ಅರಿತರು. ಅವರು ಪ್ರತಾಪಗಡವನ್ನು ಬಿಡಲೇ ಇಲ್ಲ. ಆಗ ಖಾನನು ಮತ್ತೊಂದು ಸಂಚು ಹೂಡಿದನು. ಪ್ರೀತಿಯ ನಟನೆ ಮಾಡಿ ಶಿವರಾಯರಿಗೆ ಸಂದೇಶ ಕಳುಹಿಸಿದನು. 'ನೀವು ನನ್ನ ಮಗನ ಸಮಾನ. ನನ್ನ ಭೇಟಿಗೆ ಬನ್ನಿರಿ. ನಮ್ಮ ಕೋಟೆಗಳನ್ನು ತಿರುಗಿ ಕೊಡಿರಿ. ನಿಮಗೆ ನಾನು ಆದಿಲಶಾಹರಿಂದ ಸರದಾರ ಸ್ಥಾನವನ್ನು ಕೊಡಿಸುತ್ತೇನೆ.'


**ಸೇರಿಗೆ ಸವ್ವಾಸೇರು :** ಖಾನನು ತನ್ನೊಡನೆ ಕಪಟ ಸಂಚು ಹೂಡುತ್ತಿದ್ದಾನೆ ಎಂಬುದನ್ನು ಶಿವರಾಯರು ತಕ್ಷಣ ಅರಿತರು. ಅವರು ಜಾಗರೂಕತೆಯಿಂದ ವರ್ತಿಸುತ್ತಿದ್ದರು. ಅವರು ಖಾನನನ್ನೇ ಪ್ರತಾಪಗಡದ ಕೆಳಗೆ ಎಳೆದು ತರುವ ನಿರ್ಧಾರ ಮಾಡಿದರು. ಅವರು ಖಾನನಿಗೆ ಸಂದೇಶ ಹೀಗೆ ಕಳುಹಿಸಿದರು. 'ಖಾನ ಸಾಹೇಬರೆ, ನಾನು ನಿಮ್ಮ ಕೋಟೆಗಳನ್ನು ತೆಗೆದುಕೊಂಡೆನು. ನಾನು ಅಪರಾಧಿಯಾಗಿದ್ದೇನೆ. ನನ್ನನ್ನು ಕ್ಷಮಿಸಿರಿ. ನೀವೇ ಪ್ರತಾಪಗಡದ ಕೆಳಗೆ ಭೇಟಿಗೆ ಬರಬೇಕು. ನನಗೆ ನಿಮ್ಮಲ್ಲಿಗೆ ಬರಲು ಭಯವಾಗುತ್ತದೆ.'

ಶಿವರಾಯರ ಸಂದೇಶ ಕೇಳಿ ಅಫಜಲಖಾನನು ನಕ್ಕನು. 'ವಾ ! ತುಂಬಾ ಸಂತೋಷ' ತನ್ನ ಗಡ್ಡವನ್ನು ತೀಡುತ್ತಾ ಅವನು ಅಂದನು. ''ಈ ಅಫಜಲಖಾನನ ಮುಂದೆ ಶಿವಾಜಿಯದೇನು ಧೈರ್ಯ ! ಈ ಅಂಜುಬುರುಕನು ನನ್ನೊಡನೆ ಎಂಥಾ ಯುದ್ಧ ಮಾಡಬಲ್ಲ! ತಾನೇ ಹೋಗಬೇಕು ಮತ್ತು ಭೇಟಿಯಲ್ಲಿ ಅವನನ್ನು ಜಜ್ಜಿ ಬಿಡಬೇಕು.'' ಖಾನನು ಶಿವರಾಯರನ್ನು ಪ್ರತಾಪಗಡದ ಕೆಳಗೆ ಭೇಟಿಯಾಗಲು ಸಿದ್ಧನಾದನು.

**ಭೇಟಿ ನಿಶ್ಚಿತವಾಯಿತು :** ಪ್ರತಾಪಗಡದ ಕೆಳಗಿನ ಮಾಚಿಯ ಮೇಲೆ ಭೇಟಿಯಾಗುವ ಸ್ಥಳ ನಿರ್ಧಾರವಾಯಿತು. ದಿನ ನಿಶ್ಚಯವಾಯಿತು. ಸಮಯವೂ ನಿಶ್ಚಿತವಾಯಿತು. ಭೇಟಿಯ ಸಮಯದಲ್ಲಿ ಇಬ್ಬರೂ ತಮ್ಮ ಜೊತೆಯಲ್ಲಿ ಒಬ್ಬೊಬ್ಬ ಸೇವಕನನ್ನು ತರಬೇಕು ಮತ್ತು ತಮ್ಮ ಹತ್ತು ಅಂಗರಕ್ಷಕರನ್ನು ನಿರ್ಧಾರಿತ



**ಪ್ರತಾಪಗಡ ಕೋಟೆ**




ಸ್ಥಳದಲ್ಲಿ ದೂರದಲ್ಲಿ ಇಡಬೇಕೆಂದು ನಿರ್ಧಾರವಾಯಿತು. ಮಹಾರಾಜರು ಖಾನನಿಗಾಗಿ ಒಳ್ಳೆಯ ರಸ್ತೆಯನ್ನು ನಿರ್ಮಿಸಿದರು. ಭೇಟಿಯ ಸಲುವಾಗಿ ಸುಂದರವಾದ ಮಂಟಪವನ್ನು ನಿರ್ಮಿಸಿದರು.

ಶಿವರಾಯರು ತುಂಬಾ ಜಾಗರೂಕತೆಯಿಂದ ವರ್ತಿಸುತ್ತಿದ್ದರು. ಅವರು ತಮ್ಮ ಸೈನ್ಯವನ್ನು ಬೇರೆ ಬೇರೆ ತುಕಡಿಗಳಲ್ಲಿ ವಿಭಾಗಿಸಿದರು. ಅರಣ್ಯದಲ್ಲಿ ಯಾರು ಎಲ್ಲಿ ಅಡಗಿರಬೇಕು. ಏನು ಮಾಡಬೇಕು ಎಂಬುದರ ಬಗ್ಗೆ ಅವರಿಗೆ ಸೂಚನೆ ಕೊಟ್ಟರು. ಸಂಪೂರ್ಣ ಸಿದ್ಧತೆ ಮಾಡಿದರು. ಖಾನನು ಮೋಸಗಾರ ಇದ್ದಾನೆ. ಶಿವರಾಯರು ಅವನ ಭೇಟಿ ಮಾಡಕೂಡದು ಎಂದು ಕೆಲವು ಸಲಹೆಗಾರರು ಹೇಳಿದರು. ಆದರೆ ಶಿವರಾಯರು ಖಾನನನ್ನು ಭೇಟಿಯಾಗುವ ನಿರ್ಧಾರವನ್ನು ಖಚಿತಪಡಿಸಿದರು.

**ಭೇಟಿಯ ಸಿದ್ಧತೆ :** ಭೇಟಿಯ ದಿವಸ ಉದಯಿಸಿತು. ಬೆಳಿಗ್ಗೆ ಶಿವರಾಯರು ಭವಾನಿ ದೇವಿಯ ದರ್ಶನ ಪಡೆದರು. ಸ್ವಲ್ಪ ವೇಳೆಯ ನಂತರ ಅವರು ವೇಷಭೂಷಣ ಮಾಡಿಕೊಳ್ಳಲು ಆರಂಭಿಸಿದರು. ಕಾಲಲ್ಲಿ ಸಲವಾರು ಹಾಕಿಕೊಂಡರು. ಮೈಮೇಲೆ ಚಿಲಕತ್ತು ಹಾಕಿಕೊಂಡರು. ಅದರ ಮೇಲೆ ಜರಿಯ ನಿಲುವಂಗಿ ಮತ್ತು ಜಾಕೀಟು ಹಾಕಿದರು. ತಲೆಗೆ ಶಿರಸ್ತ್ರಾಣವನ್ನು ಹಾಕಿಕೊಂಡರು. ಅದರ ಮೇಲೆ ಜರಿಯ ಟೋಪಿ ಹಾಕಿಕೊಂಡರು. ಎಡಗೈ ಬೆರಳುಗಳಲ್ಲಿ ಹುಲಿಯುಗುರುಗಳನ್ನು ಹಾಕಿಕೊಂಡರು. ಅದೇ ಕೈಯಲ್ಲಿ ಬಿಚ್ಚುಗತ್ತಿಯನ್ನು ಬಚ್ಚಿಟ್ಟುಕೊಂಡರು. ಜೊತೆಗೆ ಪಟ್ಟಾ ತೆಗೆದುಕೊಂಡರು. ಹೀಗೆ ಶಿವರಾಯರು ಖಾನನ ಭೇಟಿಗೆ ಸಿದ್ಧರಾದರು.

ಹೊರಗೆ ಸರದಾರರು ನಿಂತಿದ್ದರು. ಶಿವರಾಯರು ಅವರಿಗೆ ಹೇಳಿದರು, ''ಮಿತ್ರರೇ, ನಿಮ್ಮ ನಿಮ್ಮ ಕೆಲಸಗಳನ್ನು ಸರಿಯಾಗಿ ಮಾಡಿರಿ. ಭವಾನಿ ಮಾತೆಯು ಯಶಸ್ಸು ಕೊಡುವಳು. ಆದರೆ ಒಂದು ವೇಳೆ ನನಗೆ ಏನಾದರೂ ಅಪಾಯವಾದರೆ ನೀವು ಧೈರ್ಯ ಕಳೆದುಕೊಳ್ಳಬೇಡಿರಿ. ಸಂಭಾಜಿ ರಾಜರಿಗೆ ಪಟ್ಟಗಟ್ಟಿರಿ. ತಾಯಿಯ ಆಜ್ಞೆ ಪ್ರಕಾರ ನಡೆಯಿರಿ. ಸ್ವರಾಜ್ಯವನ್ನು ವಿಸ್ತರಿಸಿರಿ. ಪ್ರಜೆಗಳನ್ನು ಸುಖಿಯನ್ನಾಗಿ ಮಾಡಿರಿ. ನಾನು ಹೊರಟೆ !'' ಶಿವರಾಯರು ಹೊರಟರು. ಜೊತೆಯಲ್ಲಿ ವಕೀಲ ಪಂತಾಜಿ ಗೋಪಿನಾಥ ಮತ್ತು ಜೀವಾಜಿ ಮಹಾಲಾ, ಸಂಭಾಜಿ ಕಾವಜಿ, ಯೇಸಾಜಿ ಕಂಕ, ಕೃಷ್ಣಾಜಿ ಗಾಯಕವಾಡ ಸಿದ್ದೀ ಇಬ್ರಾಹಿಂ ಮುಂತಾದ ಹತ್ತು ಅಂಗರಕ್ಷಕರಿದ್ದರು.

ಖಾನನು ಶಿವರಾಯರಿಗಿಂತ ಮೊದಲೇ ಬಂದು ಮಂಟಪದಲ್ಲಿ ಕುಳಿತಿದ್ದನು. ಕುಳಿತಲ್ಲಿ ಗಾಳಿಗೋಪುರ ಕಟ್ಟುತ್ತಿದ್ದನು. ಅವನ ಪಕ್ಕದಲ್ಲಿ ಬಡಾ ಸಯ್ಯದ ಎಂಬ ಶಸ್ತ್ರಧಾರಿ ಸೈನಿಕನು ನಿಂತಿದ್ದನು. ಅವನು ಪಟ್ಟಾ ತಿರುಗಿಸುವುದರಲ್ಲಿ ತುಂಬಾ ನಿಪುಣ. ಶಿವರಾಯರು ಮಂಟಪದ ಬಾಗಿಲ ಹತ್ತಿರ ಬಂದರು. ಬಡಾ ಸಯ್ಯದನ ಕಡೆಗೆ ನೋಡುತ್ತಿದ್ದಂತೆ ಅಲ್ಲಿಯೇ ನಿಂತುಕೊಂಡರು. ಖಾನನು ಮಹಾರಾಜರ ವಕೀಲನಿಗೆ ಕೇಳಿದನು, ''ಶಿವಾಜಿರಾಜೇ ಒಳಗೆ ಏಕೆ ಬರುವುದಿಲ್ಲ ?''

ವಕೀಲ ಹೇಳಿದನು, ''ಅವರು ಬಡಾ ಸಯ್ಯದನಿಗೆ ಹೆದರುತ್ತಾರೆ. ಅವನನ್ನು ಸ್ವಲ್ಪ ದೂರ ಕಳಿಸಿರಿ. !'' ಬಡಾ ಸಯ್ಯದನು ದೂರ ಸರಿದನು. ಶಿವರಾಯರು ಒಳಗೆ ಹೋದರು. ಖಾನನು ಎದ್ದು ನಿಂತು ಹೇಳಿದನು, ''ಬನ್ನಿ ರಾಜರೆ, ನನಗೆ ಭೇಟಿಯಾಗಿರಿ.''



**ಶಿವರಾಯರು ಮತ್ತು ಅಫಜಲಖಾನನ ಭೇಟಿ**

**ಅಫಜಲಖಾನನೊಡನೆ ಗುದ್ದಾಟ :** ಮಹಾರಾಜರು ಎಚ್ಚರದಿಂದ ಮುಂದೆ ಸರಿದರು. ಖಾನನು ಶಿವರಾಯರನ್ನು ಆಲಂಗಿಸಿದನು. ದಷ್ಟಪುಷ್ಟ ಖಾನನ ಮುಂದೆ ಶಿವರಾಯರು ಬಹಳ ಕುಬ್ಜರಾಗಿ ತೋರುತ್ತಿದ್ದರು. ಶಿವರಾಯರ ತಲೆ ಖಾನನ ಎದೆಯತನಕ ಬಂತು. ಕೂಡಲೇ ಖಾನನು ಶಿವರಾಯರನ್ನು ಕೊಲ್ಲಲು ಅವರ ಕುತ್ತಿಗೆಯನ್ನು ತನ್ನ ಎಡ ಕಂಕುಳಲ್ಲಿ ದಬ್ಬಿದನು. ಬೇರೊಂದು ಕೈಯಿಂದ ಶಿವರಾಯರ ಕಂಕುಳಕ್ಕೆ ಕಠಾರಿಯ ಹೊಡೆತ ಹಾಕಿದನು. ಶಿವರಾಯರ ಮೈಮೇಲಿನ ಜಾಕೀಟು ಟರ್ರನೆ ಹರಿಯಿತು. ಜಾಕೀಟನೊಳಗೆ ಚಿಲಕತ್ತು ಇದ್ದುದರಿಂದ ಶಿವರಾಯರು ಬದುಕಿದರು. ಅವರು ಖಾನನ ಹೊಂಚನ್ನು ಅರಿತರು. ಅವರು ಅತ್ಯಂತ ಚಪಲತೆಯಿಂದ ಖಾನನ ಹೊಟ್ಟೆಯಲ್ಲಿ ಹುಲಿಯುಗುರುಗಳಿಂದ ಇರಿದರು. ಎಡಗೈಯಲ್ಲಿ ಅಡಗಿಸಿಟ್ಟಿದ್ದ ಬಿಚ್ಚುಗತ್ತಿಯನ್ನು ಬಲಗೈಯಿಂದ ತೆಗೆದು ಖಾನನ ಹೊಟ್ಟೆಯಲ್ಲಿ ಇರಿದರು. ಖಾನನ ಕರುಳು ಹೊರ ಬಂದಿತು. ಖಾನನು ಕುಸಿದನು. ಅಷ್ಟರಲ್ಲಿ ಖಾನನ ವಕೀಲ ಕೃಷ್ಣಾಜಿ ಭಾಸ್ಕರನು ಮುಂದೆ ಬಂದನು. ಅವನು ಶಿವರಾಯರ ಮೇಲೆ ತಲವಾರಿನಿಂದ ಪ್ರಹಾರ ಮಾಡಿದನು. ಆದರೆ ಶಿವರಾಯರು ತಮ್ಮ ಖಡ್ಗದ ಒಂದೇ ಹೊಡೆತದಿಂದ ಅವನನ್ನು ಕೊಂದು ಬಿಟ್ಟರು. ಈ ಹಣಾಹಣಿಯನ್ನು ನೋಡಿ ಬಡಾ ಸಯ್ಯದನು ಮಂಟಪಕ್ಕೆ ಧಾವಿಸಿದನು. ಅವನು ಶಿವರಾಯರ ಮೇಲೆ ಖಡ್ಗ ಬೀಸುವಷ್ಟರಲ್ಲಿ ಜೀವಾಜಿ ಮಹಾಲಾ ಓಡಿ ಬಂದನು. ಬಡಾ ಸಯ್ಯದ ಹೊಡೆತವನ್ನು ತಾನು ಸಹಿಸಿ ಜೀವಾಜಿ ಮಹಾಲನು ಒಂದೇ ಏಟಿನಲ್ಲಿ ಬಡಾ ಸಯ್ಯದವನ್ನು ಕೊಂದು ಹಾಕಿದನು. ''ಜೀವಾ ಇದ್ದನೆಂದು ಶಿವಾ ಬದುಕಿದ'' ಎಂಬ ನಾಣ್ನುಡಿ ಮುಂದೆ ರೂಢಿಯಲ್ಲಿ ಬಂದಿತು. ಆ ಸಮಯದಲ್ಲಿ ನಡೆದ ಸಂಘರ್ಷದಲ್ಲಿ ಸಂಭಾಜಿ ಕಾವಜಿಯು ಅಪ್ರತಿಮ ಪರಾಕ್ರಮವನ್ನು ತೋರಿದನು.

**ಅಫಜಲಖಾನನ ಸೈನ್ಯದ ಸೋಲು :** ವಿಜಯಿಯಾದ ಶಿವರಾಯರು ಕೋಟೆಯ ಕಡೆಗೆ ನಡೆದರು. ಸೂಚನೆಯ ತೋಫು ಹಾರಿಸಲಾಯಿತು. ಶಿವರಾಯರ ಸೈನ್ಯವು ಸೂಚನೆಯ ದಾರಿಯನ್ನೇ ಕಾಯುತ್ತಿತ್ತು. ತೋಫು ಹಾರಿಸಿದ ಕೂಡಲೇ ಮರಗಿಡಗಳ ಎಡೆಯಲ್ಲಿ ಅಡಗಿ ಕುಳಿತಿದ್ದ ಶಿವರಾಯರ ಸೈನಿಕರು ಖಾನನ ಸೈನ್ಯದ ಮೇಲೆ ಮುಗಿ ಬಿದ್ದರು. ಖಾನನ ಸೈನಿಕರು ಎಚ್ಚರದಿಂದಿರಲಿಲ್ಲ. ಅವರಿಗೆ

ಓಡಲೂ ದಾರಿ ಸಿಗಲಿಲ್ಲ. ಮರಾಠರು ಭರದಿಂದ ಅವರ ಬೆನ್ನು ಹತ್ತಿದರು. ಖಾನನ ಸೈನ್ಯವನ್ನು ಧ್ವಂಸ ಮಾಡಿದರು. ಅಫಜಲಖಾನನ ಮಗ ಫಾಜಲಖಾನ ಹೇಗೋ ತಪ್ಪಿಸಿಕೊಂಡು ವಿಜಾಪುರ ತಲುಪಿದನು. ಅವನು ತಿಳಿಸಿದ ವಾರ್ತೆಯಿಂದ ವಿಜಾಪುರದಲ್ಲಿ ಹಾಹಾಕಾರವೆದ್ದಿತು.

ವಿಜಾಪುರದ ಅತ್ಯಂತ ಬಲಾಢ್ಯ ಸರದಾರನನ್ನು ಶಿವರಾಯರು ಬಹು ಸುಲಭವಾಗಿ ಮಣ್ಣುಗೂಡಿಸಿದರು. ಶಿವರಾಯರ ಹೆಸರು ಎಲ್ಲೆಡೆಯಲ್ಲೂ ಪಸರಿಸಿತು. ಅವರ ಪರಾಕ್ರಮದ ಲಾವಣಿಗಳು ಸಹ್ಯಾದ್ರಿಯ ಗಿರಿಕಂದರಗಳಲ್ಲಿ ಪ್ರತಿಧ್ವನಿಸತೊಡಗಿದವು.

## ಅಭ್ಯಾಸ

**೧. ಕೊಟ್ಟ ಅಕ್ಷರಗಳಿಂದ ಯೋಗ್ಯ ಶಬ್ದವನ್ನು ತಯಾರಿಸಿರಿ.**

(ಅ) ತಾ ಗ ಪ್ರ ಡ ಪ ....................

(ಆ) ವ ರಾ ಯ ಶಿ ....................

(ಇ) ಖಾ ಅ ಝು ನ ಲ ಫ ....................

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಅಫಜಲಖಾನನು ಯಾವ ವೀಳ್ಯ ಸ್ವೀಕರಿದನು ?

(ಆ) ಪ್ರೀತಿಯ ನಟನೆ ಮಾಡಿ ಅಫಜಲಖಾನನು ಶಿವರಾಯರಿಗೆ ಯಾವ ಸಂದೇಶವನ್ನು ಕಳುಹಿಸಿದನು.

**೩. ಎರಡು-ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಶಿವರಾಯರು ಅಫಜಲಖಾನನೊಂದಿಗೆ ಯುಕ್ತಿಯಿಂದಲೇ ಕಾದಾಡಬೇಕೆಂದು ಏಕೆ ನಿರ್ಧರಿಸಿದರು ?

(ಆ) ಅಫಜಲಖಾನನ ಭೇಟಿಗೆ ಹೋಗುವಾಗ ಶಿವರಾಯರು ತಮ್ಮ ಸರದಾರರಿಗೆ ಏನೆಂದು ಹೇಳಿದರು ?

**೪. ಕಾರಣಗಳನ್ನು ಕೊಡಿರಿ.**

(ಅ) ಶಿವರಾಯರು ಪ್ರತಾಪಗಡಕ್ಕೆ ಹೋದರೆಂಬ ಸುದ್ದಿ ತಿಳಿದ ತಕ್ಷಣ ಖಾನನು ಕುಪಿತನಾದನು.

(ಆ) ವಿಜಾಪುರದಲ್ಲಿ ಹಾಹಾಕಾರವೆದ್ದಿತು.

**ಉಪಕ್ರಮ**

ಇತಿಹಾಸದ ಸಂದರ್ಭದಲ್ಲಿ ಗಾದೆಮಾತುಗಳನ್ನು ಸಂಗ್ರಹಿಸಿರಿ. ಉದಾ. 'ಜೀವಾ ಇದ್ದನೆಂದು ಶಿವಾ ಬದುಕಿದ'.

BKY5PI

# ೧೦. ಕಣಿವೆಯಲ್ಲಿ ಜಿದ್ದಿನಿಂದ ಹೋರಾಡಿದರು

**ಪನ್ಹಾಳಗಡ ಗೆದ್ದರು ಮತ್ತು ಆದಿಲಶಾಹ ಕುಪಿತನಾದನು :** ಅಫಜಲಖಾನನ ಕೊಲೆಯಿಂದ ವಿಜಾಪುರದಲ್ಲಿ ಹಾಹಾಕಾರವೆದ್ದಿತು. ಅದರ ನಂತರ ಕೂಡಲೇ ಶಿವರಾಯರು ವಿಜಾಪುರ ದೊರೆಯ ವಶದಲ್ಲಿದ್ದ ಪನ್ಹಾಳಗಡವನ್ನು ಗೆದ್ದರು. ಅದರಿಂದ ಆದಿಲಶಾಹನು ವಿಪರೀತ ಸಿಟ್ಟಿಗೆದ್ದನು. ಅವನಿಗೆ ಅನ್ನ ನೀರು ರುಚಿಸದಾಯಿತು. ಶಿವರಾಯರನ್ನು ನಾಶಮಾಡಲು ಅವನು ಸಿದ್ದೀಜೌಹರ ಎಂಬ ಸರದಾರನನ್ನು ಕಳುಹಿಸಿದನು. ಬಹುದೊಡ್ಡ ಸೈನ್ಯವನ್ನು ಕಟ್ಟಿಕೊಂಡು ಸಿದ್ದೀಜೌಹರನು ಹೊರಟನು. ಫಾಜಲಖಾನನೂ ತಂದೆಯ ಕೊಲೆಯ ಸೇಡು ತೀರಿಸಿಕೊಳ್ಳಲು ಅವನ ಜೊತೆಯಲ್ಲಿ ಹೊರಟನು.

**ಪನ್ಹಾಳಗಡದ ಮುತ್ತಿಗೆ :** ಸಿದ್ದೀಜೌಹರನು ಶೂರ, ಆದರೆ ಅವನು ಕ್ರೂರನಾಗಿದ್ದನು. ಅವನ ಶಿಸ್ತು ಕಠೋರವಾಗಿತ್ತು. ಅವನು ಪನ್ಹಾಳಗಡಕ್ಕೆ ನಾಲ್ಕೂ ದಿಕ್ಕಿನಿಂದ ಮುತ್ತಿಗೆ ಹಾಕಿದನು. ಶಿವರಾಯರನ್ನು ಕೋಟೆಯಲ್ಲಿ ಸಿಲುಕಿಸಿದನು. ಮಳೆಗಾಲ ಹತ್ತಿರ ಬಂದಿತ್ತು. ಆದ್ದರಿಂದ ಮಳೆಗಾಲ ಪ್ರಾರಂಭವಾದ ಕೂಡಲೇ ಸಿದ್ದೀ ಜೌಹರನ್ನು ಮುತ್ತಿಗೆ ಹಿಂತೆಗೆಯಬಹುದೆಂದು ಶಿವರಾಯರಿಗೆ ಅನಿಸಿತು. ಆದರೆ ಮಳೆಗಾಲ ಪ್ರಾರಂಭವಾದ ಕೂಡಲೇ ಅವನು ಮುತ್ತಿಗೆಯನ್ನು ಇನ್ನಷ್ಟು ಭದ್ರಗೊಳಿಸಿದನು. ಕೋಟೆಯಲ್ಲಿಯ ಅನ್ನಧಾನ್ಯ ಮುಗಿಯುತ್ತಾ ಬಂತು. ಈಗ ಏನು ಮಾಡಬೇಕು ? ಇದು ಶಕ್ತಿಯ ಕೆಲಸವಲ್ಲ, ಆದ್ದರಿಂದ ಶಿವರಾಯರು ಯುಕ್ತಿಯಿಂದ ಪಾರಾಗುವ ಉಪಾಯವನ್ನು ಮಾಡಿದರು. 'ಬೇಗನೆ ಕೋಟೆಯನ್ನು ನಿಮ್ಮ ವಶ ಮಾಡುತ್ತೇನೆ,' ಎಂಬ ಸಂದೇಶವನ್ನು ಅವರು ಸಿದ್ದೀಗೆ ಕಳುಹಿಸಿದರು. ಅವನಿಗೆ ಸಂತೋಷವಾಯಿತು. ಅವನು ಅದನ್ನು ಒಪ್ಪಿಕೊಂಡನು.

ಮುತ್ತಿಗೆ ಹಾಕುವ ಕೆಲಸದಿಂದ ಸಿದ್ದಿಯ ಸೈನಿಕರು ಬೇಸತ್ತು ಹೋಗಿದ್ದರು. ಶಿವಾಜಿಯು ಶರಣು ಬರುತ್ತಿದ್ದಾನೆ ಎಂಬುದನ್ನು ಕೇಳಿ ಅವರಿಗೆ ಆನಂದವಾಯಿತು. ಕುಡಿಯುವದು, ತಿನ್ನುವದು, ಹಾಡುವದು, ಬಾರಿಸುವದು ಮತ್ತು ಧೂಮ್ರಪಾನ ಮಾಡುವದರಲ್ಲಿ ಅವರು ಮಗ್ನರಾಗಿ ಹೋದರು.

**ಶಿವರಾಯರು ಮುತ್ತಿಗೆಯಿಂದ ಹೊರಗೆ :** ಮುತ್ತಿಗೆಯಿಂದ ಪಾರಾಗಿ ಹೋಗುವ ಸಲುವಾಗಿ ಶಿವರಾಯರು ಒಂದು ಉಪಾಯ ಹೂಡಿದರು. ಅವರು ಎರಡು ಪಲ್ಲಕ್ಕಿಗಳನ್ನು ಸಿದ್ಧಗೊಳಿಸಿದರು. ಒಂದರಿಂದ ಶಿವರಾಯರು ದುರ್ಗಮ ಮಾರ್ಗದಿಂದ ಹೊರ ಹೋಗುವರು ಮತ್ತು ಇನ್ನೊಂದರಿಂದ ಶಿವರಾಯರ ವೇಷ ಧರಿಸಿದ ವ್ಯಕ್ತಿ ರಾಜದಿಂಡೀ ಬಾಗಿಲಿನಿಂದ ಹೊರಬೀಳುವನು. ಎರಡನೆಯ ಪಲ್ಲಕ್ಕಿಯು ಶತ್ರುಸೈನ್ಯಕ್ಕೆ ಸಹಜವಾಗಿ ಕಾಣಿಸುವುದರಿಂದ ಅದು ಹಿಡಿಯಲ್ಪಡುವುದು ಮತ್ತು ಶಿವಾಜಿರಾಜರೇ ಹಿಡಿಯಲ್ಪಟ್ಟರೆಂದು ತಿಳಿದು ವೈರಿಗಳು ವಿಜಯೋತ್ಸವ ಮಾಡುವರು. ಅಷ್ಟರೊಳಗೆ ಶಿವರಾಯರು ದುರ್ಗಮವಾದ ಮಾರ್ಗದಿಂದ ಪಾರಾಗಿ ಹೋಗುವ ಯೋಜನೆ ಅದಾಗಿತ್ತು. ಅದಕ್ಕಾಗಿ ಒಬ್ಬ ಶೂರ ತರುಣನು ಸಿದ್ಧನಾದನು. ಅವನು ನೋಡಲು ಶಿವರಾಯರ ಹಾಗೆಯೇ ಇದ್ದನು. ಅವನ ಹೆಸರು ಶಿವಾ ಕಾಶಿದ ಎಂದು ಇತ್ತು. ಅವನು ಶಿವರಾಯರ ಸೇವೆಯಲ್ಲಿ ಕೇಶಾಲಂಕಾರ ಮಾಡುವ ಸೇವಕನಾಗಿದ್ದನು. ಅವನು ಬಹು ಧೈರ್ಯಶಾಲಿ ಮತ್ತು ಚತುರನಾಗಿದ್ದನು.

ನಿಶ್ಚಯಿಸಿದ ಹಾಗೆ ಶಿವಾನ ಪಲ್ಲಕ್ಕಿಯು ರಾಜದಿಂಡಿಯ ಹೊರಬಿದ್ದಿತು. ರಾತ್ರಿಯ ಸಮಯವಿತ್ತು. ಒಂದೇ ಸವನೆ ಮಳೆ ಸುರಿಯುತ್ತಿತ್ತು. ಆದರೂ ಶತ್ರುಗಳ ಕೆಲ ಸೈನಿಕರು ಕಾವಲು ಮಾಡುತ್ತಿದ್ದರು. ಅವರು ಈ ಪಲ್ಲಕ್ಕಿಯನ್ನು ತಡೆದರು. ಶಿವಾಜಿ ರಾಜರೇ ಹಿಡಿಯಲ್ಪಟ್ಟರೆಂದು ಅವರು ಈ ಪಲ್ಲಕ್ಕಿಯನ್ನು ಸಿದ್ದೀ ಜೌಹರನ ಛಾವಣಿಗೆ ಒಯ್ದರು. ಅಲ್ಲಿ ವಿಜಯೋತ್ಸವ ಪ್ರಾರಂಭವಾಯಿತು. ಅಷ್ಟರಲ್ಲಿ ಶಿವರಾಯರು ಬೇರೆ ದುರ್ಗಮ ಮಾರ್ಗದಿಂದ ಕೋಟೆಯ ಹೊರಗೆ ಹೋದರು. ಅವರ ಜೊತೆಗೆ ಬಾಜೀಪ್ರಭು ದೇಶಪಾಂಡೆ ಮತ್ತು ಆಯ್ದ ಸೈನಿಕರು ಇದ್ದರು. ಜೊತೆಗೆ ಬಾಂದಲ ದೇಶಮುಖರ ಸೈನ್ಯವೂ ಇತ್ತು. ಇತ್ತ ಕಡೆ ಸ್ವಲ್ಪ ಸಮಯದಲ್ಲಿ ಶಿವಾ ಕಾಶಿದನ ರಹಸ್ಯ

ಬಯಲಾಯಿತು, ಆಗ ಸಿದ್ದಿಯು ಸಿಟ್ಟಿಗೆದ್ದು ಅವನನ್ನು ತಕ್ಷಣ ಕೊಂದು ಹಾಕಿದನು. ಶಿವರಾಯರ ಸಲುವಾಗಿ, ಸ್ವರಾಜ್ಯದ ಸಲುವಾಗಿ ಶಿವಾ ಕಾಶಿದನು ಆತ್ಮಬಲಿದಾನ ಕೊಟ್ಟನು. ಅವನು ಅಮರನಾದನು.

ಶಿವರಾಯರು ಕೈಕೊಟ್ಟು ಪಾರಾದ ಸುದ್ದಿ ತಿಳಿದ ಕೂಡಲೆ ಸಿದ್ದಿಯು ಹುಚ್ಚನಂತಾದನು. ಅವನು ತಕ್ಷಣ ಸಿದ್ದೀ ಮಸವೂದ ಎಂಬ ತನ್ನ ಸರದಾರನನ್ನು ದೊಡ್ಡ ಸೈನ್ಯದೊಂದಿಗೆ ಶಿವರಾಯರನ್ನು ಬೆನ್ನಟ್ಟಲು ಕಳುಹಿಸಿದನು. ಬೆನ್ನು ಹತ್ತುವ ಕೆಲಸ ಪ್ರಾರಂಭವಾಯಿತು. ಸೂರ್ಯ ಉದಯಿಸಿದಾಗ ಅವರು ಶಿವರಾಯರನ್ನು ಪಾಂಢರಪಾಣಿ ಹಳ್ಳದ ಹತ್ತಿರ ಹಿಡಿದರು. ಶಿವರಾಯರು ಪೇಚಿನಲ್ಲಿ ಬಿದ್ದರು. ಅವರು ಹೇಗೋ ಘೋಡಖಿಂಡವನ್ನು ದಾಟಿದರು.

**ಬಾಜೀಪ್ರಭುವಿನ ಶೌರ್ಯ :** ರೊಚ್ಚಿಗೆದ್ದ ಸಿದ್ದೀಯ ಸೈನಿಕರು ಕಂದರದತ್ತ ರಭಸದಿಂದ ಬರುತ್ತಿದ್ದರು. ಇನ್ನು ವಿಶಾಲಗಡವನ್ನು ತಲುಪುವುದು ಕಠಿಣ ಎಂದು ಶಿವರಾಯರಿಗೆ ಅನಿಸಿತು. ಅವರು ಬಾಜೀಪ್ರಭುವಿಗೆ ಅಂದರು, ''ಬಾಜೀ, ಇದೀಗ ಗಂಡಾಂತರದ ಸಮಯ. ಮುಂದಿನದು ಏರು ಹಾದಿ. ಬೆನ್ನ ಹಿಂದೆಯೇ ಶತ್ರುಗಳು ಇದ್ದಾರೆ. ಈಗ ವಿಶಾಲಗಡ ಮುಟ್ಟಲು ಸಾಧ್ಯವಿಲ್ಲ, ನಡೆಯಿರಿ, ತಿರುಗಿ ಶತ್ರುಗಳನ್ನು ಎದುರಿಸುವಾ.'' ಶಿವರಾಯರ ಮನಸ್ಸಿನ ತಾಕಲಾಟವನ್ನು ಬಾಜೀಪ್ರಭು ಗುರುತಿಸಿದನು. ಅತ್ತ ಖಿಂಡಿಯ ಕಡೆಗೆ ಶತ್ರು ಬರುತ್ತಿದ್ದನು. ಶಿವರಾಯರ ಜೀವ ಗಂಡಾಂತರದಲ್ಲಿತ್ತು. ಇಡೀ ಸ್ವರಾಜ್ಯವೇ ಗಂಡಾಂತರದಲ್ಲಿತ್ತು. ಬಾಜೀಪ್ರಭು ಶಿವರಾಯರಿಗೆ ಕಳಕಳಿಯಿಂದ ಹೇಳಿದ, ''ಮಹಾರಾಜ, ನೀವು ಸ್ವಲ್ಪ ಸೈನಿಕರನ್ನು ತೆಗೆದುಕೊಂಡು ವಿಶಾಲಗಡದತ್ತ ನಡೆಯಿರಿ. ಉಳಿದ ಸೈನಿಕರೊಡನೆ ನಾನು ಕಂದರದಲ್ಲಿ ನಿಲ್ಲುತ್ತೇನೆ. ಮಹಾರಾಜರೆ, ನಾನು ಮಡಿಯುವೆ, ಆದರೆ ಶತ್ರುಗಳಿಗೆ ಖಿಂಡಿಯನ್ನು ಏರಲು ಬಿಡಲಾರೆ. ಒಬ್ಬ ಬಾಜೀ ಹೋದರೆ ನಿಮಗೆ ಮತ್ತೊಬ್ಬ ಸಿಗಬಲ್ಲ, ಆದರೆ ದೇಶಕ್ಕೆ ಶಿವಾಜಿ ಮಹಾರಾಜರ ಅವಶ್ಯಕತೆ ಇದೆ. ಶತ್ರುಗಳ ಸಂಖ್ಯೆ ಪ್ರಚಂಡವಾಗಿದೆ. ನಾವು ಬಹಳ ಕಡಿಮೆ ಜನರಿದ್ದೇವೆ. ನಾವು ಬದುಕುಳಿಯುವುದು ಕಷ್ಟ. ನೀವು ಇಲ್ಲಿ ನಿಲ್ಲಬೇಡಿರಿ. ನಾವು ಖಿಂಡಿಯ ಪ್ರವೇಶದ ಹತ್ತಿರ ಶತ್ರುಗಳನ್ನು ತಡೆಯುತ್ತೇವೆ. ನೀವು ಕೋಟೆಯನ್ನು ಮುಟ್ಟುವ ತನಕ ನಾವು ಇಲ್ಲಿ ಶತ್ರುಗಳನ್ನು ತಡೆದು ಹಿಡಿಯುತ್ತೇವೆ. ನೀವು ನಿಶ್ಚಿಂತರಾಗಿ ಹೋಗಿ.'' ಬಾಜೀಪ್ರಭುವಿನ ಸ್ವಾಮಿಭಕ್ತಿಯನ್ನು ಕಂಡ ಶಿವರಾಯರ ಹೃದಯ ಉಕ್ಕಿ ಬಂತು. ಬಾಜೀಯಂಥ ರತ್ನವನ್ನು ಪಣಕ್ಕೆ ಹಚ್ಚುವುದು ಶಿವರಾಯರರಿಗೆ ನೋವಿನ ಸಂಗತಿಯಾಗಿತ್ತು. ಆದರೆ ಸ್ವರಾಜ್ಯದ ಧ್ಯೇಯ ತಲುಪಬೇಕಾಗಿತ್ತು. ಅವರು ಮನಸ್ಸನ್ನು ಗಟ್ಟಿ ಮಾಡಿದರು. ಶಿವರಾಯರು ಬಾಜೀಗೆ ಪ್ರೀತಿಯಿಂದ ಭೇಟಿಯಾಗಿ ಹೇಳಿದರು, ''ನಾವು ಕೋಟೆಯ ಮೇಲೆ ಹೋಗುತ್ತೇವೆ. ಅಲ್ಲಿ ಮುಟ್ಟಿದಾಕ್ಷಣ ತೋಪುಗಳ ಶಬ್ದವಾಗುವುದು; ಆಗ ಕೂಡಲೇ ಖಿಂಡಿಯನ್ನು ಬಿಟ್ಟು ನೀವು ಹೊರಟು ಬನ್ನಿ.''

**ಬಾಜೀ ಶತ್ರುಗಳನ್ನು ತಡೆಗಟ್ಟಿದನು :** ಬಾಜೀಪ್ರಭುವನ್ನು ಖಿಂಡಿಯಲ್ಲಿ ಬಿಟ್ಟು ಶಿವರಾಯರು ವಿಶಾಲಗಡದತ್ತ ಹೊರಟರು. ಬಾಜೀ ಶಿವರಾಯರಿಗೆ ಬಾಗಿ ಮುಜುರೆ ಮಾಡಿದನು. ಆಮೇಲೆ ತನ್ನ ಎರಡೂ ಕೈಗಳಲ್ಲಿ ಖಡ್ಗಗಳನ್ನು ತೆಗೆದುಕೊಂಡು ಕಂದರದ ಪ್ರವೇಶ ದ್ವಾರದಲ್ಲಿ ನಿಂತನು. ಅವನು ಮಾವಳೆಗಳನ್ನು ತುಕಡಿಗಳಾಗಿ ವಿಂಗಡಿಸಿದನು. ಅವರಿಗೆ ಸ್ಥಳಗಳನ್ನು ನೇಮಿಸಿ ಕೊಟ್ಟನು. ಮಾವಳೆಗಳು ಕಲ್ಲು ಗುಂಡುಗಳನ್ನು ಸಂಗ್ರಹಿಸಿ ತಮ್ಮ ತಮ್ಮ ಸ್ಥಳಗಳಲ್ಲಿ ಸಿದ್ಧತೆಯಿಂದ ನಿಂತರು. ಕಂದರದ ಪ್ರವೇಶದಲ್ಲಿ ಮಾವಳೆಗಳ ಉಕ್ಕಿನ ತಡೆಗೋಡೆ ಸಿದ್ಧವಾಯಿತು. ಅಷ್ಟರಲ್ಲಿ ಶತ್ರುಗಳ ಯುದ್ಧಗರ್ಜನೆ ಕೇಳಿ ಬಂತು. ಶತ್ರುಗಳು ಖಿಂಡಿಯ ಕೆಳಗೆ ಬಂದಿದ್ದರು. ಬಾಜೀ ಮಾವಳೆಗಳಿಗೆ ಹೇಳಿದನು, ''ವೀರರೇ, ಎಚ್ಚರದಿಂದಿರಿ ! ಪ್ರಾಣ ಹೋದರೂ ನಿಮ್ಮ ಜಾಗ ಬಿಡಬೇಡಿರಿ. ಶತ್ರುಗಳಿಗೆ ಖಿಂಡಿಯನ್ನು ಏರಲು ಬಿಡಬೇಡಿರಿ.'' ಬಾಜೀಪ್ರಭು ಮತ್ತು ಅವನ ಸಂಗಡಿಗರು ಕಂದರದ ದ್ವಾರದಲ್ಲಿ ದೃಢವಾಗಿ ನಿಂತರು, ಕಂದರದ ದಾರಿ ಬಹಳ ಕಠಿಣವೂ, ಅಂಕುಡೊಂಕಾಗಿಯೂ ಇತ್ತು. ಏಕ ಕಾಲದಲ್ಲಿ ಮೂರು ನಾಲ್ಕು ಜನರು ಮೇಲೆ ಏರಬಹುದಾಗಿತ್ತು.

ಅತ್ತ ಶಿವರಾಯರು ವಿಶಾಲಗಡದೆಡೆಗೆ ವಾಯುವೇಗದಲ್ಲಿ ಓಡುತ್ತಿದ್ದರು. ವಿಶಾಲಗಡದ ಅಡಿಭಾಗ ಇನ್ನೂ ದೂರದಲ್ಲಿತ್ತು. ಕೋಟೆಯನ್ನು ತಲುಪಲು ಶಿವರಾಯರಿಗೆ ಒಂದೂವರೆ-ಎರಡು



ಘೋಡಖಿಂಡಿಯಲ್ಲಿ ಶಿವರಾಯರು ಮತ್ತು ಬಾಜೀಪ್ರಭು ದೇಶಪಾಂಡೆ

ತಾಸುಗಳು ಬೇಕಾಗಿದ್ದವು. ಅಷ್ಟರವರೆಗೆ ಬಾಜೀ ಶತ್ರುವನ್ನು ತಡೆದು ಹಿಡಿದರೆ ಶಿವರಾಯರ ಕಾರ್ಯ ಪೂರ್ಣವಾಗುವುದಿತ್ತು.

**ಖಿಂಡಿಯಲ್ಲಿಯ ಕಾದಾಟ :** ಇತ್ತ ಕಂದರದಲ್ಲಿ ಭೀಕರ ಕಾದಾಟ ಪ್ರಾರಂಭವಾಯಿತು. ಶತ್ರುಗಳು ಖಿಂಡಿಯನ್ನು ದಾಟತೊಡಗಿದರು. ಶತ್ರುಗಳ ಮೊದಲ ಗುಂಪು ಕಂದರದ ಹತ್ತಿರ ಬಂತು. ಮಾವಳೆಗಳು ಶತ್ರುಗಳ ಮೇಲೆ ಕಲ್ಲಿನ ಮಳೆ ಸುರಿಸಿದರು. ಕಲ್ಲು ಬೀಸಿ ಹೊಡೆಯುವುದರಲ್ಲಿ ಮಾವಳೆಗಳು ಕುಶಲರು. ಅವರು ನೇರವಾಗಿ ಹೊಡೆತ ಪ್ರಾರಂಭ ಮಾಡಿದರು. ಶಿವರಾಯರ ಮಾವಳೆಗಳು ಅನೇಕ ಶತ್ರುಗಳನ್ನು ಕೊಂದರು. ಅನೇಕರ ತಲೆ ಒಡೆಯಿತು. ಮೊದಲು ಬಂದ ಗುಂಪು ಸಂಪೂರ್ಣ ಸೋತಿತು. ಹಿಂದೆ ಸರಿಯಿತು. ಪುನಃ ಎರಡನೆಯ ಗುಂಪು ಶಿಸ್ತಿನಿಂದ ಕಂದರ ಏರತೊಡಗಿತು. ಬಾಜೀಪ್ರಭು ಒದರಿದ, ''ಬಡಿಯಿರಿ, ಹೊಡೆಯಿರಿ'' ಮಾವಳೆಗಳಿಗೆ ಸ್ಫೂರ್ತಿ ಹೆಚ್ಚಿತ್ತು. ''ಹರ ಹರ ಮಹಾದೇವ,'' ಎಂದು ಗರ್ಜಿಸುತ್ತಾ ಅವರು ಶತ್ರುಗಳ ಮೇಲೆ ಮುಗಿಬಿದ್ದರು. ಪುನಃ ಕಲ್ಲಿನ ಮಳೆ ಆರಂಭವಾಯಿತು. ಶತ್ರು ಸೈನಿಕರು ಧಡಧಡನೆ ಕುಸಿದರು. ಬಾಜಿ ಆವೇಶದಿಂದ ಕೂಗಿದನು ''ಶಹಬಾಸ !'' ನನ್ನ ಗೆಳೆಯರೇ ! ಇನ್ನೂ ಕಲ್ಲು ಬೀಸಿರಿ. ಜಜ್ಜಿರಿ ಶತ್ರುಗಳನ್ನು. ಬೀಳಲಿ ಒಳ್ಳೆ ಪೆಟ್ಟು ಶಹಬಾಸ !'' ಎರಡನೆಯ ಗುಂಪೂ ನಾಶವಾಯಿತು.

ಅತ್ತ ಶಿವರಾಯರು ವಿಶಾಲಗಡದ ಕಡೆಗೆ ರಭಸದಿಂದ ಹೋಗುತ್ತಿದ್ದರು. ಕೋಟೆಯ ಅಡಿಭಾಗ ಸಮೀಪಿಸುತ್ತಿತ್ತು. ಪ್ರತಿಯೊಂದು ಕ್ಷಣ ಮಹತ್ವದ್ದಾಗಿತ್ತು. ವಿಶಾಲಗಡದ ಅಡಿಭಾಗದಲ್ಲಿಯೂ ಶತ್ರುಗಳ ಮುತ್ತಿಗೆ ಇತ್ತು. ಶಿವರಾಯರು ತಮ್ಮ ಆಯ್ದ ಸಂಗಡಿಗರೊಡನೆ ಶತ್ರುಗಳ ಮೇಲೆ ದಾಳಿ ಮಾಡಿದರು. ಶತ್ರುಗಳೊಡನೆ ಕಾದಾಡುತ್ತಾ ಶಿವರಾಯರು ಮುಂದೆ ನಡೆದರು. ಅವರು ತಮ್ಮ ಮಾವಳೆಗಳೊಡನೆ ಶತ್ರು ಸಂಕೋಲನೆಯನ್ನು ಮುರಿದು ವಿಶಾಲಗಡದ ಶಿಖರದೆಡೆಗೆ ಧಾವಿಸ ತೊಡಗಿದರು.

**ಬಾಜಿಯ ಪರಾಕ್ರಮ :** ಇತ್ತ ಘೋಡಕಿಂಡಿಯಲ್ಲಿ ನಿಕರದ ಹೋರಾಟ ಇನ್ನೂ ನಡೆದಿತ್ತು. ಸಿದ್ದೀ ಮಸವೂದನು ಕುಪಿತನಾಗಿದ್ದನು. ಅವನ ಮೂರನೆಯ ಗುಂಪು ಖಿಂಡಿಯನ್ನು ಏರತೊಡಗಿತು. ಮರಾಠರು ತಮ್ಮ ಶೌರ್ಯವನ್ನು ಪಣಕ್ಕೆ ಹಚ್ಚಿ ಕಾದಾಡಿದರು. ಶತ್ರುಗಳು ಬಾಜೀಪ್ರಭುವಿನ ಮೇಲೆ ದಾಳಿಮಾಡಿದರು. ಬಾಜೀಯನ್ನು ಸುತ್ತುವರಿದರು. ಬಾಜೀ ರೊಚ್ಚಿಗೆದ್ದು ಕಾದಾಡತೊಡಗಿದನು. ಅವನು ಪ್ರಾಣವನ್ನು ಪಣಕ್ಕೆ ಹಚ್ಚಿ ಹೋರಾಡಿದನು. ಬಾಜೀಯ ಮೈಮೇಲೆ ಅನೇಕ ಖಡ್ಗ ಪ್ರಹಾರಗಳಾದವು. ಅಲ್ಲಲ್ಲಿ ಗಾಯಗಳಾದವು. ಮೈಯಿಂದ ರಕ್ತವು ಹರಿಯತೊಡಗಿತು. ಆದರೂ ಅವನು ಖಿಂಡಿಯ ಪ್ರವೇಶ ದ್ವಾರವನ್ನು ಬಿಟ್ಟುಕೊಡಲಿಲ್ಲ, ಅವನ ಇಡೀ ಶರೀರ ರಕ್ತಧಾರೆಯಿಂದ ಒದ್ದೆಯಾಗಿತ್ತು, ಆದರೂ ಅವನು ಹಿಂದೆ ಸರಿಯಲಿಲ್ಲ, ನಡುವೆಯೇ ಕಿರುಚಿ ಅವನು ಮಾವಳೆಗಳಿಗೆ ಸೂಚನೆ ಕೊಟ್ಟನು. ಮಾವಳೆಗಳು ಶತ್ರುವಿನ ಮೇಲೆ ಭೀಕರ ದಾಳಿ ಮಾಡಿದರು. ಶತ್ರುಗಳು ಹಿಂದೆ ಸರಿದರು. ಬಾಜೀಪ್ರಭು ಗಾಯಗೊಂಡಿದ್ದರೂ, ಅವನು ಕಾದಾಟ ಮುಂದುವರಿಸುವಂತೆ ಮಾವಳೆಗಳಿಗೆ ಹುರಿದುಂಬಿಸುತ್ತಿದ್ದನು. ಅವನು ಸಂಪೂರ್ಣ ಗಮನವು ತೋಫಿನ ಶಬ್ದದತ್ತ ಇತ್ತು.

**ಆ ಪಾವನಖಿಂಡಿ :** ಅಷ್ಟರಲ್ಲಿ ತೋಪಿನ ಗರ್ಜನೆ ಆಯಿತು. ತೋಪುಗಳ ಶಬ್ದ ಧರಾಶಾಯಿಯಾದ ಆ ಬಾಜೀಯ ಕಿವಿಗೆ ಬಿತ್ತು. ''ಮಹಾರಾಜರು ಕೋಟೆಯನ್ನು ತಲುಪಿದರು. ನಾನು ನನ್ನ ಕರ್ತವ್ಯವನ್ನು ನಿರ್ವಹಿಸಿದೆನು. ಈಗ ನಾನು ಸುಖದಿಂದ ಮಡಿಯುವೆ.'' ಹೀಗೆ ಹೇಳುತ್ತ ಸ್ವಾಮಿಭಕ್ತ ಬಾಜೀಪ್ರಭು ಪ್ರಾಣಬಿಟ್ಟನು. ಈ ವಾರ್ತೆಯು ವಿಶಾಲಗಡದಲ್ಲಿರುವ ಮಹಾರಾಜರಿಗೆ ತಿಳಿದಾಗ ಅವರಿಗೆ ಅಪಾರ ದುಃಖವಾಯಿತು. ಆಗ ಅವರು ಹೇಳಿದರು, ''ಬಾಜೀಪ್ರಭು ದೇಶಪಾಂಡೆ ಸ್ವರಾಜ್ಯಕ್ಕಾಗಿ ಪ್ರಾಣಾರ್ಪಣೆ ಮಾಡಿದರು. ಬಾಂದಲದ ಜನರು ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದರು !''

ಬಾಜೀಪ್ರಭುವಿನಂಥ ದೇಶಭಕ್ತರು ಇದ್ದುದರಿಂದಲೇ ಸ್ವರಾಜ್ಯದ ಅಭಿವೃದ್ಧಿಯಾಯಿತು. ಆ ಸ್ವಾಮಿನಿಷ್ಠರ ರಕ್ತದಿಂದ ಘೋಡಖಿಂಡಿ ಪಾವನವಾಯಿತು. 'ಪಾವನ ಖಿಂಡಿ' ಎಂದು ಇತಿಹಾಸದಲ್ಲಿ ಅದು ಅಮರವಾಯಿತು. ಧನ್ಯ ಈ ವೀರರು ! ಧನ್ಯ ಆ ಬಾಜೀಪ್ರಭು !

## ಅಭ್ಯಾಸ

**೧. ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಶಬ್ದಗಳನ್ನು ಬರೆಯಿರಿ.**

(ಅ) ಸಿದ್ದಿ ಜೌಹರನು ……… ಕೋಟೆಗೆ ನಾಲ್ಕು ದಿಕ್ಕಿನಿಂದ ಮುತ್ತಿಗೆ ಹಾಕಿದನು.

(ಆ) ಬಾಜೀಪ್ರಭುವಿನ ……….. ನೋಡಿ ಶಿವರಾಯರ ಹೃದಯ ಉಕ್ಕಿಬಂತು.

(ಇ) ಘೋಡಖಿಂಡಿಯು ………. ಎಂದು ಇತಿಹಾಸದಲ್ಲಿ ಅಮರವಾಯಿತು.

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಶಿವರಾಯರು ಪನ್ಹಾಳಗಡದ ಮುತ್ತಿಗೆಯಿಂದ ಪಾರಾಗುವ ಸಲುವಾಗಿ ಸಿದ್ದೀಗೆ ಯಾವ ಸಂದೇಶವನ್ನು ಕಳುಹಿಸಿದರು ?

(ಆ) ಸಿದ್ದೀ ಜೌಹರನು ಏಕೆ ಸಿಟ್ಟಿಗೆದ್ದನು ?

(ಇ) ವಿಶಾಲಗಡದ ಕಡೆಗೆ ಹೋಗುವಾಗ ಶಿವರಾಯರು ಬಾಜೀಪ್ರಭುವಿಗೆ ಏನು ಹೇಳಿದರು ?

**೩. ಎರಡು-ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಪನ್ಹಾಳಗಡದ ಮುತ್ತಿಗೆಯಿಂದ ಪಾರಾಗುವ ಸಲುವಾಗಿ ಶಿವರಾಯರು ಯಾವ ಉಪಾಯ ಹೂಡಿದರು ?

(ಆ) ಬಾಜೀಪ್ರಭುವು ಶತ್ರುಗಳನ್ನು ಘೋಡಖಿಂಡಿಯಲ್ಲಿ ತಡೆಯುವ ಸಲುವಾಗಿ ಯಾವ ಯೋಜನೆ ಹಾಕಿದನು?

**೪. ಕಾರಣಗಳನ್ನು ಬರೆಯಿರಿ.**

(ಅ) ಆದಿಲಶಾಹನು ವಿಪರೀತ ಸಿಟ್ಟಿಗೆದ್ದನು.

(ಆ) ಶಿವರಾಯರ ಸೇವೆಯಲ್ಲಿಯ ಶಿವಾ ಕಾಶಿದ ಅಮರನಾದನು.

(ಇ) ಪಾವನಖಿಂಡಿಯು ಇತಿಹಾಸದಲ್ಲಿ ಅಮರವಾಯಿತು.

**೫. ಯಾರು ಎಂಬುದನ್ನು ಬರೆಯಿರಿ.**

(ಅ) ಶೂರ, ಆದರೆ ಕ್ರೂರನಾಗಿದ್ದನು …………………

(ಆ) ಘೋಡಖಿಂಡಿಯಲ್ಲಿ ಪ್ರಾಣವನ್ನು ಪಣಕ್ಕೆ ಇಟ್ಟು ಹೋರಾಡಿದವ …………………

(ಇ) ಮುತ್ತಿಗೆಯಿಂದ ಪಾರಾಗಿ ಹೋದವರು …………………

**ಉಪಕ್ರಮ**

ಶಿವರಾಯರ ಸೇವೆಯಲ್ಲಿಯ ಸ್ವಾಮಿನಿಷ್ಠ ಸೇವಕರ ಬಗ್ಗೆ ಶಿಕ್ಷಕರ ಸಹಾಯದಿಂದ ಹೆಚ್ಚಿನ ಮಾಹಿತಿ ಪಡೆಯಿರಿ.

BL81R6

# ೧೧. ಶಾಯಿಸ್ತಾಖಾನನ ಫಜೀತಿ


**ಶಾಯಿಸ್ತಾಖಾನನ ದಾಳಿ :** ವಿಜಾಪುರದ ಆದಿಲಶಾಹನು ಎಷ್ಟೇ ಪ್ರಯತ್ನಪಟ್ಟರೂ ಶಿವರಾಯರ ಮುಂದೆ ಅವನ ಆಟ ನಡೆಯಲಿಲ್ಲ. ಅವನ ಪ್ರತಿಯೊಬ್ಬ ಸರದಾರನಿಗೂ ಶಿವರಾಯರು ಚೆನ್ನಾಗಿ ಪಾಠ ಕಲಿಸಿದರು. ಕೊನೆಗೆ ಆದಿಲಶಾಹನು ಮೆತ್ತಗಾದನು. ಅವನು ಶಿವರಾಯರೊಡನೆ ಒಪ್ಪಂದ ಮಾಡಿಕೊಂಡನು ಮತ್ತು ಅವರ ಸ್ವತಂತ್ರ ರಾಜ್ಯಕ್ಕೆ ಮನ್ನಣೆ ಕೊಟ್ಟನು. ಇದರಿಂದಾಗಿ ಕೆಲವು ಕಾಲ ದಕ್ಷಿಣ ಭಾಗದಲ್ಲಿ ಸುರಕ್ಷಿತತೆ ನೆಲೆಸಿತು.

ಆಮೇಲೆ ಶಿವರಾಯರು ಉತ್ತರದ ಮುಘಲರ ಕಡೆಗೆ ತಿರುಗಿದರು. ಮುಘಲರ ದಾಳಿಯಿಂದ ಮಹಾರಾಷ್ಟ್ರಕ್ಕೆ ತುಂಬಾ ಹಾನಿ ಉಂಟಾಗಿತ್ತು. ಆ ಕಾಲದಲ್ಲಿ ದಿಲ್ಲಿಯಲ್ಲಿ ಔರಂಗಜೇಬನು ಬಾದಶಾಹನಿದ್ದನು. ಅವನ ಪ್ರದೇಶದ ಮೇಲೆ ಶಿವರಾಯರು ದಾಳಿ ಮಾಡಿದರು. ಅದರಿಂದ ಬಾದಶಾಹ ಕೆರಳಿದನು. ಅವನು ತನ್ನ ಮಾವನಾದ ಶಾಯಿಸ್ತಾಖಾನನನ್ನು ಶಿವರಾಯರ ಮೇಲೆ ದಾಳಿ ಮಾಡಲು ಕಳುಹಿಸಿದನು. ಅವನು ಪುಣೆಯ ಮೇಲೆ ದಾಳಿ ಮಾಡಿದನು. ಅವನ ಜೊತೆಯಲ್ಲಿ ಮುಕ್ಕಾಲು ಲಕ್ಷ ಸೈನಿಕರಿದ್ದರು. ನೂರಾರು ಆನೆಗಳು, ಒಂಟೆಗಳು ಮತ್ತು ತೋಪುಗಳು ಇದ್ದವು. ಶಿರವಳ, ಶಿವಾಪುರ, ಸಾಸವಡ ಈ ಊರುಗಳನ್ನು ವಶಪಡಿಸಿಕೊಳ್ಳುತ್ತ ಶಾಯಿಸ್ತಾಖಾನನು ಮುಂದೆ ಬಂದನು. ಅವನು ಪುರಂದರ ಕೋಟೆಗೆ ಮುತ್ತಿಗೆ ಹಾಕಿದನು. ಅವನು ಇನ್ನೂ ಮುಂದುವರಿದನು. ಆದರೆ ಒಮ್ಮೆ ಮಾತ್ರ ಗುಡ್ಡಗಳ ಕಂದರದಲ್ಲಿ ಮರಾಠರು ಅವನನ್ನು ಎದುರಿಸಿದರು. ಮರಾಠರು ಅತ್ಯಂತ ಚಪಲರು, ಜಟ್ಟಿಗಳು, ರೊಟ್ಟಿ-ಚಟ್ನಿ ತಿಂದು, ಮೈ ಮೇಲೆ ಕಂಬಳಿ ಹೊದ್ದುಕೊಂಡು ವಾಯುವೇಗದಲ್ಲಿ ಗಿರಿಕಂದರಗಳಲ್ಲಿ ಓಡಾಡುವುದರಲ್ಲಿ ಮರಾಠರು ಬಹಳ ಕುಶಲರು. ಮರಾಠರ ಕೂಟಯುದ್ಧ ನೀತಿಯಿಂದ ಶಾಯಿಸ್ತಾಖಾನನ ಸೈನ್ಯವು ಬೇಸತ್ತಿತ್ತು. ಇದರಿಂದ ಅವನು ಪುರಂದರದ ಮುತ್ತಿಗೆಯನ್ನು ತೆಗೆದು ಹಾಕಿದನು.

**ಫಿರಂಗೋಜೀ ನರಸಾಳಾ :** ಆಮೇಲೆ ಶಾಯಿಸ್ತಾಖಾನನು ಪುಣೆಯ ಕಡೆಗೆ ತಿರುಗಿದನು. ಮೊದಲು ಅವನು ಚಾಕಣದ ಕೋಟೆಯನ್ನು ವಶಪಡಿಸಿಕೊಂಡನು. ಚಾಕಣದ ಕೋಟೆಯಲ್ಲಿ ಫಿರಂಗೋಜೀ ನರಸಾಳಾನು ಬಹಳ ಪೌರುಷದಿಂದ ಶಾಯಿಸ್ತಾಖಾನನನ್ನು ಎದುರಿಸಿದನು. ಎರಡು ತಿಂಗಳುಗಳವರೆಗೆ ಫಿರಂಗೋಜೀಯು ಕಾದಾಡಿದನು. ಆದರೆ ಶಾಯಿಸ್ತಾಖಾನನ ತೋಪುಗಳ ಮುಂದೆ ಅವನ ಬಲ ಸಾಕಾಗಲಿಲ್ಲ. ಫಿರಂಗೋಜೀ ನರಸಾಳಾನ ಶೌರ್ಯವನ್ನು ಶಾಯಿಸ್ತಾಖಾನನು ಮೆಚ್ಚಿದನು. ಅವನಿಗೆ ಶಾಯಿಸ್ತಾಖಾನನು ಬಾದಶಾಹನ ಸೇವೆಯ ಆಸೆ ತೋರಿಸಿದನು. ಆದರೆ ಫಿರಂಗೋಜೀಯ ಮನಸ್ಸು ಮಾತ್ರ ಬದಲಾಗಲಿಲ್ಲ.

**ಲಾಲ ಮಹಲಿನಲ್ಲಿ ಶಾಯಿಸ್ತಾಖಾನ :** ಶಾಯಿಸ್ತಾಖಾನನು ಪುಣೆಗೆ ಬಂದನು. ಅವನು ಶಿವರಾಯರ ಲಾಲಮಹಲಿನಲ್ಲಿ ಇಳಿದುಕೊಂಡನು. ಅವನ ಸೈನ್ಯ ಲಾಲಮಹಲಿನ ಸುತ್ತಲೂ ಬೀಡುಬಿಟ್ಟಿತು. ಒಂದು ವರ್ಷ ಕಳೆಯಿತು. ಎರಡನೇ ವರ್ಷ ಕಳೆಯಿತು. ಆದರೂ ಖಾನನು ಲಾಲಮಹಲಿನಿಂದ ಕದಲಲಿಲ್ಲ. ಬದಲಾಗಿ ಅವನು ನಡುನಡುವೆ ತನ್ನ ಸೈನ್ಯವನ್ನು ಸುತ್ತಮುತ್ತಲಿನ ಪ್ರದೇಶದಲ್ಲಿ ಕಳುಹಿಸುತ್ತಿದ್ದನು. ಜನರ ದನಗಳನ್ನು ಎಳೆದು ತರುತ್ತಿದ್ದನು. ಪೈರನ್ನು ನಾಶಗೊಳಿಸುತ್ತಿದ್ದನು. ಈ ಪ್ರಕಾರ ಅವನು ಪುಣೆಯ ಹತ್ತಿರದ ಪ್ರದೇಶವನ್ನು ನಾಶಗೊಳಿಸಿದನು.

**ಸಾಹಸದ ಯೋಜನೆ :** ಶಾಯಿಸ್ತಾಖಾನನ ಸೊಕ್ಕು ಮುರಿಯಲೇಬೇಕೆಂದು ಶಿವರಾಯರು ನಿಶ್ಚಯಿಸಿದರು. ಖಾನನು ಲಾಲಮಹಲನ್ನು ಆಕ್ರಮಿಸಿ ಕುಳಿತಿದ್ದನು. ಅದು ಒಂದು ರೀತಿಯಿಂದ ಶಿವರಾಯರಿಗೆ ಅನುಕೂಲವೇ ಆಗಿತ್ತು. ಏಕೆಂದರೆ, ಆ ಮಹಲಿನ ಕೋಣೆಗಳು, ಜಗಲಿಗಳು, ಕಿಟಕಿ-ಬಾಗಿಲುಗಳು, ದಾರಿ-ಕಳ್ಳದಾರಿಗಳು, ಇವುಗಳ ಬಗ್ಗೆ ಶಿವರಾಯರಿಗೆ ಪೂರ್ಣ ಮಾಹಿತಿ ಇತ್ತು. ಅದಲ್ಲದೆ ಶಿವರಾಯರ ಚತುರ ಗುಪ್ತಚಾರರು ಖಾನನ ಶಿಬಿರದಲ್ಲಿ ಈಗಾಗಲೇ ಸೇರಿಕೊಂಡಿದ್ದರು. ಸ್ವತಃ ಶಾಯಿಸ್ತಾಖಾನನ ಮಹಲಿನಲ್ಲಿ ಮಧ್ಯರಾತ್ರಿ ನುಗ್ಗಬೇಕು ಮತ್ತು ಅವನನ್ನು ಕೊಲ್ಲಬೇಕು ಎಂದು ಶಿವರಾಯರು ಯೋಜನೆ ಮಾಡಿದರು. ಎಂತಹ ಸಾಹಸದ ಯೋಜನೆ ಇದು ! ಮಹಲಿನಲ್ಲಿ ನುಗ್ಗಲು ಇರುವೆಗೂ ಸಾಧ್ಯವಿರಲಿಲ್ಲ. ಲಾಲಮಹಲಿನ ಸುತ್ತಲೂ ಮುಕ್ಕಾಲು ಲಕ್ಷ ಸೈನ್ಯದ ಜಾಗ್ರತ



**ಶಾಯಿಸ್ತಾಖಾನನ ಮೇಲೆ ಶಿವರಾಯರ ಹಲ್ಲೆ**

ಕಾವಲು ಇತ್ತು. ಸಶಸ್ತ್ರ ಮರಾಠರಿಗೆ ಊರಿನಲ್ಲಿ ಬರಲು ಶಾಯಿಸ್ತಾಖಾನನು ನಿರ್ಬಂಧ ಹಾಕಿದ್ದನು. ಆದರೆ ಶಿವರಾಯರು ಒಮ್ಮೆ ನಿರ್ಧರಿಸಿದರೆಂದರೆ ಆಯಿತು, ಅದೇ ಕೊನೆಯ ನಿರ್ಧಾರ.

ಶಿವರಾಯರು ದಿನವನ್ನು ನಿಶ್ಚಯಿಸಿದರು. ದಿನಾಂಕ ೫ ಎಪ್ರಿಲ್ ೧೬೬೩ ರ ರಾತ್ರಿ ಊದುತ್ತಾ, ಬಾರಿಸುತ್ತಾ ಒಂದು ಮದುವೆಯ ದಿಬ್ಬಣ ಹೊರಟಿತ್ತು. ಮುಂದೆ ನೂರಾರು ದೀಪಗಳು ಉರಿಯುತ್ತಿದ್ದವು. ನೂರಾರು ಸ್ತ್ರೀ-ಪುರುಷರು ಶೃಂಗರಿಸಿಕೊಂಡು ನಡೆದಿದ್ದರು. ಕೆಲವರು ಪಲ್ಲಕ್ಕಿಗಳಲ್ಲಿ, ಕೆಲವರು ಮೇಣೆಗಳಲ್ಲಿ, ಇನ್ನು ಕೆಲವರು ಕಾಲ್ನಡಿಗೆಯಲ್ಲಿ ಹೊರಟಿದ್ದರು. ಶಿವರಾಯರು ತಮ್ಮ ಜನರೊಡನೆ ಆ ದಿಬ್ಬಣದಲ್ಲಿ ಸೇರಿಕೊಂಡಿದ್ದರು. ದಿಬ್ಬಣ ಮುಂದಕ್ಕೆ ಹೋಯಿತು. ಎಲ್ಲೆಡೆಯಲ್ಲೂ ನಿಶ್ಯಬ್ದ ಆವರಿಸಿತು ಮತ್ತು ಅವರ ಜನರು ಲಾಲಮಹಲಿನ ಗೋಡೆಯತ್ತ ಸರಿದರು. ಆ ಸಮಯದಲ್ಲಿ ಶಾಯಿಸ್ತಾಖಾನನು ಗಾಢ ನಿದ್ರೆಯಲ್ಲಿದ್ದನು.

**ಶಾಯಿಸ್ತಾಖಾನನ ಸೊಕ್ಕು ಮುರಿಯಿತು :** ವಾಡೆಯ ಗೋಡೆಗೆ ಕನ್ನ ಕೊರೆದು ಶಿವರಾಯರು ಒಳಗೆ ನುಗ್ಗಿದರು. ಅದು ಅವರದೇ ಮಹಲು ಅಲ್ಲವೇ ! ಅವರಿಗೆ ಅದರ ಪ್ರತಿಯೊಂದು ಮೂಲೆಮೂಲೆಗಳ ಪರಿಚಯವಿತ್ತು. ಖಾನನ ಕಾವಲುಗಾರರು ತೂಕಡಿಸುತ್ತಿದ್ದರು. ಶಿವರಾಯರ ಜನರು ಅವರನ್ನು ಕಟ್ಟಿ ಹಾಕಿದರು. ಶಿವರಾಯರು ಇನ್ನೂ ಒಳಗೆ ನುಗ್ಗಿದರು. ಅಷ್ಟರಲ್ಲಿ ಯಾರೋ ಒಬ್ಬನು ಖಡ್ಗ ಹಿಡಿದು ಅವರ ಮೈಮೇಲೆ ಏರಿ ಬಂದನು. ಶಿವರಾಯರು ಅವನನ್ನು ಕೊಂದು ಹಾಕಿದರು. ಶಾಯಿಸ್ತಾಖಾನನೇ ಇರಬಹುದು ಎಂದು ಅವರಿಗೆ ಅನಿಸಿತು. ಆದರೆ ಅವನು ಶಾಯಿಸ್ತಾಖಾನನ ಮಗನಾಗಿದ್ದನು. ಗಲಾಟೆಯಾಯಿತು. ಜನರು ಎಚ್ಚರಾದರು.

ಶಿವರಾಯರು ನೇರವಾಗಿ ಖಾನನ ಮಲಗುವ ಕೋಣೆಗೆ ಹೋದರು. ಅವರು ಖಡ್ಗವನ್ನು ಹೊರಗೆ ಸೆಳೆದರು. ಶಾಯಿಸ್ತಾಖಾನನು ಗಾಬರಿಯಾದನು. 'ಸೈತಾನ ! ಸೈತಾನ !' ಎಂದು ಒದರುತ್ತಾ ಕಿಡಕಿಯಿಂದ ಪಾರಾಗತೊಡಗಿದನು. ಶಿವರಾಯರು ಅವನನ್ನು ಬೆನ್ನಟ್ಟಿದರು. ಶಾಯಿಸ್ತಾಖಾನನು ಕಿಡಕಿಯತ್ತ ಓಡತೊಡಗಿದನು. ಶಾಯಿಸ್ತಾಖಾನನು ಕಿಡಕಿಯಿಂದ ಹೊರಗೆ ಹಾರುವಷ್ಟರಲ್ಲಿ ಶಿವರಾಯರು ಅವನ ಮೇಲೆ ಖಡ್ಗ ಬೀಸಿದರು. ಖಾನನ ಮೂರು ಬೆರಳುಗಳು ತುಂಡಾದವು. ಜೀವದ ಮೇಲೆ ಬಂದ ವಿಪತ್ತು ಬೆರಳ ಮೇಲಿಂದ ಹೋಯಿತು. ಖಾನನು ಕಿಡಕಿಯಿಂದ ಹಾರಿ ಓಡಿದನು. ''ಶಿವಾಜಿ ಬಂದ ಓಡಿರಿ ಓಡಿರಿ !, ಹಿಡಿಯಿರಿ ಅವನನ್ನು'' ಹೀಗೆ ಬೇಕೆಂದೇ ಕೂಗುತ್ತಾ ಶಿವರಾಯರು ಮತ್ತು ಅವರ ಸಂಗಡಿಗರು ಚೀರಾಡುತ್ತಾ ಓಡತೊಡಗಿದರು. ಖಾನನ ಜನರೂ ಹೆದರಿ ಓಡತೊಡಗಿದರು. ಶಿವರಾಯರು ಮತ್ತು ಅವರ ಜನರು ಸಿಂಹಗಡದ ಕಡೆಗೆ ಹೊರಟುಹೋದರು. ಖಾನನ ಜನರು ಶಿವರಾಯರನ್ನು ಇಡೀ ರಾತ್ರಿ ಹುಡುಕುತ್ತಲೇ ಇದ್ದರು.

ಶಾಯಿಸ್ತಾಖಾನನು ತುಂಬ ಹೆದರಿದನು. ''ಇಂದು ಬೆರಳು ಕತ್ತರಿಸಿ ಹೋದವು, ನಾಳೆ ನನ್ನ ತಲೆಯನ್ನು ಶಿವಾಜಿ ಕತ್ತರಿಸಿ ಒಯ್ಯಬಹುದು'' ಎಂದು ಅವನಿಗೆ ಭೀತಿಯುಂಟಾಯಿತು. ಔರಂಗಜೇಬ ಬಾದಶಾಹನಿಗೆ ಈ ಸಂಗತಿ ತಿಳಿದಾಗ, ಅವನಿಗೆ ತುಂಬಾ ಸಿಟ್ಟು ಬಂದಿತು. ಅವನು ಶಾಯಿಸ್ತಾಖಾನನ ಮೇಲೆ ಅಸಮಾಧಾನಗೊಂಡನು. ಅವನು ಖಾನನನ್ನು ಬಂಗಾಲಕ್ಕೆ ಕಳಿಸುವ ಆಜ್ಞೆ ಹೊರಡಿಸಿದನು.

ಮುಘಲರ ಸತ್ತೆಗೆ ಬಿದ್ದ ಈ ಮೊದಲ ಪೆಟ್ಟು ತುಂಬ ಭಯಾನಕವಾಗಿತ್ತು. ಶಿವರಾಯರು ವಿಜಯ ಪಡೆದು ಬಂದರೆಂದು ತೋಪುಗಳು ಗರ್ಜಿಸಿದವು. ಇಡೀ ಮಹಾರಾಷ್ಟ್ರದಲ್ಲಿ ಆನಂದವೇ ಆನಂದವಾಯಿತು.

## ಅಭ್ಯಾಸ

**೧. ಬಿಟ್ಟ ಸ್ಥಳಗಳಲ್ಲಿ ಕಂಸದಲ್ಲಿಯ ಯೋಗ್ಯ ಶಬ್ದಗಳನ್ನು ಬರೆಯಿರಿ.**

(ಅ) ಶಾಯಿಸ್ತಾಖಾನನು ......... ಕೋಟೆಗೆ ಮುತ್ತಿಗೆ ಹಾಕಿದನು.

(ಪುರಂದರ, ಪನ್ಹಾಳಾ, ಶಿವನೇರಿ)

(ಆ) ಶಾಯಿಸ್ತಾಖಾನನು ಪುಣೆಯಲ್ಲಿ ......... ದಲ್ಲಿ ಇಳಿದುಕೊಂಡನು.

(ಶನಿವಾರವಾಡಾದಲ್ಲಿ, ಲಾಲಮಹಲದಲ್ಲಿ, ಪರ್ವತಿಯ ಮೇಲೆ)

(ಇ) ಬಾದಶಹ ಔರಂಗಜೇಬನು ಶಾಯಿಸ್ತಾಖಾನನನ್ನು ........ ಕಳಿಸುವ ಆಜ್ಞೆ ಹೊರಡಿಸಿದನು.

(ಆಸಾಮಕ್ಕೆ, ಕರ್ನಾಟಕಕ್ಕೆ, ಬಂಗಾಲಕ್ಕೆ)

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಶಾಯಿಸ್ತಾಖಾನನು ಯಾವ ಊರುಗಳನ್ನು ಗೆದ್ದುಕೊಳ್ಳುತ್ತ ಪುಣೆಗೆ ಬಂದನು ?

(ಆ) ಶಾಯಿಸ್ತಾಖಾನನ ಸೈನ್ಯವು ಏಕೆ ಬೇಸತ್ತಿತ್ತು ?

(ಇ) ಶಾಯಿಸ್ತಾಖಾನನಿಗೆ ಯಾವ ಭೀತಿ ಉಂಟಾಯಿತು ?

**೩. ಕಾರಣಗಳನ್ನು ಬರೆಯಿರಿ.**

(ಅ) ಔರಂಗಜೇಬ ಬಾದಶಹನು ಶಿವರಾಯರ ಮೇಲೆ ಸಿಟ್ಟಾದನು.

(ಆ) ಶಾಯಿಸ್ತಾಖಾನನು ಕಿಡಕಿಯಿಂದ ಹಾರಿ ಓಡಿದನು.

**೪. ಕೆಳಗಿನ ಘಟನೆಗಳನ್ನು ಕಾಲಾನುಕ್ರಮವಾಗಿ ಬರೆಯಿರಿ.**

(ಅ) ಶಿವರಾಯರು ಹಾಗೂ ಅವರ ಜನರು ಸಿಂಹಗಡದ ಕಡೆಗೆ ಹೊರಟು ಹೋದರು.

(ಆ) ಶಾಯಿಸ್ತಾಖಾನನು ಲಾಲಮಹಲಿನಲ್ಲಿ ಇಳಿದುಕೊಂಡನು.

(ಇ) ಶಾಯಿಸ್ತಾಖಾನನು ಚಾಕಣದ ಕೋಟೆಯನ್ನು ವಶಪಡಿಸಿಕೊಂಡನು.

(ಈ) ಶಿವರಾಯರು ಶಾಯಿಸ್ತಾಖಾನನ ಸೊಕ್ಕು ಮುರಿದರು.

**ಉಪಕ್ರಮ**

ಲಾಲಮಹಲಿಗೆ ಭೇಟಿ ಕೊಡುವ ಸಲುವಾಗಿ ಪ್ರವಾಸವನ್ನು ಆಯೋಜಿಸಿರಿ.

# ೧೨. ಪುರಂದರದ ಮುತ್ತಿಗೆ ಮತ್ತು ಒಪ್ಪಂದ

**ಸುರತದ ಮೇಲೆ ದಾಳಿ :** ಈ ವಿಜಯದ ನಂತರ ಶಿವರಾಯರು ಸುಮ್ಮನೆ ಕೂಡಲಿಲ್ಲ. ಔರಂಗಜೇಬ ಬಾದಶಹನ ಸೈನ್ಯ ಮಹಾರಾಷ್ಟ್ರದಲ್ಲಿ ಗಲಭೆ ಎಬ್ಬಿಸಿತ್ತು. ಆಗ ಬಾದಶಹನಿಗೆ ಭಯವನ್ನುಂಟು ಮಾಡಲು ಶಿವರಾಯರು ಸುರತ ಪಟ್ಟಣದ ಮೇಲೆ ದಾಳಿ ಮಾಡಿದರು. ಎಲ್ಲಿ ಪುಣೆ ಮತ್ತು ಎಲ್ಲಿ ಸುರತ ? ಸುರತ ಎಂದರೆ ಆ ಕಾಲದಲ್ಲಿ ಮುಘಲರ ದೊಡ್ಡ ವ್ಯಾಪಾರದ ಪೇಟೆ. ತುಂಬಾ ಸಂಪತ್ತಿನಿಂದ ತುಂಬಿತ್ತು. ಶಿವರಾಯರು ಸುರತದ ಮೇಲೆ ದಾಳಿ ಮಾಡಿ ಲಕ್ಷಾವಧಿ ರೂಪಾಯಿಗಳನ್ನು ದೋಚಿದರು. ಸುರತದ ಲೂಟಿಯಲ್ಲಿ ಶಿವರಾಯರು ನೀತಿ ಬಿಟ್ಟಿರಲಿಲ್ಲ. ಚರ್ಚ ಅಥವಾ ಮಸೀದಿಗಳಿಗೆ ಕೈ ಹಚ್ಚಲಿಲ್ಲ. ಹೆಣ್ಣು ಮಕ್ಕಳಿಗೆ ತೊಂದರೆ ಕೊಡಲಿಲ್ಲ.

ಸುರತದ ಮೇಲಿನ ದಾಳಿಯಿಂದ ಬಾದಶಾಹನು ಭಯಂಕರ ಸಿಟ್ಟಿಗೆದ್ದನು. ಅವನು ಮರಾಠರ ರಾಜ್ಯವನ್ನು ನಾಶಗೊಳಿಸುವ ನಿಶ್ಚಯವನ್ನು ಮಾಡಿದನು. ಮಿರ್ಜಾರಾಜೇ ಜಯಸಿಂಗ ಎಂಬ ತನ್ನ ಬಲಾಢ್ಯ ಸೇನಾಪತಿಯನ್ನು ಅವನು ಶಿವರಾಯರ ಮೇಲೆ ದಾಳಿ ಮಾಡಲು ಕಳುಹಿಸಿದನು. ಅವನ ಜೊತೆಗೆ ತನ್ನ ವಿಶ್ವಾಸದ, ಸರದಾರನಾದ ದಿಲೇರಖಾನನನ್ನೂ ಕಳುಹಿಸಿದನು. ಸಾಕಷ್ಟು ಸಂಪತ್ತನ್ನೂ, ಮದ್ದುಗುಂಡನ್ನೂ ಜೊತೆಗೇ ಕಳುಹಿಸಿದನು. ಜಯಸಿಂಗ ಮತ್ತು ದಿಲೇರಖಾನರು ಪ್ರಚಂಡ ಸೇನೆಯೊಡನೆ ದಕ್ಷಿಣಕ್ಕೆ ಬಂದು ತಲುಪಿದರು. ಸ್ವರಾಜ್ಯಕ್ಕೆ ದೊಡ್ಡ ಗಂಡಾಂತರ ಬಂದೊದಗಿತು.

ಸುರತ ಗೆದ್ದುಕೊಂಡ ತರುವಾಯಿ ಶಿವರಾಯರು ಹಿಂದಿರುಗಿದುದೇ ತಡ ಕ್ರಿ.ಶ. ೧೬೬೪ ರಲ್ಲಿ ಕರ್ನಾಟಕದಿಂದ ಒಂದು ದುಃಖದ ಸುದ್ದಿ ತಿಳಿಯಿತು. ಬೇಟೆಯ ಸಮಯದಲ್ಲಿ ಅಪಘಾತದಿಂದಾಗಿ ಶಹಾಜಿರಾಜೇಯವರು ನಿಧನ ಹೊಂದಿದರು. ಶಿವರಾಯರು ಮತ್ತು ಜೀಜಾಊ ಇವರ ಮೇಲೆ ದುಃಖದ ಬೆಟ್ಟವೇ ಕುಸಿಯಿತು. ತಾಯಿಯವರ



ಪುರಂದರ ಕೋಟೆ

ಕೊರಳಿಗೆ ಬಿದ್ದು ಶಿವರಾಯರು ಅಪಾರ ದುಃಖದಲ್ಲಿ ಅವರನ್ನು ಸಂತೈಸಿದರು.

**ಪುರಂದರಕ್ಕೆ ಮುಘಲರ ಮುತ್ತಿಗೆ :** ಪುರಂದರವು ಶಿವರಾಯರ ಪ್ರಚಂಡವಾದ ಮತ್ತು ಭದ್ರವಾದ ಕೋಟೆಯಾಗಿತ್ತು. ಈ ಕೋಟೆಯನ್ನು ವಶಪಡಿಸಿಕೊಳ್ಳದ ಹೊರತಾಗಿ ಶಿವರಾಯರನ್ನು ಸೋಲಿಸುವುದು ಸಾಧ್ಯವೇ ಇಲ್ಲ ಎಂಬುದನ್ನು ದಿಲೇರಖಾನನು ತಿಳಿದುಕೊಂಡಿದ್ದನು. ಆದ್ದರಿಂದ ದಿಲೇರಖಾನನು ಪುರಂದರ ಕೋಟೆಗೆ ಮುತ್ತಿಗೆ ಹಾಕಿದನು. ಅವನ ಸೈನ್ಯ ಬಹಳ ದೊಡ್ಡದಿತ್ತು. ಆದರೆ ಪುರಂದರದ ಕಿಲ್ಲೇದಾರ ಮುರಾರಬಾಜಿಯು ಛಲ ಸಾಧಿಸುವ ವೀರ. ಅವನ ಕೈಕೆಳಗಿನ ಸೈನಿಕರು ಬಹು ಶೂರರು, ತನ್ನ ಎಲ್ಲಾ ಶೂರ ಸೈನಿಕರೊಡನೆ ಮುರಾರಬಾಜೀ ಯುದ್ಧಕ್ಕೆ ಸಿದ್ಧನಾದನು.

ದಿಲೇರಖಾನನ ತೋಫುಗಳು ಘರ್ಜಿಸತೊಡಗಿದವು. ತೋಫಿನ ಕಡು ಕೆಂಪು ಜ್ವಾಲೆಗಳು ಕೋಟೆಯ ಮೇಲೆ ಬಂದು ಬೀಳತೊಡಗಿದವು. ಆದರೆ ಮುರಾರಬಾಜೀ ಮತ್ತು ಅವನ ಮಾವಳರು ಹಿಮ್ಮೆಟ್ಟಲಿಲ್ಲ, ಅವರು ಇನ್ನಷ್ಟು ಹೆಚ್ಚಿನ ಧೈರ್ಯದಿಂದ ಕಾದಾಡತೊಡಗಿದರು. ಮುಘಲರು ತೋಫಿನ ಮಳೆಯನ್ನು ಸುರಿಸಿದರು. ಮಾಚಿಯ ಬುರುಜು ಕುಸಿಯಿತು. ಮುಘಲರು ಮಾಚಿಯನ್ನು ಹೊಕ್ಕರು. ದಿಲೇರಖಾನನು ಮಾಚಿಯನ್ನು ಗೆದ್ದನು. ಮರಾಠರು ಮೇಲಿದ್ದ ಭದ್ರಕೋಟೆಯಲ್ಲಿ ಆಶ್ರಯ ಪಡೆದರು. ಅವರು ಕಾದಾಡುತ್ತಲೇ ಇದ್ದರು. ದಿಲೇರಖಾನನು ತನ್ನ ಛಾವಣಿಯಿಂದ ಈ ಯುದ್ಧವನ್ನು ನೋಡುತ್ತಿದ್ದನು.

ಮುರಾರಬಾಜೀ ಸಿಟ್ಟಿನಿಂದ ಕೆಂಪೇರಿದ್ದನು. ಅವನು ಐದುನೂರು ಮಾವಳರನ್ನು ಆರಿಸಿದನು. ಅವರ ಜೊತೆಯಲ್ಲಿ ಮುಘಲರ ಮೇಲೆ ಏರಿಹೋಗುವ ಯೋಜನೆ ಮಾಡಿದನು. ಮೇಲಿನ ಭದ್ರ ಕೋಟೆಯ ಬಾಗಿಲನ್ನು ತೆರೆದನು. 'ಹರ ಹರ ಮಹಾದೇವ', ಎಂದು ಗರ್ಜನೆ ಮಾಡುತ್ತಾ ಮುರಾರಬಾಜೀ ಮತ್ತು ಅವನ ಮಾವಳರು ಮುಘಲರ ಮೇಲೆ ಏರಿ ಹೋದರು. ಸ್ವಲ್ಪ ಸಮಯ ಘೋರ ಯುದ್ಧವಾಯಿತು. ಮುಘಲರ ಸೈನ್ಯ ಅಪಾರವಿತ್ತು. ಆದರೆ ಮರಾಠರು ಅವರನ್ನು ಸಂಪೂರ್ಣವಾಗಿ ಸೋಲಿಸಿದರು. ಕೊನೆಗೆ ಮುಘಲರು ಹಿಂದೆ ಸರಿದರು. ಅವರು ತಮ್ಮ ಜೀವ ಮುಷ್ಟಿಯಲ್ಲಿ ಹಿಡಿದು, ದಿಲೇರಖಾನನ ಛಾವಣಿಯ ಕಡೆಗೆ ಓಡತೊಡಗಿದರು.

ಮುರಾರಬಾಜೀ ಅವರ ಬೆನ್ನು ಹತ್ತಿದನು. ಅವನ ಸೈನ್ಯವು ದಿಲೇರಖಾನನ ಪಾಳೆಯದಲ್ಲಿ ನುಗ್ಗಿತು. ಪಾಳೆಯದಲ್ಲಿ ಗೊಂದಲವೇ ಗೊಂದಲ ಉಂಟಾಯಿತು. ಓಡಾಟ, ಕಿರಚಾಟ, ಕೂಗಾಟ ಇವುಗಳ ಹಾಹಾಕಾರ ಎದ್ದಿತು. ಲಗುಬಗೆಯಿಂದ ದಿಲೇರಖಾನನು ಆನೆಯ ಅಂಬಾರಿಯಲ್ಲಿ ಕುಳಿತನು. ಮುಂದೆ ನೋಡಿದಾಗ ಅವನು ಮುರಾರಬಾಜೀಯನ್ನು ಕಂಡನು. ಮುರಾರಬಾಜೀಯ ಖಡ್ಗವು ಒಬ್ಬನ ಎದೆಯಲ್ಲಿ ತೂರಿದರೆ, ಇನ್ನೊಬ್ಬನ ತಲೆಯಲ್ಲಿ, ಮತ್ತೊಬ್ಬನ ಕುತ್ತಿಗೆಯಲ್ಲಿ ತೂರುತ್ತಿತ್ತು. ಮುರಾರಬಾಜೀಯನ್ನು ತಡೆಗಟ್ಟಲು ಯಾರಿಗೂ ಸಾಧ್ಯವಿರಲಿಲ್ಲ. ಅವನ ಶೌರ್ಯ ಕಂಡು ದಿಲೇರಖಾನನು ದಂಗು ಬಡಿದನು.

**ಮುರಾರಬಾಜೀಯ ಅತುಲ ಪರಾಕ್ರಮ :** ದಿಲೇರಖಾನನನ್ನು ಕಂಡು ಮುರಾರಬಾಜೀ ಸಿಟ್ಟಿಗೆದ್ದನು. ''ಮುರಿಯಿರಿ, ಕತ್ತರಿಸಿರಿ, ರುಂಡ ಉರುಳಿಸಿರಿ,'' ಎಂದು ಒದರುತ್ತಾ ಅವನು ಶತ್ರುಗಳ ಮೇಲೆ ಏರಿಹೋದನು. ಅವನ ಖಡ್ಗ ರಭಸದಿಂದ ತಿರುಗತೊಡಗಿತು. ಯಾವನು ಅಡ್ಡ ಬಂದನೋ ಅವನನ್ನು ಕೊಂದನು. ಈ ಒಬ್ಬನೇ ವೀರನನ್ನು ಮುಘಲ ಸೈನಿಕರು ನಾಲ್ಕೂ ಬದಿಯಿಂದ ಸುತ್ತುವರಿದರು. ಅಷ್ಟರಲ್ಲಿ ದಿಲೇರಖಾನನು ಅಂಬಾರಿಯಿಂದ ಗರ್ಜಿಸಿದನು. ''ನಿಲ್ಲಿ !'' ಮುಘಲರು ನಿಂತರು. ಒಂದು ಕ್ಷಣ ಹಿಂದೆ ಸರಿದರು. ಖಾನನು ಮುರಾರಬಾಜೀಗೆ ಹೇಳಿದನು, ಮುರಾರಬಾಜೀ, ನಿನ್ನಂಥ ಕಠಾರಿ ವೀರನನ್ನು ನಾನು ಇಲ್ಲಿಯವರೆಗೆ ನೋಡಿರಲಿಲ್ಲ. ನೀನು ನಮ್ಮ ಕಡೆಗೆ ಬಾ; ನನ್ನ ಮಾತನ್ನು ನಂಬು, ಬಾದಶಾಹ ನಿನ್ನನ್ನು ಸರದಾರನನ್ನಾಗಿ ಮಾಡುವರು. ಜಹಗೀರು ಕೊಡುವರು, ಬಹುಮಾನ ಕೊಡುವರು !'' ಮುರಾರಬಾಜೀ ದಿಲೇರಖಾನನ ಶಬ್ದಗಳನ್ನು ಕೇಳಿದನು. ಸಿಟ್ಟಿನಿಂದ ಅವನ ಕಣ್ಣುಗಳು ಕೆಂಪಾದವು. ಅವನು ಕೆರಳಿ ಹೇಳಿದ, ''ಎಲಾ ನಾವು ಶಿವಾಜಿ ಮಹಾರಾಜರ



**ಮುರಾರಬಾಜೀ ದೇಶಪಾಂಡೆ-ದಿಲೇರಖಾನ ಯುದ್ಧಪ್ರಸಂಗ**

ಕಡೆಯವರು ! ನಿನ್ನ ಮಾತನ್ನು ನಂಬುವವರೇ ? ನಮಗೆ ಏನು ಕಡಿಮೆ ಇದೆ ? ನಿನ್ನ ಬಾದಶಾಹನ ಜಹಗೀರು ಯಾರಿಗೆ ಬೇಕು ?'' ಮುರಾರಬಾಜೀ ಖಾನನತ್ತ ನೆಗೆದನು. ಸಿಕ್ಕ ಸಿಕ್ಕವರನ್ನೆಲ್ಲಾ ಕತ್ತರಿಸುತ್ತ ನಡೆದನು. ದಿಲೇರಖಾನನು ಅಂಬಾರಿಯಿಂದ ಬಾಣಬಿಟ್ಟನು. ಆ ಬಾಣ ನೇರವಾಗಿ ಮುರಾರಬಾಜೀಯ ಕಂಠದಲ್ಲಿ ಸೇರಿತು. ಅವನು ಭೂಮಿಯ ಮೇಲೆ ಕುಸಿದನು. ಮಾವಳೆಗಳು ಅವನ ಶರೀರವನ್ನು ಎತ್ತಿಕೊಂಡು ಮೇಲಿನ ಭದ್ರ ಕೋಟೆಯನ್ನು ಸೇರಿದರು. ಕೋಟೆಗಾರ ಬಿದ್ದನೆಂದು ಅವರಿಗೆ ತುಂಬಾ ದುಃಖವಾಯಿತು. ಆದರೆ 'ಒಬ್ಬ ಮುರಾರಬಾಜೀ ಬಿದ್ದರೆ ಏನಾಯಿತು ? ನಾವು ಹಾಗೆಯೇ ಶೂರರಿದ್ದೇವೆ. ಧೈರ್ಯದಿಂದ ಯುದ್ಧ ಮಾಡುತ್ತೇವೆ,'' ಎಂದು ಹೇಳುತ್ತ ಅವರು ಹೆದರದೆ ಪುನಃ ನಿಕರದ ಯುದ್ಧ ಮಾಡಹತ್ತಿದರು.

ಈ ಸುದ್ದಿ ಶಿವರಾಯರಿಗೆ ತಿಳಿದಾಗ ಅವರಿಗೆ ತುಂಬಾ ದುಃಖವಾಯಿತು. ಅವರು ಆಲೋಚಿಸಿದರು. ಒಂದೊಂದು ಕೋಟೆಗಾಗಿ ವರ್ಷಾನುವರ್ಷ ಯುದ್ಧ ಮಾಡಬಹುದು. ಆದರೆ ಅನಾವಶ್ಯಕವಾಗಿ ಜನರು ಮಡಿಯುವರು. ಶಿವರಾಯರಿಗೆ ಅದು ಬೇಡವಾಗಿತ್ತು.

**ಪುರಂದರದ ಒಪ್ಪಂದ :** ಏನು ಮಾಡುವದು ? ಶಕ್ತಿ ನಡೆಯದಿದ್ದಾಗ, ಯುಕ್ತಿ ಉಪಯೋಗ ಬೀಳದಿದ್ದಾಗ ಸ್ವಲ್ಪ ಕಾಲ ಹಿಂದೆ ಸರಿಯುವುದೇ ಲೇಸು ಎಂದುಕೊಂಡು ಮುಘಲರೊಡನೆ ಒಪ್ಪಂದ ಮಾಡಿಕೊಳ್ಳುವುದೆಂದು ಶಿವರಾಯರು ನಿಶ್ಚಯಿಸಿದರು. ಶಿವರಾಯರು ಸ್ವತಃ ಜಯಸಿಂಗನ ಬಳಿ ಹೋದರು. ಅವನೊಡನೆ ಮುತ್ಸದ್ದಿತನದಿಂದ ಮಾತುಕತೆ ನಡೆಸಿದರು. ಅವರು ಹೇಳಿದರು. ''ಮಿರ್ಜಾರಾಜೇ, ತಾವು ರಜಪೂತರಿದ್ದೀರಿ. ನಮ್ಮ ದುಃಖ ನೀವು ತಿಳಿಯಬಲ್ಲಿರಿ. ಬಾದಶಾಹನ



**ಶಿವರಾಯ–ಮಿರ್ಝಾರಾಜೇ ಜಯಸಿಂಗ ಭೇಟಿ**

ದಾಳಿಗಳಿಂದ ಮಹಾರಾಷ್ಟ್ರಕ್ಕೆ ತುಂಬಾ ಹಾನಿಯಾಗಿದೆ ಜನರಿಗೆ ತುಂಬಾ ತೊಂದರೆಯಾಗಿದೆ. ಜನರು ಸುಖಿಗಳಾಗಬೇಕು ಎಂದು ನಾವು ಸ್ವರಾಜ್ಯದ ಕಾರ್ಯವನ್ನು ಕೈಕೊಂಡಿದ್ದೇವೆ. ನೀವೂ ಆ ಕಾರ್ಯವನ್ನು ಕೈಕೊಳ್ಳಿ. ನಾನು ಮತ್ತು ನನ್ನ ಮಾವಳೆ ಜನರು ನಿಮಗೆ ಸಹಾಯ ಮಾಡುವೆವು,'' ಜಯಸಿಂಗನು ದೊಡ್ಡ ಧೂರ್ತ. ಅವನು ಶಿವರಾಯರಿಗೆ ಒಪ್ಪಂದ ಮಾಡಿಕೊಳ್ಳಲು ಹೇಳಿದನು. ಅವರು ಒಪ್ಪಂದ ಮಾಡಿಕೊಂಡರು. ಈ ಒಪ್ಪಂದದ ಪ್ರಕಾರ ಶಿವರಾಯರು ಇಪ್ಪತ್ತೂ ಮ್ರು ಕೋಟೆಗಳನ್ನೂ ಮತ್ತು ನಾಲ್ಕು ಲಕ್ಷ ಹೊನ್ನುಗಳ ಉತ್ಪನ್ನವಿರುವ ಭೂಮಿಯನ್ನೂ ಮುಘಲರಿಗೆ ಕೊಡುವುದಾಗಿ ಒಪ್ಪಿದರು. ಈ ಒಪ್ಪಂದ ೧೬೬೫ ರಲ್ಲಿ ಆಯಿತು.

ಪುರಂದರದ ಒಪ್ಪಂದವಾಯಿತು. ಅದೇ ಸಮಯದಲ್ಲಿ ಶಿವರಾಯರು ಆಗ್ರಾಕ್ಕೆ ಹೋಗಿ ಬಾದಶಾಹನ ಭೇಟಿ ಮಾಡಬೇಕೆಂದು ಜಯಸಿಂಗನು ಸೂಚಿಸಿದನು. ಅವರಿಗೆ ಸುರಕ್ಷಿತತೆಯ ಅಭಯವಚನ ಕೊಟ್ಟನು. ಜಯಸಿಂಗನ ಸೂಚನೆಯ ಕುರಿತು ಶಿವರಾಯರು ಯೋಚಿಸಿದರು. ಬಾದಶಾಹನು ಕಪಟ ಇದ್ದಾನೆ. ಸ್ವಂತ ತಮ್ಮನನ್ನೂ ಅವನು ಮೋಸಗೊಳಿಸಿದ್ದಾನೆ. ಇದು ಶಿವರಾಯರಿಗೆ ಚೆನ್ನಾಗಿ ಗೊತ್ತಿತ್ತು. ಆದರೂ ಈ ಪ್ರಸಂಗವನ್ನು ಜಾಗರೂಕತೆಯಿಂದ ಎದುರಿಸಬೇಕೆಂದು ನಿಶ್ಚಯಿಸಿದರು. ನಾವು ಬಾದಶಾಹನ ಭೇಟಿಗೆ ಆಗ್ರಾಕ್ಕೆ ಹೋಗಲು ಸಿದ್ಧರಿದ್ದೇವೆ ಎಂದು ಶಿವರಾಯರು ಜಯಸಿಂಗನಿಗೆ ತಿಳಿಸಿದರು.

**೧. ಬಿಟ್ಟ ಸ್ಥಳಗಳಲ್ಲಿ ಕಂಸದಲ್ಲಿಯ ಯೋಗ್ಯ ಪರ್ಯಾಯವನ್ನು ಬರೆಯಿರಿ.**

(ಅ) ಆ ಸಮಯದಲ್ಲಿಯ ಮುಘಲರ ಪ್ರದೇಶದಲ್ಲಿಯ ದೊಡ್ಡ ವ್ಯಾಪಾರ ಪೇಟೆಯೆಂದರೆ ............ .

(ಪುಣೆ, ಸುರತ, ದಿಲ್ಲಿ)

(ಆ) ಪುರಂದರದ ಕಿಲ್ಲೇದಾರನಾದ .........ನು ಛಲ ಸಾಧಿಸುವ ವೀರನಾಗಿದ್ದನು.

(ಬಾಜೀಪ್ರಭು, ತಾನಾಜಿ, ಮುರಾರಬಾಜೀ)

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಶಿವರಾಯರು ಸುರತ ಪಟ್ಟಣದ ಮೇಲೆ ಏಕೆ ದಾಳಿ ಮಾಡಿದರು ?

(ಆ) ದಿಲೇರಖಾನನು ಪುರಂದರಕ್ಕೆ ಏಕೆ ಮುತ್ತಿಗೆ ಹಾಕಿದನು?

(ಇ) ಮುಘಲರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಶಿವರಾಯರು ಏಕೆ ನಿಶ್ಚಯಿಸಿದರು ?

(ಈ) ಪುರಂದರದ ಒಪ್ಪಂದದಲ್ಲಿ ಶಿವರಾಯರು ಮುಘಲರಿಗೆ ಯಾವ ಪ್ರದೇಶವನ್ನು ಕೊಡಲು ಒಪ್ಪಿಕೊಂಡರು ?

**೩. ಎರಡು-ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಮುರಾರಬಾಜೀಯ ಶೌರ್ಯ ನೋಡಿ ದಿಲೇರಖಾನನು ಅವನಿಗೆ ಏನು ಹೇಳಿದನು ?

(ಆ) ಮುರಾರಬಾಜೀಯು ದಿಲೇರಖಾನನಿಗೆ ಯಾವ ಉತ್ತರ ಕೊಟ್ಟನು ?

**೪. ಪಾಠದಲ್ಲಿ ಬಂದ ಹೆಸರುಗಳ ಅಕ್ಷರಗಳ ಮೇಲಿಂದ ಶಬ್ದಗಳನ್ನು ಪೂರ್ಣಮಾಡಿರಿ.**

(ಅ) ಔ .................

(ಆ) ಪು .................

(ಇ) ಮು .................

(ಈ) ಜ .................

(ಉ) ದಿ .................


**ಉಪಕ್ರಮ**

ನಿಮ್ಮ ಪರಿಸರದಲ್ಲಿಯ ಕೋಟೆಗೆ ಭೇಟಿ ಕೊಡಿರಿ. ಆ ಕೋಟೆಯ ಬಗ್ಗೆ ಶಿಕ್ಷಕರಿಂದ ಮಾಹಿತಿ ಪಡೆಯಿರಿ.

# ೧೩. ಬಾದಶಾಹನ ಕಣ್ಣಿಗೆ ಮಣ್ಣೆರಚಿದರು

ಜಯಸಿಂಗನ ಮಾತನ್ನು ನಂಬಿ ಶಿವರಾಯರು ಬಾದಶಾಹನ ಭೇಟಿಗೆ ಆಗ್ರಾಕ್ಕೆ ಹೊರಟರು. ಹೋಗುವ ಮೊದಲು ಶಿವರಾಯರು ಸ್ವರಾಜ್ಯದ ಆಡಳಿತವನ್ನು ಜಿಜಾಮಾತೆಯವರ ಕೈಗೆ ಒಪ್ಪಿಸಿದರು ಮತ್ತು ಅವರ ಆಶೀರ್ವಾದ ಪಡೆದರು. ಜೊತೆಯಲ್ಲಿ ತಮ್ಮ ಮಗ ಸಂಭಾಜಿರಾಜೇ, ಆಯ್ದ ಸರದಾರರು, ಕೆಲವು ವಿಶ್ವಾಸಿಕ ಜನರು ಮತ್ತು ತುಂಬಾ ಸಂಪತ್ತನ್ನು ತೆಗೆದುಕೊಂಡರು. ಅಲ್ಲಲ್ಲಿ ತಂಗುತ್ತಾ, ಅವರು ಆಗ್ರಾಕ್ಕೆ ತಲುಪಿದರು.

**ದರಬಾರದಲ್ಲಿಯ ಶೌರ್ಯ :** ನಿಶ್ಚಯಿಸಿದಂತೆ ಶಿವರಾಯರು ಬಾದಶಾಹನ ದರಬಾರಿಗೆ ಹೋದರು. ಚಿಕ್ಕ ಸಂಭಾಜಿರಾಜೇಯವರು ಜೊತೆಯಲ್ಲಿ ಇದ್ದರು. ಆ ದಿನ ಔರಂಗಜೇಬ ಬಾದಶಹಾನ ಐವತ್ತನೆಯ ಹುಟ್ಟುಹಬ್ಬವಿತ್ತು. ಬಾದಶಾಹ ದರಬಾರು ಮುಗಿಸಿ, ತನ್ನ ಆಪ್ತಾಲೋಚನೆ ಮಾಡುವ ಮಹಲಿಗೆ ಹೋದನು. ಅವನ ಮುಂದೆ ಆಯ್ದ ಸರದಾರರು ಮರ್ಯಾದೆಗೆ ತಕ್ಕಂತೆ, ಅವರವರ ಸ್ಥಾನದಲ್ಲಿ ನಿಂತಿದ್ದರು. ಬಾದಶಾಹನು ಶಿವರಾಯರನ್ನು ಹಿಂದಿನ ಸಾಲಿನಲ್ಲಿ ನಿಲ್ಲಿಸಿದನು. ಮರಾಠರಿಗೆ ಅನೇಕ ಸಲು ಬೆನ್ನು ತೋರಿಸಿ ಓಡಿಹೋದ ಜಸವಂತಸಿಂಗ ರಾಠೋಡನು ಶಿವರಾಯರ ಮುಂದಿನ ಸಾಲಿನಲ್ಲಿ ನಿಂತಿದ್ದನು. 'ನಾವು ಮಹಾರಾಷ್ಟ್ರದ ರಾಜರು, ನಮ್ಮ ಮರ್ಯಾದೆಯ ಪ್ರಕಾರ ಮೊದಲ ಸಾಲಿನಲ್ಲಿ ನಿಲ್ಲಿಸಬೇಕಾಗಿತ್ತು. ಆದರೆ ಬಾದಶಾಹನು ನಮ್ಮನ್ನು



ಬಾದಶಾಹರ ದರಬಾರಿನಲ್ಲಿ ಶಿವರಾಯರು

ಹಿಂದಿನ ಸಾಲಿನಲ್ಲಿ ನಿಲ್ಲಿಸಿದ್ದಾನೆ ಎಂದರೇನು ?' ಎಂದು ಶಿವರಾಯರಿಗೆ ಎನಿಸಿತು. ಅವರ ಕಣ್ಣು ಸಿಟ್ಟಿನಿಂದ ಕೆಂಪಾದವು. ಈ ಅಪಮಾನವು ಅವರಿಗೆ ಸಹನವಾಗಲಿಲ್ಲ. ಶಿವರಾಯರು ಸಿಟ್ಟಿನಿಂದ ಮಹಲಿನಿಂದ ಹೊರಗೆ ಬಂದರು. ಅವರು ನೇರವಾಗಿ ತಾವು ಇಳಿದುಕೊಂಡ ಸ್ಥಾನಕ್ಕೆ ಹೋದರು. ಇನ್ನು ಮುಂದೆ ಬಾದಶಾಹನ ಮುಖ ನೋಡುವುದಿಲ್ಲ ಎಂದು ಅವರು ನಿಶ್ಚಯಿಸಿದರು.

ಭೇಟಿಯಾಗುವ ಯೋಜನೆಯು ಈ ಪ್ರಕಾರ ವಿಫಲವಾಯಿತು. ನಡೆದ ಪ್ರಸಂಗದ ಸುದ್ದಿ ಎಲ್ಲಾ ಕಡೆಗೂ ಪಸರಿಸಿತು.

**ಬಾದಶಾಹನ ಮೋಸಗಾರಿಕೆ :** ಔರಂಗಜೇಬನು ಶಿವರಾಯರ ನಿವಾಸದ ಸುತ್ತಮುತ್ತಲೂ ಸೈನಿಕರ ಪಹರೆ ಇರಿಸಿದನು. ಶಿವರಾಯ ಮತ್ತು ಸಂಭಾಜಿರಾಜೇ ಬಾದಶಾಹನ ಸೆರೆಯಲ್ಲಿ ಸಿಕ್ಕರು. ಬಾದಶಾಹನು ನಮಗೆ ಮೋಸ ಮಾಡಿದನು. ಈಗ ಅವನು ತನ್ನನ್ನು ಎಂದೂ ಬಿಡುಗಡೆ ಮಾಡಲಿಕ್ಕಿಲ್ಲ ಎಂದು ಶಿವರಾಯರು ತಿಳಿದರು.

ಕೆಲವು ದಿನಗಳು ಉರುಳಿದವು. 'ನನಗೆ ಮಹಾರಾಷ್ಟ್ರಕ್ಕೆ ಹೋಗಲು ಬಿಡಿರಿ,' ಎಂದು ಒಂದು ದಿನ ಶಿವರಾಯರು ಬಾದಶಾಹನಿಗೆ ಅರ್ಜಿ ಸಲ್ಲಿಸಿದರು. ಆದರೆ ಬಾದಶಹನು ಕೇಳಲಿಲ್ಲ. ಅವರು ತುಂಬಾ ಪ್ರಯತ್ನ ಮಾಡಿದರು. ಆದರೆ ಬಾದಶಾಹನು ಅದಕ್ಕೆ ಒಪ್ಪಲಿಲ್ಲ. 'ಏನಾದರೂ ಮಾಡಿ ಬಾದಶಾಹನ ಸೆರೆಯಿಂದ ಪಾರಾಗಬೇಕು,' ಎಂದು ಶಿವರಾಯರು ಮನಸ್ಸಿನಲ್ಲಿ ನಿಶ್ಚಯ ಮಾಡಿದರು. ಅವನ ಅಪ್ಪಣೆ ಪಡೆದು ಶಿವರಾಯರು ತಮ್ಮ ಜೊತೆಯಲ್ಲಿ ಕರೆದು ತಂದ ಜನರನ್ನು ದಕ್ಷಿಣಕ್ಕೆ ಕಳುಹಿಸಿದರು. ''ಒಳ್ಳೆಯದೇ ಆಯಿತು. ಶಿವಾಜಿಯ ಬಲ ಅಷ್ಟೆ ಕಡಿಮೆ ಆಯಿತು'' ಎಂದು ಬಾದಶಾಹನಿಗೆ ಅನಿಸಿತು. ಈಗ ಶಿವರಾಯರೊಡನೆ ಸಂಭಾಜಿರಾಜೇಯವರು ಮತ್ತು ಹಿರೋಜಿ ಫರ್ಜಂದ ಮತ್ತು ಮದಾರಿ ಮೆಹತರ ಎಂಬ ಸೇವಕರಷ್ಟೇ ಉಳಿದರು.

ಮುಂದೆ ಒಂದು ದಿನ ಶಿವರಾಯರು ಅನಾರೋಗ್ಯದ ನಟನೆಮಾಡಿದರು. ನಟನೆಯೇ ಅದು! ಅವರ ಹೊಟ್ಟೆಯಲ್ಲಿ ಭಯಂಕರ ನೋವು ಪ್ರಾರಂಭವಾಯಿತು. ಹಕೀಮರು, ವೈದ್ಯರು ಬಂದರು; ಔಷಧಿ ಪ್ರಾರಂಭವಾಯಿತು. ತಮ್ಮ ರೋಗ ಗುಣವಾಗಬೇಕೆಂದು ಶಿವರಾಯರು ಸಾಧುಗಳಿಗೆ, ಮೌಲವಿಗಳಿಗೆ ಮಿಠಾಯಿಯ ಪೆಟ್ಟಿಗೆಗಳನ್ನು ಕಳುಹಿಸಲು ಪ್ರಾರಂಭಿಸಿದರು.

**ಪೆಟ್ಟಿಗೆಯಲ್ಲಿ ಕುಳಿತು ಪಾರಾದರು :** ಪಹರೆ ಮಾಡುವವರು ಮಿಠಾಯಿಯ ಪೆಟ್ಟಿಗೆಗಳನ್ನು ತೆರೆದು ನೋಡುತ್ತಿದ್ದರು. ಆದರೆ ಮುಂದೆ ಅವರೂ ಬೇಸತ್ತರು. ಪೆಟ್ಟಿಗೆ ತೆರೆದು ನೋಡುವುದನ್ನು ನಿಲ್ಲಿಸಿದರು. ದಿನೇ ದಿನೇ ಅದನ್ನೇ ಏನು ನೋಡುವದು, ಎಂದು ಅವರಿಗೆ ಅನಿಸಿತು. ಒಂದು ದಿನ ಸಂಜೆ ಶಿವರಾಯರು ಹಿರೋಜಿಯನ್ನು ತಮ್ಮ ಸ್ಥಾನದಲ್ಲಿ ಮಲಗಿಸಿದರು. ಮದಾರಿಗೆ ಅವನ ಕಾಲುಗಳನ್ನು ಒತ್ತಲು ಕೂಡಿಸಿದರು. ಶಿವರಾಯರು ಮತ್ತು ಸಂಭಾಜಿರಾಜೇಯವರು ಒಂದೊಂದು ಪೆಟ್ಟಿಗೆಯಲ್ಲಿ ಕುಳಿತರು. ಪೆಟ್ಟಿಗೆಗಳು ಹೊರಟವು. ನಿಶ್ಚಯಿಸಿದ ಸ್ಥಳಕ್ಕೆ ಅವರು ಸುಖರೂಪವಾಗಿ ತಲುಪಿದರು. ಅಲ್ಲಿ ಶಿವರಾಯರ ಸ್ವಾಮಿಭಕ್ತ ಸೇವಕರು ಕುದುರೆಗಳೊಡನೆ ಸಿದ್ಧರಾಗಿದ್ದರು. ಇತ್ತ ಹಿರೋಜಿ ಮತ್ತು ಮದಾರಿ, ''ಮಹಾರಾಜರಿಗೆ ಔಷಧಿ ತರಲು ಹೋಗುತ್ತೇವೆ,'' ಎಂದು ಹೇಳಿ ಪಾರಾದರು.

ಮರುದಿನ ಈ ಸುದ್ದಿ ಬಾದಶಾಹನಿಗೆ ತಿಳಿಯಿತು. ತನ್ನ ಹಿಡಿತದಿಂದ ಶಿವಾಜಿ ಪಾರಾದನೆಂದು ಬಾದಶಾಹ ಸಿಟ್ಟಿಗೆದ್ದನು. ಅವನ ಎಲ್ಲ ಸರದಾರರು ಹೆದರಿದರು. ಶಿವಾಜಿಯ ಶೋಧಕ್ಕಾಗಿ ಎಲ್ಲಾ ಕಡೆ ಗುಪ್ತಚರರನ್ನು ಕಳುಹಿಸಲಾಯಿತು. ಆದರೆ ವ್ಯರ್ಥ! ಬಾದಶಾಹನ ಸೆರೆಯಿಂದ ಖಾಯಂ ಆಗಿ ಮರಾಠರ ಸಿಂಹ ಪಾರಾಯಿತು. ವೇಷಾಂತರ ಮಾಡಿ ಶತ್ರುಗಳ ಕಣ್ಣಿಗೆ ಮಣ್ಣೆರೆಚುತ್ತಾ ಶಿವರಾಯರು ತಮ್ಮ ರಾಜ್ಯದ ಕಡೆಗೆ ಹೊರಟರು. ಅವರು ಸಂಭಾಜಿಯವರನ್ನು ಮಥುರೆಯಲ್ಲಿ ಒಂದು ಸುರಕ್ಷಿತ ಸ್ಥಳದಲ್ಲಿ ಇಟ್ಟು ಮುಂದೆ ನಡೆದರು. ರಾಜಗಡಕ್ಕೆ ಶಿವರಾಯರು ಸುಖರೂಪವಾಗಿ ಬಂದುದನ್ನು



**ಆಗ್ರಾದಿಂದ ಶಿವಾಜಿ ಮಹಾರಾಜರ ಬಿಡುಗಡೆ**

ನೋಡಿ ಜಿಜಾಮಾತೆಯವರಿಗೆ ಧನ್ಯ ಎನಿಸಿತು. ಮುಂದೆ ಎರಡು ತಿಂಗಳ ನಂತರ ಸಂಭಾಜಿರಾಜೇಯವರು ಸುಖರೂಪವಾಗಿ ರಾಜಗಡಕ್ಕೆ ಬಂದು ತಲುಪಿದರು. ಈ ಪ್ರಕಾರ ಯುಕ್ತಿಯಿಂದ ಬಾದಶಾಹನ ಕಣ್ಣಿಗೆ ಮಣ್ಣು ಎರಚಿ, ಶಿವರಾಯರು ಬಿಡುಗಡೆ ಹೊಂದಿದರು. ಈ ಘಟನೆಯು ಕ್ರಿ.ಶ. ೧೬೬೬ ರಲ್ಲಿ ನಡೆಯಿತು.

## ಅಭ್ಯಾಸ

**೧. ಬಿಟ್ಟ ಸ್ಥಳಗಳಲ್ಲಿ ಕಂಸದಲ್ಲಿಯ ಯೋಗ್ಯ ಪರ್ಯಾಯವನ್ನು ಬರೆಯಿರಿ.**

(ಅ) ಶಿವರಾಯರು ಬಾದಶಾಹನ ದರಬಾರಕ್ಕೆ ಹೋದಾಗ, ಆ ದಿವಸ ಔರಂಗಜೇಬ ಬಾದಶಾಹನ ............ ಹುಟ್ಟುಹಬ್ಬವಿತ್ತು.

(ಐವತ್ತನೆಯ, ನಲವತ್ತನೆಯ, ಅರವತ್ತನೆಯ)

(ಆ) ಆಗ್ರಾದಿಂದ ಬರುವಾಗ ಸಂಭಾಜಿರಾಜರನ್ನು .......... ಒಂದು ಸುರಕ್ಷಿತ ಸ್ಥಳದಲ್ಲಿ ಇಟ್ಟರು.

(ಝಾಂಸಿಯಲ್ಲಿ, ಮಥುರೆಯಲ್ಲಿ, ದೆಹಲಿಯಲ್ಲಿ)

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಆಗ್ರಾಕ್ಕೆ ಹೋಗುವ ಪೂರ್ವದಲ್ಲಿ ಶಿವರಾಯರು ಸ್ವರಾಜ್ಯದ ಆಡಳಿತವನ್ನು ಯಾರ ಕೈಗೆ ಒಪ್ಪಿಸಿದರು ?

(ಆ) ಆಗ್ರಾದ ಸೆರೆಮನೆಯಲ್ಲಿ ಶಿವರಾಯರ ಜೊತೆಯಲ್ಲಿ ಯಾರು ಯಾರು ಇದ್ದರು ?

(ಇ) ರೋಗ ಗುಣವಾಗಲೆಂದು ಶಿವರಾಯರು ಏನು ಮಾಡಿದರು ?

**೩. ಎರಡು-ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಶಿವರಾಯರು ಔರಂಗಜೇಬನ ದರಬಾರದಿಂದ ಸಿಟ್ಟಿನಿಂದ ಏಕೆ ಹೊರಬಿದ್ದರು ?

(ಆ) ಶಿವರಾಯರು ಪಾರಾಗುವ ಸಲುವಾಗಿ ಯಾವ ಯುಕ್ತಿ ಮಾಡಿದರು ?

**ಉಪಕ್ರಮ**

ಶಿವರಾಯರು ಆಗ್ರಾದ ಸೆರೆಮನೆಯಿಂದ ಪಾರಾದ ಪ್ರಸಂಗ ಚಿತ್ರವನ್ನು ತಯಾರಿಸಿರಿ.

# ೧೪. ಕೋಟೆ ದೊರೆಯಿತು, ಆದರೆ ಸಿಂಹ ಹೋಯಿತು

**ಮಾಸಾಹೇಬರ ಇಚ್ಛೆ:** ಶಿವರಾಯರು ಜಯಸಿಂಗನಿಗೆ ಕೊಟ್ಟ ಇಪ್ಪತ್ತೂ್ರು ಕೋಟೆಗಳು ಇನ್ನೂ ಮುಘಲರ ಕಡೆಗೆ ಇದ್ದವು. 'ಕೊಂಢಾಣಾ' ಇದು ಅವುಗಳಲ್ಲಿಯ ಒಂದು ಕೋಟೆ. ಒಂದು ದಿನ ಜಿಜಾಮಾತೆಯವರು ಶಿವರಾಯರಿಗೆ ಹೇಳಿದರು, ''ಶಿವಬಾ, ಕೊಂಢಾಣಾದಂಥ ಭದ್ರವಾದ ಕೋಟೆ ಮುಘಲರ ಕೈಯಲ್ಲಿರುವುದು ಯೋಗ್ಯವಲ್ಲ. ಅದನ್ನು ಮರಳಿ ಪಡೆ.'' ಪುಣೆಯ ಹತ್ತಿರದ ಕೊಂಢಾಣಾ ಸ್ವರಾಜ್ಯದಲ್ಲಿ ಇರಬೇಕೆಂದು ಶಿವರಾಯರು ತಳಮಳಿಸುತ್ತಿದ್ದರು. ಕೊಂಢಾಣಾದ ಮೇಲೆ ಮುಘಲರ ನಿಯಂತ್ರಣ ಈ ಸಂಗತಿಯು ಜಿಜಾಮಾತೆ ಮತ್ತು ಶಿವರಾಯ ಇವರಿಬ್ಬರ ಮನಸ್ಸನ್ನು ಕೊರೆಯುತ್ತಿತ್ತು. ಶಿವರಾಯರು ಕೊಂಢಾಣಾ ವಶಪಡಿಸಿಕೊಳ್ಳುವ ಯೋಜನೆ ಮಾಡಿದರು. ಆದರೆ ಕೊಂಢಾಣಾ ಗೆಲ್ಲುವುದು ಅತಿಶಯ ಕಠಿಣವಿತ್ತು. ಈ ಕೆಲಸಕ್ಕೆ ಯಾರನ್ನು ಆರಿಸಬೇಕು ಎಂದು ಶಿವರಾಯರು ವಿಚಾರ ಮಾಡತೊಡಗಿದರು. ಕೊಂಢಾಣಾ ಗೆಲ್ಲುವುದು ಅಷ್ಟೊಂದು ಸುಲಭವಾಗಿರಲಿಲ್ಲ.

**ತಾನಾಜಿ ಮಾಲುಸರೆ :** ತಾನಾಜಿ ಮೊದಲಿನಿಂದ ಶಿವರಾಯರ ಜೊತೆಗಾರನಿದ್ದನು. ಕೊಂಕಣದಲ್ಲಿ ಮಹಾಡದ ಹತ್ತಿರ ಉಮರಠೆ ಎಂಬ ಊರು ಇದೆ. ಅಲ್ಲಿ ಅವನು ವಾಸಿಸುತ್ತಿದ್ದನು. ಶಿವರಾಯರ ಕೆಲಸದಲ್ಲಿ ತಾನಾಜಿಗೆ ಬೇಸರ ಇಲ್ಲವೆ ತಡ ಎಂಬುದು ಗೊತ್ತೇ ಇರಲಿಲ್ಲ. ಅದಲ್ಲದೆ, ಮಹಾರಾಜರು ಯಾವಾಗ ಏನು ಕೆಲಸ ಹೇಳಿದರೂ ಅದನ್ನು ಸ್ವೀಕರಿಸಲು ತಾನಾಜಿ ಯಾವಾಗಲೂ ಸಿದ್ಧ ! ಕೆಚ್ಚೆದೆಯ ಯುವಕ ಅವನು. ದಷ್ಟಪುಷ್ಟನು ಸದೃಢನೂ ಆಗಿದ್ದನು. ಶಕ್ತಿಯಲ್ಲಿ ಅವನಿಗೆ ಸರಿಸಮಾನರಿರಲಿಲ್ಲ. ಅವನ ಬುದ್ಧಿ ಬಲು ಚುರುಕು. ಶಿವರಾಯರ ಮೇಲೆ ಅವನಿಗೆ ಅಪಾರ ಭಕ್ತಿ ಇತ್ತು.



ತಾನಾಜಿಯ ಪ್ರತಿಜ್ಞೆ

**ಮೊದಲು ಕೊಂಢಾಣಾದ ಮದುವೆ :** ತಾನಾಜಿ ತನ್ನ ಮಗನ ಮದುವೆಯ ಗಡಿಬಿಡಿಯಲ್ಲಿದ್ದನು. ರಾಯಬಾ ಅವನ ಒಬ್ಬನೇ ಮಗ. ತಾನಾಜಿಯ ಮನೆಯಲ್ಲಿ ರಾಯಬಾನ ಮದುವೆಯ ತಯಾರಿ ಭರದಿಂದ ನಡೆದಿತ್ತು. ಮದುವೆಗೆ ನಾಲ್ಕೇ ದಿವಸಗಳು ಉಳಿದಿದ್ದವು. ''ಮಹಾರಾಜರನ್ನು ಮತ್ತು ಅವರ ತಾಯಿಯವರನ್ನು ಮದುವೆಗೆ ಕರೆಯಬೇಕು.'' ಎಂದು ತಾನಾಜಿಗೆ ಅನಿಸಿತು. ಅವನು ಶೇಲಾರಮಾಮಾನೊಡನೆ ರಾಯಬಾನ ಮದುವೆಯ ಆಮಂತ್ರಣ ಕೊಡಲು ಶಿವರಾಯರ ಬಳಿಗೆ ಬಂದನು. ಶೇಲಾರಮಾಮಾ ಶಿವರಾಯರಿಗೆ ಮದುವೆಯ ಆಮಂತ್ರಣ ಕೊಟ್ಟನು. ಆಗ ಶಿವರಾಯರು ಹೇಳಿದರು, ''ಶೇಲಾರಮಾಮಾ, ನೀವು ರಾಯಬಾನ ಮದುವೆ ಮುಗಿಸಿರಿ. ನಮಗೇನೂ ಈ ಮದುವೆಗೆ ಬರಲು ಆಗುವದಿಲ್ಲ, ಕಾರಣ ನಾವು ಸ್ವತಃ ಕೊಂಢಾಣಾ ತಿರುಗಿ ಪಡೆಯಲು ದಂಡೆತ್ತಿ ಹೋಗುವವರಿದ್ದೇವೆ.''

ಶಿವರಾಯರ ಈ ಶಬ್ದಗಳನ್ನು ಕೇಳುತ್ತಲೇ ತಾನಾಜಿ ಹೇಳಿದನು, ''ಮಹಾರಾಜರೇ, ತಾನಾಜಿ ಜೀವಂತ ಇದ್ದಾಗ ಇಂಥ ಅಪಾಯದ ಕೆಲಸವನ್ನು ನೀವೇಕೆ ಕೈಕೊಳ್ಳುವಿರಿ ? ನಾನಿದ್ದು ಉಪಯೋಗವೇನು? ಅದೆಂದೂ ಸಾಧ್ಯವಿಲ್ಲ, ಮೊದಲು ಕೊಂಢಾಣಾದ ಮದುವೆ. ಆಮೇಲೆ ರಾಯಬಾನ ಮದುವೆ. ಕೊಂಢಾಣಾದ ಕಾರ್ಯಕ್ಕೆ ನಾನೇ ಹೋಗುತ್ತೇನೆ. ನನಗೆ ಆಶೀರ್ವಾದ ಕೊಡಿರಿ.''

**ತಾನಾಜಿಯ ಯೋಜನೆ :** ತಾನಾಜಿ ಕೊಂಢಾಣಾದ ದಾಳಿಗೆ ಹೊರಟನು. ಕೊಂಢಾಣಾದ ಕೋಟೆಯಲ್ಲಿ ಜಯಸಿಂಗನು ನೇಮಿಸಿದ್ದ ಉದೇಭಾನ ಎಂಬ ರಜಪೂತ ಕಿಲ್ಲೇದಾರನಿದ್ದನು. ಅವನು ಬಹಳ ನಿಷ್ಠುರನಾಗಿದ್ದನು. ಕೋಟೆಗೆ ಎರಡು ದ್ವಾರಗಳು ಇದ್ದವು. ಎರಡೂ ಕಡೆ ಉದೇಭಾನನು ಭದ್ರವಾದ ಕಾವಲನ್ನು ಇಟ್ಟಿದ್ದನು ಅಂದಮೇಲೆ ಕೋಟೆಯನ್ನು ಏರುವುದು ಹೇಗೆ ? ತಾನಾಜಿ ಕೋಟೆಯ ಸುತ್ತಲೂ



ತಾನಾಜಿ ಕೊಂಢಾಣಾ ಏರುತ್ತಿರುವುದು

ನಿರೀಕ್ಷಿಸಿದನು. ಪಶ್ಚಿಮಕ್ಕೆ ಅತಿ ಎತ್ತರವಾದ ಹೆಬ್ಬಂಡೆ ಇತ್ತು. ಆ ಬದಿಯಲ್ಲಿ ಕಾವಲು ಇರಲಿಲ್ಲ. ತಾನಾಜಿ ಆ ಹೆಬ್ಬಂಡೆಯನ್ನು ಹತ್ತಿ ಹೋಗುವ ಯೋಜನೆ ಮಾಡಿದನು. ತಾನಾಜಿ ತನ್ನ ತಮ್ಮನಿಗೆ ಹೇಳಿದನು. ''ಸೂರ್ಯಾಜೀ, ನೀನು ಐನೂರು ಸೈನಿಕರೊಡನೆ ಕಲ್ಯಾಣ ಪ್ರವೇಶದ್ವಾರಕ್ಕೆ ಹೋಗು. ನಾನು ಮುನ್ನೂರು ಮಾವಳೆ ಜನರೊಡನೆ ಬಂಡೆಯನ್ನು ಹತ್ತಿ ಕೋಟೆ ಸೇರುತ್ತೇನೆ. ಕೋಟೆ ಸೇರಿದಾಕ್ಷಣ ನಾವು ಕಲ್ಯಾಣ ದ್ವಾರವನ್ನು ತೆರೆಯುತ್ತೇವೆ. ಆಗ ನೀವು ಒಮ್ಮೆಲೇ ಒಳಗೆ ನುಗ್ಗಿರಿ. ಶತ್ರುಗಳನ್ನು ಸಂಹರಿಸಿ ಬಿಡೋಣ, ನಡೆಯಿರಿ.'' ತಾನಾಜಿ ಮತ್ತು ಸೂರ್ಯಾಜೀ ಇಬ್ಬರೂ ಬೇರೆ ಬೇರೆ ಹಾದಿ ಹಿಡಿದು ಹೊರಟರು.

**ಬಂಡೆಯಿಂದ ಕೋಟೆಯ ಮೇಲೆ :** ರಾತ್ರಿಯ ಸಮಯ. ತಾನಾಜಿ ಮತ್ತು ಅವನ ಮಾವಳೆ ಜನರು ಬಂಡೆಯ ಬುಡದಲ್ಲಿ ಆ ಕಗ್ಗತ್ತಲೆಯಲ್ಲಿ ನಿಂತಿದ್ದರು. ರಾತ್ರಿಯ ಕೀಟಗಳು ಕಿರ್ರ ಎನ್ನುತ್ತಿದ್ದವು. ತಾನಾಜಿಯ ಐದಾರು ತರುಣ ಮಾವಳೆಯರು ಬಂಡೆ ಏರಲು ಮುಂದೆ ಬಂದರು. ಬಂಡೆ ತುಂಬಾ ಎತ್ತರವಾಗಿತ್ತು. ಅವರು ಕಲ್ಲುಗಳನ್ನು ಹಿಡಿದುಕೊಂಡು ಕೆಲವೊಮ್ಮೆ ಬಿರುಕಿನಲ್ಲಿ ಬೆರಳಿಡುತ್ತಾ ಬಹಳ ಧೈರ್ಯದಿಂದ ಬಂಡೆಗಳ ಬೆಟ್ಟ ಹತ್ತಿ ಮೇಲೆ ಹೋದರು. ಮೇಲೆ ಹೋದಕೂಡಲೇ ಅವರು ಹಗ್ಗದ ಒಂದು ತುದಿಯನ್ನು ಒಂದು ಮರಕ್ಕೆ ಗಟ್ಟಿಯಾಗಿ ಕಟ್ಟಿದರು. ಆಮೇಲೆ ಏನು? ತಾನಾಜಿ ಮತ್ತು ಅವನ ಮಾವಳೆ ಜನರು ಹಗ್ಗ ಹಿಡಿದು ಭರಭರನೆ ಮಂಗಗಳಂತೆ ಬಂಡೆ ಹತ್ತಿ ಕೋಟೆಯ ಮೇಲೆ ಏರಿದರು.

**ತಾನಾಜಿಯ ಪರಾಕ್ರಮ :** ಇತ್ತ ಸೂರ್ಯಾಜಿ ತನ್ನ ಮಾವಳೆಗಳೊಡನೆ ಕಲ್ಯಾಣ ದ್ವಾರವನ್ನು ತಲುಪಿದನು ಮತ್ತು ಅವರು ಬಾಗಿಲು ತೆರೆಯುವುದನ್ನೇ ಕಾಯುತ್ತಿದ್ದರು. ಕಾದಾಟ ಪ್ರಾರಂಭವಾಯಿತು. ಉದೇಭಾನನಿಗೆ ಈ ಸುದ್ದಿ ತಿಳಿಯತು. ನಗಾರಿಯನ್ನು ಬಾರಿಸಲಾಯಿತು. ಉದೇಬಾನನ ಸೈನ್ಯ ಮಾವಳಿಗಳ ಮೇಲೆ ಏರಿ ಬಂದಿತು. ಅವಸರದ ಯುದ್ಧ ಶುರುವಾಯಿತು. ಖಡ್ಗಗಳ ಹೊಡೆದಾಟ ಆರಂಭವಾಯಿತು. ಢಾಲಿನ ಖಣ್, ಖಣ್ ಶಬ್ಧ ಬರತೊಡಗಿತು. ದೀವಟಿಗೆಗಳ ಕುಣಿದಾಟ ಪ್ರಾರಂಭವಾಯಿತು. ಮಾವಳೆಗಳು ಕಲ್ಯಾಣದ್ವಾರವನ್ನು ತೆರೆದರು. ತಾನಾಜಿ ಸಿಂಹದಂತೆ ಕಾದಾಡುತ್ತಿದ್ದನು. ಉದೇಭಾನನು ಅವನ ಮೈಮೇಲೆ ಮುಗಿಬಿದ್ದನು. ಇಬ್ಬರ ಯುದ್ಧ ಪ್ರಾರಂಭವಾಯಿತು. ಇಬ್ಬರೂ ಶೂರರು ವೀರರು! ಯಾರೂ ಹಿಂದೆ ಸರಿಯಲಿಲ್ಲ. ಅಷ್ಟರಲ್ಲಿ ತಾನಾಜಿಯ ಢಾಲು ಮುರಿಯಿತು. ಅವನು ಕೈಗೆ ಶಲ್ಯೆ ಸುತ್ತಿಕೊಂಡನು. ಶಲ್ಯೆಯ ಮೇಲೆ ಹೊಡೆತಗಳನ್ನು ತಡೆಯುತ್ತಾ ಅವನು ಯುದ್ಧವನ್ನು ಮುಂದುವರಿಸಿದನು. ಕೊನೆಗೆ ಇಬ್ಬರೂ ಪರಸ್ಪರ ಹೊಡೆತದಿಂದ ಗಾಯಗೊಂಡರು ಮತ್ತು ವೀರಮರಣ ಹೊಂದಿದರು.

**ಕೋಟೆ ದೊರೆಯಿತು, ಆದರೆ ಸಿಂಹ ಹೋಯಿತು!:** ತಾನಾಜಿ ಬಿದ್ದುದನ್ನು ನೋಡಿ ಮಾವಳೆಗಳ ಧೈರ್ಯ ಕುಂದಿತು. ಅವರು ಓಡತೊಡಗಿದರು. ಅಷ್ಟರಲ್ಲಿ ಸೂರ್ಯಾಜೀ ಮತ್ತು ಅವನ ಜೊತೆಯಲ್ಲಿದ್ದ ಮಾವಳೆಗಳು ಕಲ್ಯಾಣ ಬಾಗಿಲಿನಿಂದ ಒಳಗೆ ಬಂದು ತಲುಪಿದರು. ಭೂಮಿಯ ಮೇಲೆ ಬಿದ್ದಿದ್ದ ತನ್ನ ಅಣ್ಣನನ್ನು ನೋಡಿ ಅವನಿಗೆ ದುಃಖವಾಯಿತು. ಆದರೆ ಅದು ದುಃಖ ಮಾಡುವ ಸಮಯವಾಗಿರಲಿಲ್ಲ. ಯುದ್ಧ ಮಾಡಬೇಕಾದ ಸಮಯವಾಗಿತ್ತು. ಸೂರ್ಯಾಜೀ ಬಂಡೆ ಮೇಲಿನ ಹಗ್ಗವನ್ನು ಕತ್ತರಿಸಿ ಹಾಕಿದನು. ಓಡುವ ಮಾವಳಿಗಳಿಗೆ ಅಡ್ಡ ನಿಂತು ಅವನು ಹೇಳಿದನು, ''ಎಲ್ಲಾ, ನಿಮ್ಮ ಅಪ್ಪ ಇಲ್ಲಿ ಮಡಿದು ಬಿದ್ದಿದ್ದಾನೆ. ನೀವು ಹೀಗೆ ಹೇಡಿಗಳಂತೆ ಓಡುತ್ತೀರೇನು ? ಹಿಂದೆ ತಿರುಗಿರಿ. ನಾನು ಬಂಡೆ ಮೇಲಿನ ಹಗ್ಗವನ್ನು ಕತ್ತರಿಸಿ ಹಾಕಿದ್ದೇನೆ. ಬಂಡೆ ಮೇಲಿಂದ ಹಾರಿ ಸಾಯಿರಿ, ಇಲ್ಲವೆ ಶತ್ರುಗಳ ಮೇಲೆ ಏರಿ ಹೋಗಿರಿ.''

ಮಾವಳರು ಹಿಂತಿರುಗಿದರು. ಘನಘೋರ ಯುದ್ಧವಾಯಿತು. ಮಾವಳೆಗಳು ಕೋಟೆಯನ್ನು ವಶಪಡಿಸಿಕೊಂಡರು. ಆದರೆ ಕೋಟೆ ವಶಪಡಿಸಿಕೊಳ್ಳುವಾಗ ತಾನಾಜಿಯಂಥ ಶೂರರತ್ನ ವೀರಮರಣ ಹೊಂದಿತು. ಜಿಜಾಮಾತೆಯವರು ಮತ್ತು ಶಿವರಾಯರಿಗೆ ಈ ಸುದ್ದಿ ತಿಳಿಯಿತು. ಅವರಿಗೆ ತುಂಬಾ ದುಃಖವಾಯಿತು. ಕೋಟೆ ಅವರ ಅಧೀನವಾಯಿತು. ಆದರೆ ಸಿಂಹದಂಥ ಶೂರ ತಾನಾಜಿ ಹೋದನು. ಶಿವರಾಯರು ತುಂಬಾ ಹಳಹಳಿಸಿದರು. ''ಕೋಟೆ ದೊರೆಯಿತು, ಆದರೆ ಸಿಂಹ ಹೋಯಿತು'' ಎಂದು ಹೇಳಿದರು.

ಕೊಂಢಾಣಾ ಕಿಲ್ಲೆಗೆ 'ಸಿಂಹಗಡ' ಎಂಬ ಹೆಸರು ಸಾರ್ಥಕವಾಯಿತು. ಈ ಘಟನೆಯು ಕ್ರಿ.ಶ. ೧೬೭೦ ರಲ್ಲಿ ಸಂಭವಿಸಿತು. ಮುಂದೆ ಉಮರಠೆ ಊರಿಗೆ ಹೋಗಿ ಶಿವರಾಯರು ರಾಯಬಾನ ಮದುವೆ ನೆರವೇರಿಸಿದರು.

## ಅಭ್ಯಾಸ

**೧. ಸರಿಯಾದ ಪರ್ಯಾಯದ ವರ್ತುಳಕ್ಕೆ ಬಣ್ಣ ಕೊಡಿರಿ**

(ಅ) ತಾನಾಜಿಯು ಕೊಂಕಣದಲ್ಲಿಯ ಈ ಊರಿನ ರಹವಾಸಿಯಾಗಿದ್ದನು.

(೧) ಮಹಾಡ ○ (೨) ಚಿಪಳೂಣ ○
(೩) ಉಮರಠೆ ○ (೪) ರತ್ನಾಗಿರಿ ○

(ಆ) ಜಯಸಿಂಗನು ನೇಮಿಸಿದ ಉದೇಭಾನನು ಈ ಕೋಟೆಯ ಕಿಲ್ಲೇದಾರನಾಗಿದ್ದನು.

(೧) ಪುರಂದರ ○ (೨) ಕೊಂಢಾಣಾ ○
(೩) ರಾಯಗಡ ○ (೪) ಪ್ರತಾಪಗಡ ○

(ಇ) ತಾನಾಜಿಯ ತಮ್ಮನ ಹೆಸರು

(೧) ರಾಯಬಾ ○ (೨) ಸೂರ್ಯಾಜೀ ○
(೩) ಮುರಾರಬಾಜೀ ○ (೪) ಫಿರಂಗೋಜೀ ○

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಕೊಂಢಾಣಾ ಕೋಟೆಯು ಯಾರ ವಶದಲ್ಲಿತ್ತು ?

(ಆ) ಕೊಂಢಾಣಾ ಕೋಟೆಯ ಸಂಬಂಧದಲ್ಲಿ ಜಿಜಾಮಾತೆಯವರು ಶಿವರಾಯರಿಗೆ ಏನು ಹೇಳಿದರು ?

(ಇ) 'ಕೊಂಢಾಣಾ'ದ ಮದುವೆ ಮೊದಲು, ಆಮೇಲೆ 'ರಾಯಬಾನ ಮದುವೆ' ಹೀಗೆ ಯಾರು ಅಂದರು ?

**೩. ಎರಡು-ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಶೇಲಾರಮಾಮಾ ಶಿವರಾಯರಿಗೆ ರಾಯಬಾನ ಮದುವೆಯ ಆಮಂತ್ರಣ ಕೊಟ್ಟಾಗ ಶಿವರಾಯರು ಏನು ಅಂದರು ?

(ಆ) ಸಿಂಹಗಡದಲ್ಲಿ ಸೂರ್ಯಾಜೀಯು ಮಾವಳರಿಗೆ ಏನು ಅಂದನು ?

**ಉಪಕ್ರಮ**

ನಿಮ್ಮ ಪರಿಸರದಲ್ಲಿಯ ಐತಿಹಾಸಿಕ ಕಟ್ಟಡಗಳ ಯಾದಿಯನ್ನು ತಯಾರಿಸಿರಿ.

# ೧೫. ಒಂದು ಅಪೂರ್ವ ಸಮಾರಂಭ

**ರಾಜ್ಯಾಭಿಷೇಕ ಏಕೆ ಮಾಡಿದರು ? :** ರಾಯರೇಶ್ವರನ ಮಂದಿರದಲ್ಲಿ ಶಿವರಾಯರು ಸ್ವರಾಜ್ಯದ ಪ್ರತಿಜ್ಞೆ ಮಾಡಿದರು. ಸ್ವರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಅವರ ಮೇಲೆ ಅನೇಕ ಸಂಕಟಗಳು ಬಂದೊದಗಿದವು. ಆದರೂ ಅವುಗಳಿಂದ ಶಿವರಾಯರು ದೊಡ್ಡ ಶೌರ್ಯದಿಂದಲೂ, ಚಾತುರ್ಯದಿಂದಲೂ ಪಾರಾದರು. ಬಾಜೀಪ್ರಭು, ಮುರಾರಬಾಜೀ, ತಾನಾಜಿ ಇತ್ಯಾದಿ ವೀರರು ಸ್ವರಾಜ್ಯ ಸಲುವಾಗಿ ಯುದ್ಧದಲ್ಲಿ ಕಾದಾಡುತ್ತಾ ತಮ್ಮ ಪ್ರಾಣವನ್ನು ಅರ್ಪಿಸಿದರು. ಕೊನೆಗೆ ಸ್ವರಾಜ್ಯ ಸ್ಥಾಪನೆಯೂ ಆಯಿತು. ಶತ್ರುಗಳ ಮೇಲೆ ಹಿಡಿತ ಸಾಧಿಸಲಾಯಿತು.

ಈ ಸ್ವರಾಜ್ಯಕ್ಕೆ ಅರಸರೂ, ಅರಸು ಮನೆತನದವರೂ ಮನ್ನಣೆ ಕೊಡಬೇಕೆಂದು ಶಿವರಾಯರು ರಾಜ್ಯಾಭಿಷೇಕದ ಯೋಜನೆ ರೂಪಿಸಿದರು. ನೂರಾರು ವರ್ಷಗಳ ನಂತರ, ಎಲ್ಲಾ ಧರ್ಮದವರನ್ನೂ ಸಮಾನ ದೃಷ್ಟಿಯಿಂದ ಕಾಣುವಂಥ, ಪ್ರಜೆಗಳಿಗೆ ನ್ಯಾಯ ಮತ್ತು ಸುಖವನ್ನು ಕೊಡುವಂಥ ರಾಜನು ಮಹಾರಾಷ್ಟ್ರದಲ್ಲಿ ಉದಯಿಸಿದನು. ಸ್ವರಾಜ್ಯ ಸ್ಥಾಪನೆಯಾದುದು ಜಗತ್ತಿಗೆ ತಿಳಿಯಬೇಕೆಂದು ಶಿವರಾಯರು ರಾಜ್ಯಾಭಿಷೇಕ ಮಾಡಿಕೊಳ್ಳುವ ಯೋಚನೆ ಮಾಡಿದರು. ಅವರು ಸ್ವಂತ ಸುಖಕ್ಕಾಗಿ ಅಥವಾ ವೈಭವಕ್ಕಾಗಿ ಮಾಡಿಕೊಳ್ಳಲಿಲ್ಲ. ಆದರೆ ಸ್ವರಾಜ್ಯದ ತಳಹದಿಯು ಭದ್ರವಾಗಬೇಕೆಂದು ಹಾಗೆ ಮಾಡಿದರು.


**ಸ್ವರಾಜ್ಯದ ರಾಜಧಾನಿ :** ಶಿವರಾಯರು ರಾಜಧಾನಿಗಾಗಿ ರಾಯಗಡವನ್ನು ಆರಿಸಿಕೊಂಡರು. ರಾಯಗಡವು ಭದ್ರವಾದ ಕೋಟೆಯಾಗಿತ್ತು. ರಾಯಗಡದಿಂದ ಸ್ವರಾಜ್ಯದ ಮೇಲೆ ಮೇಲ್ವಿಚಾರಣೆ ಮಾಡುವುದು ಸುಲಭವಾಗಿತ್ತು. ಶತ್ರುಗಳ ಮೇಲೆ ಕಣ್ಣು ಇಡುವುದಕ್ಕೂ ಅನುಕೂಲವಾಗಿತ್ತು.

ಚಿಪಳೂಣಕ್ಕೆ ಹೋಗಿ ಶಿವರಾಯರು ತಮ್ಮ ಸೈನ್ಯದ ನಿರೀಕ್ಷಣೆ ಮಾಡಿದರು. ಪ್ರತಾಪಗಡದ ಭವಾನಿ ದೇವಿಯ ದರ್ಶನ ಪಡೆದರು. ದೇವಿಗೆ ಭಕ್ತಿಭಾವದಿಂದ ಚಿನ್ನದ ಛತ್ರವನ್ನು ಅರ್ಪಿಸಿದರು.

**ಸಮಾರಂಭದ ತಯಾರಿ :** ಆ ನಂತರ ಶಿವರಾಯರು ರತ್ನಗಳಿಂದ ಕೂಡಿದ ಚಿನ್ನದ ಸಿಂಹಾಸನವನ್ನು ಸಿದ್ಧಪಡಿಸಿಕೊಂಡರು. ಅದರ ಮೇಲೆ ಶುಭ್ರ ಛತ್ರವನ್ನು ಇರಿಸಿದರು. ರಾಜಮಹಾರಾಜರಿಗೆ, ವಿದ್ವಾಂಸರಿಗೆ, ಬ್ರಾಹ್ಮಣರಿಗೆ, ಕೈಕೆಳಗಿನ ಸರದಾರರಿಗೆ, ಕೆಲಸಗಾರರಿಗೆ ಇವರೆಲ್ಲರಿಗೆ ಆಮಂತ್ರಣ ಕಳಿಸಿದರು. ರಾಜ್ಯಾಭಿಷೇಕದ ಪುರೋಹಿತರೆಂದು ಕಾಶಿಯಿಂದ ಗಾಗಾಭಟ್ಟರು ಬಂದರು. ಮೂಲತಃ ಗಾಗಾಭಟ್ಟರು ಪೈಠಣದ ಮನೆತನದವರು. ಆದರೆ ಅವರು ಕಾಶಿಯಲ್ಲಿ ನೆಲೆಸಿದ್ದರು. ಅವರು ಅಗಾಧ ಪಂಡಿತರಾಗಿದ್ದರು. ಕಾಶೀ ಕ್ಷೇತ್ರದಲ್ಲಿ ಅವರಿಗೆ ಬಹಳ ಮರ್ಯಾದೆ ಇತ್ತು. ಎಲ್ಲೆಡೆಯಲ್ಲೂ ಅವರ ಕೀರ್ತಿ ಪಸರಿಸಿತ್ತು.

ರಾಜ್ಯಾಭಿಷೇಕದ ತಯಾರಿ ಈ ಪ್ರಕಾರ ಶಿವರಾಯರು ಮಾಡಿದರು. ಸಪ್ತಗಂಗಾ ಮತ್ತು ಸಮುದ್ರದಿಂದ ಪವಿತ್ರಜಲ ತರಲು ಜನರು ಹೋದರು. ರಾಯಗಡದ ಮೇಲೆ ಸುಮಾರು ಐವತ್ತು ಸಾವಿರ ಜನರು ಸೇರಿದರು. ಅವರ ಸಲುವಾಗಿ ಅತ್ತ-ಇತ್ತ ತಂಬೂ, ಡೇರೆ, ಬಿಡಾರ ಇವುಗಳ ದಟ್ಟನೆಯಾಯಿತು.

**ರಾಜ್ಯಾಭಿಷೇಕದ ಸಮಾರಂಭ :** ರಾಜ್ಯಾಭಿಷೇಕದ ಶುಭದಿನ ಉದಯಿಸಿತು. ಅದು ಮಹಾಮಂಗಲದ ದಿನವಾಗಿತ್ತು. ವಾದ್ಯಗಳು ಬಾರಿಸತೊಡಗಿದವು. ಗಾಯಕರು ಹಾಡತೊಡಗಿದರು. ಎಲ್ಲಾ ಕಡೆ ಆನಂದವೇ ಆನಂದ. ಶಿವರಾಯರು ಚಿನ್ನದ ಪೀಠದ ಮೇಲೆ ಕುಳಿತುಕೊಂಡರು. ಅವರ ಮೇಲೆ ಛತ್ರಚಾಮರಗಳನ್ನು ಹಿಡಿಯಲಾಯಿತು. ತುಪ್ಪ, ಮೊಸರು, ಜೇನುತುಪ್ಪಗಳ ಕಲಶಗಳು ಪುರೋಹಿತರ ಕೈಯಲ್ಲಿ ಇದ್ದವು. ಗಾಗಾಭಟ್ಟರ ಕೈಗಳಲ್ಲಿ ಚಿನ್ನದ ಕೊಡ ಇತ್ತು. ಅದರಲ್ಲಿ ಗಂಗಾ, ಸಿಂಧು, ಯಮುನಾ, ಗೋದಾವರಿ, ಕೃಷ್ಣಾ, ನರ್ಮದಾ ಮತ್ತು ಕಾವೇರಿ ಈ ಏಳು ನದಿಗಳ ಮತ್ತು ಸಮುದ್ರದ ಪವಿತ್ರ ಜಲ ತುಂಬಿತ್ತು. ಗಾಗಾಭಟ್ಟರು ಆ ಚಿನ್ನದ ಕೊಡವನ್ನು ಶಿವರಾಯರ ತಲೆಯ ಮೇಲೆ ಹಿಡಿದು ಮಂತ್ರ ಹೇಳತೊಡಗಿದರು. ಕೊಡದ ನೂರು ಛಿದ್ರಗಳಿಂದ ಶಿವರಾಯರ ಮೇಲೆ ಜಲಾಭಿಷೇಕವಾಯಿತು. ಅದಾದ ಮೇಲೆ ಶಿವರಾಯರು ಎದ್ದು ಜಿಜಾಮಾತೆಗೆ ವಂದಿಸಿದರು. ಮಾಸಾಹೇಬ ಜಿಜಾಮಾತೆಯು ಎದ್ದು ಅವರನ್ನು



ಶಿವರಾಜ್ಯಾಭಿಷೇಕದ ಸಮಾರಂಭ

ಅಪ್ಪಿಕೊಂಡರು. ಅವರ ಕಣ್ಣುಗಳಿಂದ ಆನಂದಾಶ್ರುಗಳು ಹರಿದವು. ಅವರು ಮಾಡಿದ ಮೂವತ್ತು ವರ್ಷಗಳ ಕಷ್ಟದ ಫಲ ದೊರೆಯಿತು. ಶಿವಬಾರ ಜನ್ಮ ಪೂರ್ವದಿಂದ ಹಿಡಿದು ಆ ತಾಯಿಯವರು ಮನಸ್ಸಿನಲ್ಲಿ ಕಟ್ಟಿದ ಸ್ವಪ್ನ ಇಂದು ಸಾಕಾರಗೊಂಡಿತ್ತು. ತಾಯಿಯ ಆನಂದ ಬಾಷ್ಪಗಳು ಹೊರಬಿದ್ದವು. ಶಿವರಾಯರೂ ಗದ್ಗದಿತರಾದರು. ಧನ್ಯ ಮಾಸಾಹೇಬ ! ಧನ್ಯ ಶಿವರಾಯ !

ಮಾಸಾಹೇಬರ ಭೇಟಿಯ ನಂತರ ಮಹಾರಾಜರು ಸಿಂಹಾಸನದ ಮೇಲೆ ಕುಳಿತರು. ಅವರ ಹತ್ತಿರ ಮಹಾರಾಣಿ ಸೋಯರಾಬಾಯಿ ಮತ್ತು ಯುವರಾಜ ಸಂಭಾಜಿ ರಾಜೇಯವರು ಕುಳಿತರು. ಹಾಗೆಯೇ ಅಷ್ಟ ಪ್ರಧಾನರು ಅವರ ಎರಡೂ ಬದಿಯಲ್ಲಿ ಬಂದು ನಿಂತರು. ಗಾಗಾಭಟ್ಟರು ಚಿನ್ನ ಮುತ್ತುಗಳ ಜಲ್ಲರಿಯಿಂದ ಕೂಡಿದ ಛತ್ರವನ್ನು ಮಹಾರಾಜರ ತಲೆಯ ಮೇಲೆ ಹಿಡಿದರು ಮತ್ತು ಅವರು ಎಲ್ಲರಿಗೂ ಕೇಳುವಂತೆ ಉಚ್ಚರಿಸಿದರು. ''ಕ್ಷತ್ರಿಯ ಕುಲರಕ್ಷಕ ಸಿಂಹಾಸನಾಧೀಶ್ವರ ಶ್ರೀ ಶಿವಛತ್ರಪತಿ ಅವರಿಗೆ ಜಯವಾಗಲಿ.'' ಎಲ್ಲರೂ ಜಯಜಯಕಾರ ಮಾಡಿದರು. ಎಲ್ಲ ಕೋಟೆಗಳಿಂದ ತೋಪುಗಳು ಹಾರಿದವು. ಇಡೀ ಮಹಾರಾಷ್ಟ್ರದಲ್ಲಿ ಶಿವರಾಯರ ಜಯಜಯಕಾರವಾಯಿತು. ಈ ರೀತಿಯಲ್ಲಿ ಕ್ರಿ.ಶ. ೧೬೭೪ ರಲ್ಲಿ ಶಿವರಾಯರ ರಾಜ್ಯಾಭಿಷೇಕವಾಯಿತು. ಆ ವರ್ಷದಿಂದ ಮಹಾರಾಜರು 'ರಾಜ್ಯಾಭಿಷೇಕ' ಎಂಬ ಹೊಸ ಶಕೆಯನ್ನು ಪ್ರಾರಂಭಿಸಿದರು. ಶಿವಾಜಿ ಮಹಾರಾಜರು 'ಶಕಕರ್ತ ರಾಜ'ರಾದರು. ತಮ್ಮದೇ ಆದ ನಾಣ್ಯಗಳನ್ನು ತಯಾರಿಸಿಕೊಂಡರು. ಬೇರೆ ಬೇರೆ ದೇಶಗಳ ರಾಯಭಾರಿಗಳು ಈ ಸಮಾರಂಭಕ್ಕೆ ಬಂದಿದ್ದರು. ಇಂಗ್ಲಿಷರು ಆಕ್ಸಿಂಡೇನ ಎಂಬ ಹೆಸರಿನ ತಮ್ಮ ರಾಯಭಾರಿಯನ್ನು ಕಾಣಿಕೆಗಳನ್ನು ಕೊಟ್ಟು ಕಳುಹಿಸಿದ್ದರು. ಈ ಸಮಾರಂಭವನ್ನು ನೋಡುವ ಸಲುವಾಗಿ ದೂರದೂರದ ಪ್ರಜೆಗಳೂ ನೆರೆದಿದ್ದರು. ಶಿವರಾಯರ ಪಟ್ಟಾಭಿಷೇಕದ ಸುದ್ದಿ ಇಡೀ ಜಗತ್ತಿಗೆ ತಿಳಿಯಿತು. ಶಿವರಾಯರ ಕೀರ್ತಿ ಎಲ್ಲೆಡೆಯಲ್ಲೂ ಪಸರಿಸಿತು.

## ಅಭ್ಯಾಸ

**೧. ಬಿಟ್ಟ ಸ್ಥಳಗಳಲ್ಲಿ ಕಂಸದಲ್ಲಿಯ ಯೋಗ್ಯ ಪರ್ಯಾಯವನ್ನು ಬರೆಯಿರಿ.**

(ಅ) ಶಿವರಾಯರು ರಾಜಧಾನಿಯ ಸಲುವಾಗಿ .......... ವನ್ನು ಆರಿಸಿದರು.

(ಸಿಂಹಗಡ, ರಾಯಗಡ, ಪನ್ಹಾಳಗಡ)

(ಆ) ಶಿವರಾಯರ ರಾಜ್ಯಾಭಿಷೇಕ ಕ್ರಿ.ಶ. .......... ರಲ್ಲಿ ಆಯಿತು.

(೧೬೭೪, ೧೬೭೫, ೧೬೪೭)

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಬಂಗಾರದ ಕೊಡದಲ್ಲಿ ಯಾವ ಯಾವ ನದಿಗಳ ನೀರು ತುಂಬಲಾಗಿತ್ತು ?

(ಆ) ಶಿವರಾಯರು ರಾಜ್ಯಾಭಿಷೇಕದಿಂದ ಯಾವ 'ಶಕೆ'ವನ್ನು ಪ್ರಾರಂಭಿಸಿದರು ?

**೩. ಎರಡು-ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ಶಿವರಾಯರು ರಾಜ್ಯಾಭಿಷೇಕ ಮಾಡಿಕೊಳ್ಳುವದನ್ನು ಏಕೆ ನಿಶ್ಚಯಿಸಿದರು ?

(ಆ) ಶಿವರಾಯರು ರಾಜಧಾನಿಯ ಸಲುವಾಗಿ ರಾಯಗಡವನ್ನೇ ಏಕೆ ಆರಿಸಿದರು ?

(ಇ) ಮಾಸಾಹೇಬರ ಕಣ್ಣುಗಳಿಂದ ಆನಂದಬಾಷ್ಪ ಏಕೆ ಹರಿಯತೊಡಗಿತು ?

**ಉಪಕ್ರಮ**

(ಅ) ರಾಜ್ಯಾಭಿಷೇಕ ಸಮಯದಲ್ಲಿ ಶಿವರಾಯರು ಮುದ್ರಿಸಿದ ನಾಣ್ಯಗಳ ಬಗ್ಗೆ ಶಿಕ್ಷಕರ ಕಡೆಯಿಂದ ಹೆಚ್ಚಿನ ಮಾಹಿತಿ ಪಡೆಯಿರಿ.

(ಆ) ವಿವಿಧ ಪ್ರಕಾರದ ಅಂಚೆ ತಿಕೀಟುಗಳನ್ನು ಸಂಗ್ರಹಿಸಿರಿ. ಗೆಳೆಯರ ಸಹಾಯದಿಂದ ವರ್ಗದಲ್ಲಿ ಪ್ರದರ್ಶನವನ್ನು ಏರ್ಪಡಿಸಿರಿ.

BHIFZE

# ೧೬. ದಕ್ಷಿಣದ ದಂಡಯಾತ್ರೆ


**ದಾಳಿಯ ಯೋಜನೆ :** ರಾಜ್ಯಾಭಿಷೇಕದ ಸಂಭ್ರಮ ಮುಗಿಯಿತು. ಆದರೆ ಈ ಆನಂದ ಬಹುಕಾಲ ಉಳಿಯಲಿಲ್ಲ. ರಾಜ್ಯಾಭಿಷೇಕವಾದ ನಂತರ ಅಲ್ಪಾವಧಿಯಲ್ಲಿ ೧೭ ಜೂನ್ ೧೬೭೪ ರಂದು ಮಾಸಾಹೇಬ ಜಿಜಾಬಾಯಿಯವರು ಮರಣ ಹೊಂದಿದರು. ಶಿವರಾಯರ ದೊಡ್ಡ ಆಧಾರ ಇಲ್ಲದಂತಾಯಿತು. ಸ್ವರಾಜ್ಯದಲ್ಲಿಯ ಎಲ್ಲಾ ಪ್ರಜೆಗಳ ಆಧಾರ ಶಿವರಾಯರಾಗಿದ್ದರು. ಆದರೆ ಶಿವರಾಯರ ಆಧಾರ ಮಾತ್ರ ಮಾತೋಶ್ರೀಯವರಾಗಿದ್ದರು. ಅವರು ಅವರ ಜೀವನದಲ್ಲಿಯ ನಿಜವಾದ ಮಾರ್ಗದರ್ಶಕರು ಮತ್ತು ಗುರುಗಳಾಗಿದ್ದರು. ತಾಯಿಯ ಮೃತ್ಯುವಿನಿಂದ ಅವರಿಗೆ ತುಂಬಾ ದುಃಖವಾಯಿತು. ಆದರೆ ದುಃಖ ಮಾಡುತ್ತ ಕುಳಿತುಕೊಳ್ಳುವುದು ಅವರಿಗೆ ಸಾಧ್ಯವಿರಲಿಲ್ಲ. ಸ್ವರಾಜ್ಯದ ಗಾಡಿಯನ್ನು ಅವರಿಗೆ ನಡೆಯಿಸಿಕೊಂಡು ಹೋಗುವುದಿತ್ತು.

ಕರ್ನಾಟಕ ಪ್ರಾಂತದ ಮೇಲೆ ದಾಳಿ ಮಾಡುವ ನಿಶ್ಚಯವನ್ನು ಶಿವರಾಯರು ಮಾಡಿದರು. ಅವರಿಗೆ ಈಗ ಆದಿಲಶಾಹಿಯ ಭೀತಿ ಎಳ್ಳಷ್ಟೂ ಇರಲಿಲ್ಲ. ಏಕೆಂದರೆ ಆದಿಲಶಾಹಿ ರಾಜ್ಯವು ಬಲಹೀನವಾಗತೊಡಗಿತ್ತು. ಆದರೆ ಉತ್ತರದಲ್ಲಿಯ ಮುಘಲ ಬಾದಶಾಹ ಔರಂಗಜೇಬನು ಮಾತ್ರ ಮರಾಠರ ರಾಜ್ಯವನ್ನು ನಾಶಮಾಡಲು ಕಾದು ಕುಳಿತಿದ್ದನು. ಅವನು 'ಸ್ವರಾಜ್ಯ'ದ ತುತ್ತನು ಯಾವಾಗ ನುಂಗುವನು ಎಂಬುದರ ಭರವಸೆ ಇರಲಿಲ್ಲ. ಮುಘಲರಿಂದ ಸ್ವರಾಜ್ಯದ ಮೇಲೆ ಸಂಕಟವು ಬಂದರೆ ದಕ್ಷಿಣದಲ್ಲೂ ಒಂದು ಭದ್ರವಾದ ಸ್ಥಾನವಿರಬೇಕು ಎಂಬ ವಿಚಾರ ಶಿವರಾಯರ ಮನಸ್ಸಿನಲ್ಲಿ ಬಂದಿತು. ಅದಕ್ಕಾಗಿ ಅವರು ದಕ್ಷಿಣ ಪ್ರಾಂತವನ್ನು ವಶಪಡಿಸಿಕೊಳ್ಳಬೇಕೆಂದು ನಿರ್ಧರಿಸಿದರು. ಈ ಆಕ್ರಮಣದ ಸಲುವಾಗಿ ಶಿವರಾಯರು ಗೋವಳಕೊಂಡದ ಕುತುಬಶಾಹಿಯ ನೆರವನ್ನು ಕೇಳಿದರು. ಅವನು ಬಹು ಸಂತೋಷದಿಂದ ಶಿವರಾಯರಿಗೆ ಸಹಾಯ ಮಾಡಲು ಒಪ್ಪಿಕೊಂಡನು.

ಈ ಆಕ್ರಮಣದ ಹಿಂದೆ ಶಿವರಾಯರ ಇನ್ನೊಂದು ಉದ್ದೇಶವಿತ್ತು. ಅವರ ಮಲತಮ್ಮನಾದ ವ್ಯಂಕೋಜಿ ರಾಜೇಯವರು ದಕ್ಷಿಣದಲ್ಲಿಯ ತಂಜಾವೂರಿನ ಜಹಗೀರನ್ನು ನೋಡಿಕೊಳ್ಳುತ್ತಿದ್ದರು. ತಂದೆಯವರ ಕರ್ನಾಟಕದಲ್ಲಿಯ ಜಹಗೀರು ಕೂಡ ಅವರ ಕಡೆಗೆ ಇತ್ತು. ವ್ಯಂಕೋಜಿರಾಜೇಯವರು ಅದರಲ್ಲಿ ಯಾವುದೇ ಪಾಲನ್ನು ಶಿವರಾಯರಿಗೆ ಕೊಟ್ಟಿರಲಿಲ್ಲ. ಅಷ್ಟೇ ಅಲ್ಲದೆ ಸ್ವರಾಜ್ಯದ ಬಗ್ಗೆ ಅವರಿಗೆ ಬಹಳಷ್ಟು ಆದರವಿರಲಿಲ್ಲ. ಅವರು ಶಿವರಾಯರೊಡನೆ ಕಠೋರತೆಯಿಂದ ವರ್ತಿಸುತ್ತಿದ್ದರು. ಅವರನ್ನು ಭೇಟಿಯಾಗಿ ಸ್ವರಾಜ್ಯದ ಕಾರ್ಯದಲ್ಲಿ ಅವರ ಸಹಾಯ ದೊರೆಯುವುದೋ ಎಂದು ನೋಡಬೇಕು ಎಂಬ ಉದ್ದೇಶವು ಶಿವರಾಯರ ಮನಸ್ಸಿನಲ್ಲಿ ಇತ್ತು.

**ಗೋವಳಕೊಂಡಕ್ಕೆ ಭೇಟಿ :** ಶಿವರಾಯರು ಕರ್ನಾಟಕಕ್ಕೆ ಹೊರಟರು. ಗೋವಳಕೊಂಡದ ಅಬುಲಹಸನ ಕುತುಬಶಾಹನು ಅವರಿಗೆ ಭೇಟಿಯ ಆಮಂತ್ರಣ ಕೊಟ್ಟಿದ್ದನು. ಆದ್ದರಿಂದ ಮೊದಲು ಕುತುಬಶಾಹನ ರಾಜಧಾನಿಗೆ ಭೇಟಿಕೊಟ್ಟು ಆಮೇಲೆ ದಕ್ಷಿಣದ ದಿಗ್ವಿಜಯಕ್ಕಾಗಿ ಮುಂದೆ ಹೋಗುವುದು ಎಂದು ಅವರು ಯೋಚಿಸಿದ್ದರು.

ಗೋವಳಕೊಂಡವೇ ಕುತುಬಶಾಹನ ರಾಜಧಾನಿಯಾಗಿತ್ತು. ಕುತುಬಶಾಹನು ಮಹಾರಾಜರ ಸ್ವಾಗತಕ್ಕಾಗಿ ಭಾರೀ ಸಿದ್ಧತೆ ಮಾಡಿದನು. ಭೇಟಿಗಾಗಿ ವಿಶೇಷ ಮಂಟಪವನ್ನು ನಿರ್ಮಿಸಿದನು. ಶಿವರಾಯರು ರಾಜಧಾನಿಗೆ ಬಂದು ತಲುಪಿದರು. ಅವರ ದರ್ಶನ ಪಡೆಯಲು ರಸ್ತೆಯ ಎರಡೂ ಪಕ್ಕಗಳಲ್ಲಿ ಜನರು ನೆರೆದಿದ್ದರು. ಅವರ ಪರಾಕ್ರಮದ ವಾರ್ತೆ ದೇಶದ ನಾಲ್ಕೂ ದಿಕ್ಕುಗಳಲ್ಲಿ ಪಸರಿಸಿತ್ತು. ಅಫಜಲಖಾನನ ವಧೆ, ಶಾಯಿಸ್ತಾಖಾನನ ಫಜೀತಿ ಮತ್ತು ಆಗ್ರಾದಿಂದ ಬಿಡುಗಡೆ ಈ ರೋಮಾಂಚಕ ಪ್ರಸಂಗಗಳ ಸುದ್ದಿ ದೇಶದ ತುಂಬೆಲ್ಲಾ ಹಬ್ಬಿತ್ತು. ಅದರಿಂದ ಅಲ್ಲಿ ಮಹಾರಾಜರ ಪ್ರಚಂಡ ಸ್ವಾಗತವಾಯಿತು. ಮನೆಮನೆಗಳಿಂದ ಜನರು



**ಶಿವರಾಯರ ಗೋವಳಕೊಂಡದ ಐತಿಹಾಸಿಕ ಭೇಟಿ**

ಮಹಾರಾಜರ ಮೇಲೆ ಹೂಮಳೆ ಸುರಿಸುತ್ತಿದ್ದರು. ಜನರ ಸ್ವಾಗತವನ್ನು ಸ್ವೀಕರಿಸಿ ಮಹಾರಾಜರು ಕುತುಬಶಾಹನ ದರಬಾರಿಗೆ ಬಂದರು. ಕುತುಬಶಾಹನು ಅವರನ್ನು ಎದುರುಗೊಂಡನು. ಅವನು ವಿಶೇಷವಾಗಿ ತಯಾರಿಸಿದ್ದ ಸಿಂಹಾಸನದ ಮೇಲೆ ತನ್ನ ಜೊತೆಯಲ್ಲಿ ಮಹಾರಾಜರನ್ನು ಕೂಡಿಸಿಕೊಂಡನು. ಅವನು ಮಹಾರಾಜರ ಸನ್ಮಾನದಲ್ಲಿ ಯಾವ ಕೊರತೆಯೂ ಇಲ್ಲದಂತೆ ನೋಡಿಕೊಂಡನು. ಅವನ ಸ್ವಾಗತ ಸತ್ಕಾರವನ್ನು ಸ್ವೀಕರಿಸಿ ಶಿವರಾಯರು ಕರ್ನಾಟಕದ ದಂಡಯಾತ್ರೆಗೆ ಹೊರಟರು.

**ಜಿಂಜೀಯನ್ನು ಗೆದ್ದರು :** ಶಿವರಾಯರು ಪೂರ್ವ ಕರಾವಳಿಗೆ ಬಂದರು. ಚೆನ್ನೈಯ ದಕ್ಷಿಣಕ್ಕೆ ಜಿಂಜೀಯ ಕೋಟೆ ಇದೆ. ಇದು ರಾಯಗಡದಂತೆಯೇ ಪ್ರಚಂಡ ಹಾಗೂ ಭದ್ರವಾದ ಕೋಟೆಯಾಗಿದೆ. ಅದಕ್ಕೆ ಮುತ್ತಿಗೆ ಹಾಕಿ ಮಹಾರಾಜರು ಆ ಕೋಟೆಯನ್ನು ಗೆದ್ದರು. ದಕ್ಷಿಣದಲ್ಲಿ ಸ್ವರಾಜ್ಯಕ್ಕೆ ಒಂದು ಭದ್ರವಾದ ಸ್ಥಾನ ನಿರ್ಮಾಣವಾಯಿತು.

ಆಮೇಲೆ ಅವರು ವೇಲೂರಿನ ಕೋಟೆಗೆ ಮುತ್ತಿಗೆ ಹಾಕಿದರು. ಎಷ್ಟೋ ತಿಂಗಳವರೆಗೆ ಮುತ್ತಿಗೆಯನ್ನು ಮುಂದುವರಿಸಿದರೂ ಕೋಟೆ ವಶವಾಗಲೊಲ್ಲದು. ಆಗ ವೇಲೂರದ ಹತ್ತಿರವಿದ್ದ ಗುಡ್ಡದಿಂದ ಶಿವರಾಯರು ಆ ಕೋಟೆಯ ಮೇಲೆ ತೋಫಿನ ಮಳೆ ಸುರಿಸಿದರು ಹಾಗೂ ಕೋಟೆಯನ್ನು ಗೆದ್ದರು. ಅವರು ಕರ್ನಾಟಕದಲ್ಲಿ ಒಟ್ಟಿಗೆ ಇಪ್ಪತ್ತು ಲಕ್ಷ ಉತ್ಪನ್ನದ ಪ್ರದೇಶ ಮತ್ತು ಅನೇಕ ಚಿಕ್ಕ ದೊಡ್ಡ ಕೋಟೆಗಳನ್ನು ಗೆದ್ದರು.

**ವ್ಯಂಕೋಜಿರಾಜರ ಭೇಟಿ :** ಮಹಾರಾಜರು ತಮ್ಮ ಮಲತಮ್ಮ ವ್ಯಂಕೋಜಿರಾಜೆ ಇವರನ್ನು ಭೇಟಿಗೆ ಕರೆದರು. ಅರೆಮನಸ್ಸಿನಿಂಧ ಅವರು ಬಂದರು. ಮಹಾರಾಜರು ಅವರ ಯೋಗ್ಯ ಸತ್ಕಾರ ಮಾಡಿದರು. ಅವರಿಗೆ ತಿಳಿಸಿ ಹೇಳುವ ಪ್ರಯತ್ನ ಮಾಡಿದರು. ಸ್ವರಾಜ್ಯದ ಕಾರ್ಯದಲ್ಲಿ ವ್ಯಂಕೋಜಿರಾಜರು ಸಹಕರಿಸಬೇಕೆಂದು ಅವರು ಅವರನ್ನು ಕೇಳಿಕೊಂಡರು. ಕೆಲವು ದಿವಸ ವ್ಯಂಕೋಜಿರಾಜರು




**ಶಿವರಾಯರು – ವ್ಯಂಕೋಜಿರಾಜರ ಭೇಟಿ**

ಮಹಾರಾಜರೊಡನೆ ಇದ್ದರು. ಆದರೆ ಒಂದು ರಾತ್ರಿ ಅವರು ಮಹಾರಾಜರಿಗೆ ಏನೂ ತಿಳಿಸದೆ ತಂಜಾವೂರಿಗೆ ಹೊರಟು ಹೋದರು ಮತ್ತು ತಿರುಗಿ ಅವರ ಸೈನ್ಯದ ಮೇಲೆಯೇ ಅವರು ದಾಳಿ ಮಾಡಿದರು. ಆಗ ಮಹಾರಾಜರ ಸೈನಿಕರು ಅವರಿಗೆ ಚೆನ್ನಾಗಿ ಪಾಠ ಕಲಿಸಿದರು. ವ್ಯಂಕೋಜಿರಾಜರ ಪರಾಭವವಾಯಿತು. ತನ್ನ ತಮ್ಮನ ಈ ರೀತಿಯ ವರ್ತನೆಯಿಂದ ಮಹಾರಾಜರಿಗೆ ತುಂಬಾ ಕೆಡುಕೆನಿಸಿತು. ಅವರು ವ್ಯಂಕೋಜಿರಾಜರಿಗೆ ತಿಳಿಸಿ ಹೇಳುವ ಪತ್ರಗಳನ್ನು ಕಳುಹಿಸಿದರು. ಜಿಂಜಿಯ ದಕ್ಷಿಣದ ಕಡೆಯ ಕೆಲವು ಪ್ರದೇಶಗಳನ್ನು ಅವರಿಗೆ ಕೊಟ್ಟರು. ಅವರ ಹೆಂಡತಿಯಾದ ದೀಪಾಬಾಯಿಗೂ ಮಹಾರಾಜರು ಉಪಜೀವನಕ್ಕಾಗಿ ಕರ್ನಾಟಕದಲ್ಲಿಯ ಕೆಲವು ಪ್ರದೇಶಗಳನ್ನು ಕೊಟ್ಟರು. ''ಪರಕೀಯ ಶತ್ರುಗಳ ಮೇಲೆ ವಿಶ್ವಾಸವಿಡಬೇಡಿ. ನಿಮ್ಮ ಪುರುಷಾರ್ಥವನ್ನು ಮೆರೆಯಿಸಿರಿ,'' ಎಂದು ಮಹಾರಾಜರು ವ್ಯಂಕೋಜಿರಾಜರಿಗೆ ಪತ್ರದಲ್ಲಿ ಬರೆದರು.

ಕರ್ನಾಟಕದಲ್ಲಿ ವಿಜಯ ಪಡೆದ ಮಹಾರಾಜರು ರಾಯಗಡಕ್ಕೆ ಹಿಂದಿರುಗಿದರು. ಈ ದಂಡಯಾತ್ರೆಯಿಂದ ಉಂಟಾದ ಆಯಾಸದಿಂದಿರುವಾಗಲೇ ಜಂಜೀರದ ಸಿದ್ದಿಯ ವಿರುದ್ಧ ಮಹಾರಾಜರಿಗೆ ನೌಕಾದಳದ ದಾಳಿಯನ್ನು ಮಾಡಬೇಕಾಯಿತು. ಆಗ ಮಹಾರಾಜರ ವಯಸ್ಸು ಐವತ್ತು ವರ್ಷ ಇತ್ತು. ಅವರು ಒಂದೇ ಸವನೆ ಮೂವತ್ತು ಮೂವತ್ತೈದು ವರ್ಷ ಕಷ್ಟಪಟ್ಟಿದ್ದರು. ಅವರಿಗೆ ಎಂದೂ ವಿಶ್ರಾಂತಿ ಸಿಕ್ಕಿರಲಿಲ್ಲ.

**ಜನತೆಯ ಕೈವಾರಿ ಹೋದನು :** ದಿನಾಂಕ ೩ ಎಪ್ರಿಲ್, ೧೬೮೦ ರಂದು ಎಲ್ಲರನ್ನೂ ದುಃಖಸಾಗರದಲ್ಲಿ ತಳ್ಳಿ, ಶಿವರಾಯರು ಕೊನೆಯುಸಿರನ್ನು ಎಳೆದರು. ಜನತೆಯ ಕೈವಾರಿ ಹೋದರು! ಅವರ ಜೀವಮಾನದಲ್ಲಿ ಮಹಾರಾಜರು ಎಷ್ಟೊಂದು ಸ್ಥಿತ್ಯಂತರಗಳನ್ನು ಮಾಡಿದರು. ಬಲಾಢ್ಯ ಶತ್ರುಗಳನ್ನು ಬಗ್ಗಿಸಿ ಮಹಾರಾಜರು ಹಿಂದವೀ ಸ್ವರಾಜ್ಯವನ್ನು ನಿರ್ಮಿಸಿದರು. ಅಖಿಲ ಭಾರತದಲ್ಲಿ ಮಹಾರಾಜರು ಸಾಧಿಸಿದ ಕಾರ್ಯಕ್ಕೆ ಸಮಾನ ಕಾರ್ಯ ಮತ್ತೊಂದು ಇರಲಿಲ್ಲ. ಮಹಾರಾಜರು ಮಹಾನ್ ರಾಷ್ಟ್ರಪುರುಷರಾಗಿದ್ದರು.




The following foot notes are applicable : (1) © Government of India, Copyright : 2014. (2) The responsibility for the correctness of internal details rests with the publisher. (3) The territorial waters of India extend into the sea to a distance of twelve nautical miles measured from the appropriate base line. (4) The administrative headquarters of Chandigarh, Haryana and Punjab are at Chandigarh. (5) The interstate boundaries amongst Arunachal Pradesh, Assam and Meghalaya shown on this map are as interpreted from the "North-Eastern Areas (Reorganisation) Act. 1971," but have yet to be verified. (6) The external boundaries and coastlines of India agree with the Record/Master Copy certified by Survey of India. (7) The state boundaries between Uttarakhand & Uttar Pradesh, Bihar & Jharkhand and Chattisgarh & Madhya Pradesh have not been verified by the Governments concerned. (8) The spellings of names in this map, have been taken from various sources.

## ಅಭ್ಯಾಸ

**೧. ಬಿಟ್ಟ ಸ್ಥಳಗಳಲ್ಲಿ ಕಂಸದಲ್ಲಿಯ ಯೋಗ್ಯ ಪರ್ಯಾಯವನ್ನು ಬರೆಯಿರಿ.**

(ಅ) ವ್ಯಂಕೋಜಿರಾಜೆಯವರು ದಕ್ಷಿಣದಲ್ಲಿಯ .......... ಜಹಗೀರವನ್ನು ನೋಡಿಕೊಳ್ಳುತ್ತಿದ್ದರು.
(ವೆಲ್ಲೂರಿನ, ತಂಜಾವೂರಿನ, ಬೆಂಗಳೂರಿನ)

(ಆ) ......... ಇದು ಕುತುಬಶಾಹಾನ ರಾಜಧಾನಿ ಆಗಿತ್ತು.
(ದಿಲ್ಲಿ, ಜಿಂಜಿ, ಗೋವಳಕೊಂಡಾ)

**೨. ಪ್ರತಿಯೊಂದಕ್ಕೆ ಒಂದೇ ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ.**

(ಅ) ವ್ಯಂಕೋಜಿರಾಜರಿಗೆ ಭೆಟ್ಟಿ ಮಾಡುವ ಯಾವ ಉದ್ದೇಶ ಶಿವರಾಯರಿಗೆ ಇತ್ತು ?

(ಆ) ಶಿವರಾಯರು ವ್ಯಂಕೋಜಿರಾಜರಿಗೆ ಏನೆಂದು ಕೇಳಿಕೊಂಡರು ?

(ಇ) ಶಿವರಾಯರು ವ್ಯಂಕೋಜಿರಾಜರಿಗೆ ಪತ್ರದಲ್ಲಿ ಏನು ಬರೆದರು ?

**೩. ಕಾರಣಗಳನ್ನು ಬರೆಯಿರಿ.**

(ಅ) ಶಿವರಾಯರು ದಕ್ಷಿಣವನ್ನು ವಶಪಡಿಸಿಕೊಳ್ಳಬೇಕೆಂದು ನಿಶ್ಚಯಿಸಿದರು ?

(ಆ) ಶಿವರಾಯರು ವ್ಯಂಕೋಜಿರಾಜರಿಗೆ ತಿಳುವಳಿಕೆಯ ಪತ್ರಗಳನ್ನು ಕಳುಹಿಸಿದರು.

**ಉಪಕ್ರಮ**

ಶಿವರಾಯ ಮತ್ತು ವ್ಯಂಕೋಜಿರಾಜೆ ಇವರ ಭೆಟ್ಟಿಯ ಮತ್ತು ಸಂವಾದದ ನಾಟ್ಯಾಭಿನಯವನ್ನು ಮಾಡಿರಿ.

BMSC22



**ಶಿವಾಜಿ ಮಹಾರಾಜರ ಸಮಾಧಿ – ರಾಯಗಡ**

# ೧೭. ದುರ್ಗಕೋಟೆಗಳ ಮತ್ತು ಹಡಗುಪಡೆಯ ವ್ಯವಸ್ಥಾಪನೆ

ಶಿವರಾಯರು ಅನೇಕ ಶತ್ರುಗಳನ್ನು ಸೋಲಿಸಿ ಸ್ವರಾಜ್ಯದ ಸ್ಥಾಪನೆ ಮಾಡಿದರು. ಯುದ್ಧವಿರಲಿ ಅಥವಾ ರಾಜ್ಯಾಡಳಿತವಿರಲಿ, ಶಿವರಾಯರ ವ್ಯವಸ್ಥಾಪನ ಕೌಶಲ್ಯವು ಎಲ್ಲ ಕ್ಷೇತ್ರಗಳಲ್ಲಿ ಕಾಣಸಿಗುತ್ತದೆ. ಈ ಪಾಠದಲ್ಲಿ ನಾವು ಶಿವರಾಯರ ವ್ಯವಸ್ಥಾಪನ ಕೌಶಲ್ಯದ ವಿಷಯವಾಗಿ ಮಾಹಿತಿಯನ್ನು ಪಡೆಯುವವರಿದ್ದೇವೆ.



**ನಿಮಗೆ ಗೊತ್ತಿದೆಯೇ ?**

- ವ್ಯವಸ್ಥಾಪನ ಕೌಶಲ್ಯವೆಂದರೇನು? ವ್ಯವಸ್ಥಾಪನ ಕೌಶಲ್ಯವೆಂದರೆ ನಿರ್ದಿಷ್ಟವಾದ ಧ್ಯೇಯಗಳನ್ನು ಪೂರ್ಣ ಮಾಡುವ ಸಲುವಾಗಿ ಕೈಗೆತ್ತಿಕೊಂಡ ಕಾರ್ಯವನ್ನು ಶಿಸ್ತುಬದ್ಧ ಪದ್ಧತಿಯಿಂದ ಮಾಡುವುದು ಎಂದರ್ಥ.

ಶಿವರಾಯರ ವ್ಯವಸ್ಥಾಪನ ಕೌಶಲ್ಯವು ಯಾವ ರೀತಿ ಅವರು ಜೀವನವಿಡೀ ಮಾಡಿದ ಯುದ್ಧಗಳಲ್ಲಿ ಕಂಡುಬರುತ್ತದೆಯೋ, ಅದೇ ರೀತಿ ಅವರ ಒಟ್ಟು ರಾಜ್ಯಾಡಳಿತದಲ್ಲಿಯೂ ಗಮನಕ್ಕೆ ಬರುತ್ತದೆ. ಅದರ ಕೆಲವು ಉದಾಹರಣೆಗಳು ಕೆಳಗಿನಂತಿವೆ.

## ದುರ್ಗ-ಕೋಟೆಗಳ ಸ್ಥಾಪನೆ

ದುರ್ಗ-ಕೋಟೆಗಳ ಸಹಾಯದಿಂದ ಶಿವರಾಯರು ಸ್ವರಾಜ್ಯದ ರಕ್ಷಣೆ ಮಾಡಿದರು. 'ಸಂಪೂರ್ಣ ರಾಜ್ಯದ ಸಾರವೇ ದುರ್ಗ' ಎಂಬ ನಿರ್ದಿಷ್ಟವಾದ ಮತ್ತು ಕೆಲವೇ ಶಬ್ದಗಳಲ್ಲಿ ಅವರು 'ಆಜ್ಞಾಪತ್ರ' ಈ ಶಿವಕಾಲೀನ ಗ್ರಂಥದಲ್ಲಿ ದುರ್ಗಗಳ ಅಂದರೆ ದುರ್ಗ-ಕೋಟೆಗಳ ಮಹತ್ವವನ್ನು ಹೇಳಿದ್ದಾರೆ. ಶಿವರಾಯರು ತಾರುಣ್ಯದಲ್ಲಿ ಸಹ್ಯಾದ್ರಿಯ ಪರ್ವತ ಶ್ರೇಣಿಗಳಲ್ಲಿ ಸಂಚರಿಸಿದ್ದರು. ಸಹ್ಯಾದ್ರಿಯ ಮೈಮೇಲೆ ನಿಂತುಕೊಂಡು ದುರ್ಗ-ಕೋಟೆಗಳನ್ನು ಅವರು ಅಸಂಖ್ಯ ಸಲ ನೋಡಿದ್ದರು. ಸ್ವರಾಜ್ಯದ ರಕ್ಷಣೆಗಾಗಿ ದುರ್ಗ-ಕೋಟೆಗಳ ಮಹತ್ವವನ್ನು ಅವರು ಅರಿತಿದ್ದರು.

ಶಿವರಾಯರು ವನದುರ್ಗ, ಗಿರಿದುರ್ಗ ಹಾಗೂ ಜಲದುರ್ಗ ಎಂಬ ಮೂರು ಪ್ರಕಾರದ ಕೋಟೆಗಳನ್ನು ಕಟ್ಟಿದ್ದರು. ಜಲದುರ್ಗಗಳಿಗೆ 'ಜಂಜಿರಾ' ಎಂದೂ ಕರೆಯುತ್ತಾರೆ. ಅವರು ಹಿರೋಜಿ ಇಂದುಲಕರ ಮತ್ತು ಅರ್ಜೋಜಿ ಯಾದವರಂಥ ತಜ್ಞರ ಕಡೆಯಿಂದ ರಾಜಗಡ, ಪ್ರತಾಪಗಡ, ಸಿಂಧುದುರ್ಗ ಮುಂತಾದ ಅನೇಕ ಕೋಟೆಗಳನ್ನು ಕಟ್ಟಿಸಿಕೊಂಡರು. ಅದೇ ರೀತಿ ರಾಯಗಡ ಕೋಟೆಯನ್ನು ಹೊಸದಾಗಿ ಕಟ್ಟಿಸಿದರು. ಇಷ್ಟೇ ಅಲ್ಲದೆ ಅವರು ವಿಜಯದುರ್ಗ, ತೋರಣಾ, ರಾಂಗಣಾ ಇತ್ಯಾದಿ ಕೆಲವು ಹಳೆಯ ಕೋಟೆಗಳನ್ನು ದುರಸ್ತಿ ಮಾಡಿಸಿದರು. ಶಿವರಾಯರ ಕಡೆಗೆ ಸುಮಾರು ೩೦೦ ಕೋಟೆಗಳಿದ್ದವು.



**ನಿಮಗೆ ಗೊತ್ತಿದೆಯೇ ?**

- ಶಿವಾಜಿ ಮಹಾರಾಜರ ಕಿರಿಯ ಪುತ್ರರಾದ ಛತ್ರಪತಿ ರಾಜಾರಾಮ ಮಹಾರಾಜರ ಆಜ್ಞೆಯ ಮೇಲಿಂದ ರಾಮಚಂದ್ರಪಂತ ಅಮಾತ್ಯ ಇವರು 'ಆಜ್ಞಾಪತ್ರ' ಎಂಬ ಗ್ರಂಥವನ್ನು ಬರೆದಿದ್ದಾರೆಂದು ತಿಳಿಯಲಾಗುತ್ತದೆ. ಈ ಗ್ರಂಥದಲ್ಲಿ ಶಿವ-ಛತ್ರಪತಿಯವರ ರಾಜನೀತಿಯ ಸ್ಪಷ್ಟ ಪ್ರತಿಬಿಂಬವು ಮೂಡಿದೆ.



**ಮಾಡಿ ನೋಡಿರಿ.**

- ದೀಪಾವಳಿಯ ಬಿಡುವಿನಲ್ಲಿ ಗೆಳೆಯರ ಸಹಾಯದಿಂದ ಯಾವುದೊಂದು ಕೋಟೆಯ ಪ್ರತಿಕೃತಿಯನ್ನು ತಯಾರಿಸಿರಿ.
  - ಕೋಟೆಯನ್ನು ತಯಾರಿಸುವ ಸಲುವಾಗಿ ವಸ್ತುಗಳ ಪಟ್ಟಿಯನ್ನು ತಯಾರಿಸಿರಿ.
  - ಕೋಟೆಗಾಗಿ ಜಾಗೆಯ ಆಯ್ಕೆ ಮಾಡಿರಿ.
  - ಕೋಟೆಯ ಮೇಲೆ ನೀರಿನ, ಮನೆಗಳ ವ್ಯವಸ್ಥೆ ಹೇಗಿರಬೇಕು ಎಂಬುದರ ರೂಪರೇಷೆಯನ್ನು ತಯಾರಿಸಿರಿ.



**ಹೇಳಿ ನೋಡೋಣ !**

- ನಿಮ್ಮ ಪರಿಸರದಲ್ಲಿರುವ ಕೋಟೆಯ/ಗುಹೆಯ ಹೆಸರು ಹೇಳಿರಿ.
- ಕೋಟೆಯ ಮೇಲೆ ಯಾವ ವಸ್ತುಗಳು/ ಕಟ್ಟಡಗಳು ಇವೆ?
- ಕೋಟೆಯು ಯಾವ ಪ್ರಕಾರದ್ದಾಗಿದೆ ?



ಕೋಟೆಯ ನಿರ್ಮಾಣ

## ಕೋಟೆಗಳ ವ್ಯವಸ್ಥಾಪನೆ

ದುರ್ಗಕೋಟೆಗಳ ಸಂರಕ್ಷಣೆಯ ನಿರ್ದಿಷ್ಟವಾದ ವ್ಯವಸ್ಥೆಯನ್ನು ಮಹಾರಾಜರು ಮಾಡಿದ್ದರು.

ಪ್ರತಿಯೊಂದು ಕೋಟೆಯ ಮೇಲೆ ಕಿಲ್ಲೇದಾರ, ಸಬನೀಸ ಮತ್ತು ಕಾರಖಾನೀಸ ಎಂಬ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಕಿಲ್ಲೇದಾರನ ಕೈಕೆಳಗೆ ಸಬನೀಸ ಮತ್ತು ಕಾರಖಾನೀಸರು ಕೆಲಸ ಮಾಡುತ್ತಿದ್ದರು.

ಈ ಅಧಿಕಾರಿಗಳ ಕಾರ್ಯಗಳು ಕೆಳಗಿನಂತೆ ಇದ್ದವು.

**ಕಿಲ್ಲೇದಾರ (ಹವಾಲದಾರ)**

- ಕೋಟೆಯ ಸಂರಕ್ಷಣೆ ಹಾಗೂ ಆಡಳಿತ ಮಾಡುವುದು.
- ಸಬನೀಸ, ಕಾರಖಾನೀಸರಿಗೆ ಆಜ್ಞೆ ಮಾಡುವುದು.
- ಸರಕಾರಿ ಕಾಗದಪತ್ರಗಳು, ಹುಕುಂ ಹಾಗೂ ಆಜ್ಞೆಗಳನ್ನು ಪಾಲಿಸುವುದು.

**ಸಬನೀಸ**

- ಕೋಟೆಯಲ್ಲಿಯ ಜಮಾಖರ್ಜಿನ ಲೆಕ್ಕ ಇಡುವುದು.
- ಕೋಟೆಯ ಮೇಲಿನ ಹಾಗೂ ಕೋಟೆಯ ಕೆಳಗಿನ ಪ್ರಜೆಗಳ ಕಡೆಯಿಂದ ಕರ ವಸೂಲಿ ಮಾಡುವುದು.
- ಪತ್ರ ವ್ಯವಹಾರ ಮಾಡುವುದು.

**ಕಾರಖಾನೀಸ**

- ಕೋಟೆಯ ಮೇಲಿರುವ ಜನರಿಗೆ ಧಾನ್ಯ ಮತ್ತು ವಸ್ತುಗಳ ಪೂರೈಕೆ ಮಾಡುವುದು.
- ಯುದ್ಧದ ಸಮಯದಲ್ಲಿ ತೋಪುಗಳಿಗೆ, ಬಂದೂಕುಗಳಿಗೆ ತಗಲುವ ಮದ್ದುಗುಂಡುಗಳ ವ್ಯವಸ್ಥೆ ಮಾಡುವುದು.
- ಕೋಟೆ ಮತ್ತು ಕೋಟೆಯ ಮೇಲಿರುವ ಕಟ್ಟಡಗಳ ಉಸ್ತುವಾರಿ ಮತ್ತು ದುರಸ್ತಿ ಮಾಡುವುದು.

## ತೋಫುಗಳು-ಮದ್ದುಗುಂಡುಗಳು

ಶಿವರಾಯರ ಕಾಲದಲ್ಲಿ ಶತ್ರುಗಳಿಂದ ದುರ್ಗ-ಕೋಟೆಗಳ ಸಂರಕ್ಷಣೆ ಮಾಡುವ ಸಲುವಾಗಿ ಚಿಕ್ಕ-ದೊಡ್ಡತೋಫುಗಳಉಪಯೋಗಮಾಡಲಾಗುತ್ತಿತ್ತು. ಈ ತೋಫುಗಳನ್ನು ಕೋಟೆಯ ಅಂಚಿನ ಮೇಲೆ ಹಾಗೂ ಗೋಪುರಗಳ ಮೇಲೆ ಇಡಲಾಗುತ್ತಿತ್ತು. ಪುರಂದರ, ಭೀಮಗಡ ಮುಂತಾದ ಕೆಲವು ಕೋಟೆಗಳ ಮೇಲೆ ತೋಫುಗಳನ್ನು ತಯಾರಿಸುವ ಕಾರ್ಖಾನೆಗಳೂ ಇದ್ದವು. ಕಬ್ಬಿಣ, ಹಿತ್ತಾಳೆ, ತಾಮ್ರ ಇತ್ಯಾದಿ ಲೋಹಗಳಿಂದ ತೋಫುಗಳನ್ನು ತಯಾರಿಸಲಾಗುತ್ತಿತ್ತು. ಮಳೆಗಾಲದ ದಿನಗಳಲ್ಲಿ ಕೋಟೆಗಳ ಮೇಲಿನ ತೋಫುಗಳು ತುಕ್ಕು ಹಿಡಿಯಬಾರದೆಂದು ಅವುಗಳಿಗೆ ಮೇಣದ ಲೇಪನವನ್ನು ಮಾಡಲಾಗುತ್ತಿತ್ತು. ಶತ್ರುಗಳ ಮೇಲೆ ಎಸೆಯುವ ಸಲುವಾಗಿ ಕಬ್ಬಿಣದ, ಕಲ್ಲಿನ ಹಾಗೂ ಸ್ಫೋಟಕ ಗುಂಡು (ಸತುವಿನ ಗುಂಡು)ಗಳ ಬಳಕೆ ಮಾಡಲಾಗುತ್ತಿತ್ತು. ಈ ತೋಫುಗಳನ್ನು ಹಾರಿಸುವ ಸಲುವಾಗಿ ಸ್ಫೋಟಕ ಮದ್ದನ್ನು ಉಪಯೋಗಿಸಲಾಗುತ್ತಿತ್ತು.

**ಚರ್ಚೆ ಮಾಡಿರಿ.**

- ಕೋಟೆಯ ಮೇಲಿನ ತೋಫುಗಳು ತುಕ್ಕು ಹಿಡಿಯಬಾರದೆಂದು ಅವುಗಳಿಗೆ ಮೇಣದ ಲೇಪನವನ್ನು ಮಾಡಲಾಗುತ್ತಿತ್ತು.

**ಹೇಳಿ ನೋಡೋಣ !**

- ಶಿವಾಜಿ ಮಹಾರಾಜರ ನೌಕಾಪಡೆಯಲ್ಲಿಯ ಹಡಗುಗಳ ಪ್ರಕಾರಗಳನ್ನು ಹೇಳಿರಿ. ಉದಾ. ದೋಣಿ, ನಾವೆ, ಹಾಯಿದೋಣಿ, ನೌಕೆ, ಹಡಗು.
- ಸ್ವತಂತ್ರ ಭಾರತದ ನೌಕಾಪಡೆಯಲ್ಲಿಯ ಹಡಗುಗಳ ಹೆಸರುಗಳನ್ನು ಹೇಳಿರಿ.

## ನೌಕಾಪಡೆ

ನೌಕಾಪಡೆ ಎಂದರೆ ಯುದ್ಧ ನೌಕೆಗಳ ಸಮೂಹ ಹೌದು. ಇಂಗ್ಲಿಷ, ಪೋರ್ತುಗೀಜ, ಸಿದ್ದೀ, ಡಚ್ ಇವರಲ್ಲಿ ಬಲಶಾಲಿಯಾದ ನೌಕಾಪಡೆಯಿತ್ತು.



ನೌಕಾಪಡೆಯ ನಿರೀಕ್ಷಣೆ ಮಾಡುವಾ ಶಿವರಾಯರು

ಅವರಲ್ಲಿಯ ಕೆಲವು ಜನರು ಸಮುದ್ರ ತೀರಗಳಲ್ಲಿರುವ ಊರುಗಳನ್ನು ಲೂಟಿ ಮಾಡುತ್ತಿದ್ದರು. ಅಲ್ಲಿಯ ಜನರನ್ನು ಪೀಡಿಸುತ್ತಿದ್ದರು. ಶಿವರಾಯರ ಈ ಸಮುದ್ರ ತೀರದ ಶತ್ರುಗಳನ್ನು ಶಾಶ್ವತವಾಗಿ ನಿರ್ಮೂಲನೆಗೊಳಿಸಲು ಸ್ವತಂತ್ರ ನೌಕಾಪಡೆಯನ್ನು ಸ್ಥಾಪಿಸಿದರು.

ಶಿವರಾಯರು ಚಿಕ್ಕ ದೊಡ್ಡ ಹಡಗು-ನಾವೆಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸಿದರು. ಸಮುದ್ರದಲ್ಲಿಯ ಹಳೆಯ ಕೋಟೆಗಳನ್ನು ಗೆದ್ದುಕೊಂಡು ಅವುಗಳನ್ನು ವಶಪಡಿಸಿಕೊಂಡರು. ಸುವರ್ಣದುರ್ಗ, ವಿಜಯದುರ್ಗಗಳಂತಹ ಜಲದುರ್ಗಗಳನ್ನು ಅವರು ದುರಸ್ತಿ ಮಾಡಿದರು. ಶಿವರಾಯರು ಮಾಲವಣದ ಹತ್ತಿರ ಕುರಟೆ ದ್ವೀಪದಲ್ಲಿ ಸಿಂಧುದುರ್ಗ ಎಂಬ ಹೊಸ ಜಲದುರ್ಗವನ್ನು ಕಟ್ಟಿಸಿದರು. ಅದರಂತೆ ಮುಂಬಯಿ ಹತ್ತಿರ ಖಾಂದೇರಿ ಎಂಬ ಕೋಟೆಯನ್ನು ಕಟ್ಟಿಸಿದರು.

ಸ್ವರಾಜ್ಯದ ನೌಕಾಪಡೆಯಲ್ಲಿ ಮೀನುಗಾರರು, ಭಂಡಾರಿ, ಆಗರಿ ಮುಂತಾದ ವಿವಿಧ ನಾವಿಕ ಜಾತಿಧರ್ಮದ ಸೈನಿಕರಿದ್ದರು. ದೌಲತಖಾನ, ಮಾಯನಾಕ ಭಂಡಾರಿ, ಲಾಯ ಪಾಟೀಲ, ದರ್ಯಾ ಸಾರಂಗ, ತುಕೋಜಿ ಆಂಗ್ರೆಯವರಂತಹ ಪ್ರಸಿದ್ಧ ಹಡಗುಪಡೆಯ ಯೋಧರು ಇದೇ ಕಾಲದಲ್ಲಿ ಖ್ಯಾತಿ ಗಳಿಸಿದರು.

ಮರಾಠರ ಹಡಗುಪಡೆಯಿಂದಾಗಿ ಇಂಗ್ಲಿಷ, ಪೋರ್ತುಗೀಜ, ಸಿದ್ದೀ ಹಾಗೂ ಡಚ್ ರಂತಹ ಸಾಗರದ ಮೇಲಿನ ಶತ್ರುಗಳಿಗೆ ಅವರ ಭಯವೆನಿಸತೊಡಗಿತು. ಅದರಿಂದಾಗಿ ಸ್ವರಾಜ್ಯಕ್ಕೆ ಶತ್ರುಗಳಿಂದಾಗುವ ಪೀಡೆ ಕಡಿಮೆಯಾಯಿತು. ಶಿವರಾಯರು ಸ್ವತಂತ್ರ ಹಡಗುಪಡೆಯನ್ನು ಸ್ಥಾಪಿಸಿ ಅದರ ಸಾಮರ್ಥ್ಯದ ಮೇಲೆ ತಮ್ಮ ಸಾಗರದ ಗಡಿಯನ್ನು ನಿಶ್ಚಿತಪಡಿಸಿ ಸಮುದ್ರತೀರದ ಪ್ರದೇಶಗಳ ಮೇಲೆ ವರ್ಚಸ್ಸನ್ನು ಸ್ಥಾಪಿಸಿದರು. ತಮ್ಮ ಸಮುದ್ರ ತೀರವನ್ನು ಸುರಕ್ಷಿತಗೊಳಿಸಿದರು. ಇದು ಮಧ್ಯಯುಗದ ಕಾಲದಲ್ಲಿ ಭಾರತದಲ್ಲಿ ಶಿವರಾಯರು ಸ್ಥಾಪಿಸಿದ ಪ್ರಥಮ ಸ್ವದೇಶದ ನೌಕಾಪಡೆಯಾಗಿತ್ತು. ಅದರಿಂದಾಗಿ ಶಿವ ಛತ್ರಪತಿಯವರನ್ನು 'ಭಾರತೀಯ ನೌಕಾಪಡೆಯ ಜನಕ' ರೆಂದು ಗೌರವಿಸಲಾಗುತ್ತದೆ.

**ಶಿವರಾಯರ ಗೂಢಚಾರರ ವಿಭಾಗ:** ಶಿವರಾಯರ ಸೈನ್ಯ ವ್ಯವಸ್ಥೆಯಲ್ಲಿ ಗೂಢಚಾರರ ವಿಭಾಗವಿತ್ತು. ಬಹಿರ್ಜಿ ನಾಯಿಕ ಇವನು ಗೂಢಚಾರರ ವಿಭಾಗದ ಪ್ರಮುಖನಾಗಿದ್ದನು. ಮಹಾರಾಜರ ಸುರತದ ಮೇಲಿನ ದಾಳಿಯಂತಹ ದಾಳಿಗಳು ಯಶಸ್ವಿಯಾಗಲು ಅವನು ಪೂರೈಸಿದ ಮಾಹಿತಿಯು ತುಂಬಾ ಸಹಾಯಕವಾಯಿತು. ಶಿವರಾಯರ ಗೂಢಚಾರರು ಗುಪ್ತವಾಗಿ ಶತ್ರುಗಳ ಸೈನ್ಯದಲ್ಲಿ ಹೊಕ್ಕು ಸೈನ್ಯದಲ್ಲಿಯ ಸಂಪೂರ್ಣ ಮಾಹಿತಿಯನ್ನು ತೆಗೆದು ತರುತ್ತಿದ್ದರು. ಶತ್ರುಗಳ ಮೇಲೆ ಏರಿಹೋಗುವ ಮೊದಲು ಶಿವರಾಯರು ಗೂಢಚಾರರ ಕಡೆಯಿಂದ ಮಾಹಿತಿಯನ್ನು ಪಡೆದು ಆ ಮೇಲೆ ದಾಳಿಯ ಯೋಜನೆಯನ್ನು ತಯಾರಿಸುತ್ತಿದ್ದರು.

**ಕೂಟ ಯುದ್ಧ :** ಶಿವಾಜಿ ಮಹಾರಾಜರ ಯುದ್ಧ ನೀತಿಯಲ್ಲಿ ಕೂಟ ಯುದ್ಧ ತಂತ್ರಕ್ಕೆ ವಿಶೇಷ ಮಹತ್ವವಿತ್ತು. ಕೂಟ ಯುದ್ಧ ನೀತಿಯ ತಂತ್ರದಲ್ಲಿ ನಮಗೆ ಅನುಕೂಲವಾದ ಸ್ಥಳದಲ್ಲಿ ಮತ್ತು ಅನುಕೂಲವಾದ ವೇಳೆಯಲ್ಲಿ ಶತ್ರುಗಳ ಮೇಲೆ ಒಮ್ಮಿಂದೊಮ್ಮೆ ಮತ್ತು ಅನಿರೀಕ್ಷಿತವಾಗಿ ದಾಳಿಮಾಡಿ, ಶತ್ರುಗಳು ಆ ಆಘಾತದಿಂದ ಹೊರಬರುವಷ್ಟರಲ್ಲಿ ಸೈನ್ಯವನ್ನು ಸುರಕ್ಷಿತ ಸ್ಥಳಕ್ಕೆ ಮುಟ್ಟಿಸುವುದು. ಈ ತಂತ್ರವನ್ನು ಅವಲಂಬಿಸುವಾಗ ಶಿವಾಜಿ ಮಹಾರಾಜರಿಗೆ ಸಹ್ಯಾದ್ರಿ ಪರ್ವತಶ್ರೇಣಿಗಳಲ್ಲಿಯ ದಟ್ಟವಾದ ಅರಣ್ಯ, ಗಿರಿದುರ್ಗಗಳು ಹಾಗೂ ಪ್ರಜೆಗಳ ಬೆಂಬಲ ಇವುಗಳ ಸಹಾಯ ದೊರಕಿತು.

**ನಿಮಗೆ ಗೊತ್ತಿದೆಯೇ ?**

- ಶಿವರಾಯರ ಸೈನ್ಯವು ಶಿಸ್ತುಬದ್ಧವಾಗಿತ್ತು. ಅವರ ಸೈನಿಕರು ಸ್ತ್ರಿಯರನ್ನು ಗೌರವಿಸುತ್ತಿದ್ದರು. ಅದರಿಂದಾಗಿ ಸ್ತ್ರೀಯರ ರಕ್ಷಣಕರ್ತರೆಂದು ಶಿವರಾಯರ ಕೀರ್ತಿ ಎಲ್ಲೆಡೆ ಹಬ್ಬಿತ್ತು. ಸೈನಿಕರು ಮದ್ಯ ಸೇವಿಸಬಾರದು, ಪ್ರಜೆಗಳಿಗೆ ತೊಂದರೆ ಕೊಡಬಾರದು, ಪ್ರಜೆಗಳನ್ನು ಲೂಟಿ ಮಾಡಬಾರದು. ಎಂದು ಅವರು ಸೈನಿಕರಿಗೆ ಎಚ್ಚರಿಕೆ ನೀಡಿದ್ದರು.

**ನಿಮಗೆ ಗೊತ್ತಿದೆಯೇ ?**

- ಶಿವರಾಯರ ಕೆಲವು ಸಹಕಾರಿಗಳು- ಕಾನ್ಹೋಜಿ ಜೇಧೆ, ವೀರ ಬಾಜಿ ಪಾಸಲಕರ, ಫಿರಂಗೋಜಿ ನರಸಾಳಾ, ಪ್ರತಾಪರಾವ ಗುಜರ, ಸಿಧೋಜಿ ನಿಂಬಾಳಕರ ಮತ್ತು ಸಿದ್ದೀ ಹಿಲಾಲ.

## ಅಭ್ಯಾಸ

**೧. ಹೇಳಿ ನೋಡೋಣ.**

(ಅ) ದುರ್ಗಗಳ ಅಂದರೆ ದುರ್ಗ-ಕೋಟೆಗಳ ಮಹತ್ವವನ್ನು ಹೇಳುವ ಗ್ರಂಥ ................

(ಆ) ಜಲದುರ್ಗಗಳಿಗೆ ಹೀಗೂ ಅನ್ನುತ್ತಾರೆ ...............

**೨. ನಿಮಗೆ ಏನು ಅನಿಸುತ್ತದೆ ಎಂಬುದನ್ನು ಹೇಳಿರಿ.**

(ಅ) ಶಿವಛತ್ರಪತಿಯವರನ್ನು 'ಭಾರತೀಯ ನೌಕಾಪಡೆಯ ಜನಕ'ರೆಂದು ಗೌರವಿಸಲಾಗುತ್ತದೆ.

(ಆ) ಶಿವರಾಯರ ವ್ಯವಸ್ಥಾಪನೆಯು ಯಾವ ಯಾವ ಕ್ಷೇತ್ರಗಳಲ್ಲಿ ಕಾಣಸಿಗುತ್ತದೆ ?

**೩. ಕೋಟೆಯ ಮೇಲಿನ ಕೆಳಗಿನ ಅಧಿಕಾರಿಗಳ ಎರಡೆರಡು ಕಾರ್ಯಗಳನ್ನು ಬರೆಯಿರಿ.**

(ಅ) ಕಿಲ್ಲೇದಾರ – ೧. ......... ೨. .........

(ಆ) ಸಬನೀಸ– ೧. ......... ೨. .........

(ಇ) ಕಾರ್ಖಾನೀಸ– ೧. ......... ೨. .........

**೪. ಮಹರಾಷ್ಟ್ರದ ನಕಾಶೆಯಲ್ಲಿ ಕೆಳಗಿನ ಸ್ಥಳಗಳನ್ನು ತೋರಿಸಿರಿ.**

(ಅ) ಸಿಂಧುದುರ್ಗ ಕೋಟೆ (ಆ) ವಿಜಯದುರ್ಗ

(ಇ) ಮುಂಬಯಿ (ಈ) ಪ್ರತಾಪಗಡ

**೫. ಛತ್ರಪತಿ ಶಿವಾಜಿ ಮಹಾರಾಜರ ವ್ಯವಸ್ಥಾಪನ ಕೌಶಲ್ಯದಲ್ಲಿಯ ಯಾವ ಸಂಗತಿ ನಿಮಗೆ ಹಿಡಿಸಿತು? ನಿಮ್ಮ ದೈನಂದಿನ ಜೀವನದಲ್ಲಿ ಈ ಸಂಗತಿಯ ಉಪಯೋಗವನ್ನು ನೀವು ಹೇಗೆ ಮಾಡಿಕೊಳ್ಳುವಿರಿ ?**

### ಉಪಕ್ರಮ

(ಅ) 'ಶಿವರಾಯರ ಸಂದರ್ಶನದ ಏರ್ಪಾಟು' ಈ ಸಂದರ್ಶನ ನಾಟ್ಯವನ್ನು ವರ್ಗದಲ್ಲಿ ಸಾದರಪಡಿಸಿರಿ.

(ಆ) ಭಾರತೀಯ ನೌಕಾದಳದಲ್ಲಿಯ ಯುದ್ಧ ನೌಕೆಗಳ ವಿಷಯವಾಗಿ ಮಾಹಿತಿ ಪಡೆಯಿರಿ.

(ಇ) ವಿವಿಧ ಪ್ರಕಾರದ ಕೋಟೆಗಳಿಗೆ ಭೇಟಿ ನೀಡಿ ಕೋಟೆಯ ವಿವಿಧ ಭಾಗಗಳ ಹೆಸರುಗಳನ್ನು ತಿಳಿದುಕೊಳ್ಳಿರಿ.

BN283P

# ೧೮. ಜನ ಕಲ್ಯಾಣಕಾರಿ ಸ್ವರಾಜ್ಯದ ವ್ಯವಸ್ಥಾಪನೆ

**ಹೇಳಿ ನೋಡೋಣ!**

- ಶಿವರಾಯರು ಯಾವ ಯಾವ ಆಡಳಿತಗಳೊಂದಿಗೆ ಸಂಘರ್ಷ ಮಾಡಿದರು?

ಶಿವರಾಯರು ಆದಿಲಶಾಹಿ, ಮುಘಲ, ಪೋರ್ತುಗೀಜ ಮತ್ತು ಜಂಜೀರೆಕರ ಸಿದ್ದೀ ಈ ಅನ್ಯಾಯಕಾರಕ ಆಡಳಿತಗಳೊಂದಿಗೆ ದೀರ್ಘಕಾಲದ ವರೆಗೆ ಹೋರಾಡಿದರು. ಅದರಿಂದಾಗಿ ಸ್ವತಂತ್ರವಾದ ಹಿಂದವೀ ಸ್ವರಾಜ್ಯದ ನಿರ್ಮಿತಿಯಾಯಿತು.

ರಾಜ್ಯಾಡಳಿತದ ಕಾರ್ಯವು ಸುವ್ಯವಸ್ಥಿತವಾಗಿ ನಡೆಯಬೇಕೆಂದು ಶಿವರಾಯರು ರಾಜ್ಯಾಡಳಿತವನ್ನು ಎಂಟು ವಿಭಾಗಗಳಲ್ಲಿ ವಿಭಾಗಿಸಿದರು. ಇದುವೇ ಶಿವರಾಯರ ಅಷ್ಟಪ್ರಧಾನ ಮಂಡಳ ಹೌದು. ಪ್ರತಿಯೊಂದು ವಿಭಾಗಕ್ಕೆ ಒಬ್ಬೊಬ್ಬ ಪ್ರಮುಖನನ್ನು ನೇಮಿಸಿದರು. ಅದರೊಳಗಿಂದಲೇ ಮಹಾರಾಜರ ಅಷ್ಟಪ್ರಧಾನ ಮಂಡಳವು ರೂಪುಗೊಂಡಿತು. ಅಷ್ಟಪ್ರಧಾನ ಮಂಡಳದ ಮುಖಾಂತರ ನಡೆಸಿದ ಶಿವರಾಯರ ಸ್ವರಾಜ್ಯವು ನಿಜವಾದ ಅರ್ಥದಲ್ಲಿ ಜನಹಿತದ ರಾಜ್ಯವಾಗಿತ್ತು. ಈ ಅಷ್ಟಪ್ರಧಾನರ ಹಾಗೂ ಇತರ ಮಹತ್ವದ ಅಧಿಕಾರಿಗಳ ನೇಮಕವನ್ನು ಅವರ ಅರ್ಹತೆ ಹಾಗೂ ಪ್ರಾವೀಣ್ಯವನ್ನು ನೋಡಿ ಸ್ವತ: ಮಹಾರಾಜರು ಮಾಡುತ್ತಿದ್ದರು. ಅವರ ಆಡಳಿತದ ಮೇಲೆ ಲಕ್ಷ್ಯವಿರುತ್ತಿತ್ತು.

**ನಿಮಗೆ ಗೊತ್ತಿದೆಯೇ ?**

ಜನಕಲ್ಯಾಣ ರಾಜ್ಯದಲ್ಲಿ ಪ್ರಜೆಗಳ ಅನ್ನ, ಬಟ್ಟೆ ಹಾಗೂ ವಸತಿ ಈ ಜೀವನಾವಶ್ಯಕ ಅವಶ್ಯಕತೆಗಳು ಪೂರ್ಣವಾಗುತ್ತವೆ. ಸ್ತ್ರೀಯರನ್ನು ಗೌರವಿಸಲಾಗುತ್ತದೆ. ಸಾಮಾನ್ಯ ಜನರನ್ನು ಮತ್ತು ರೈತರನ್ನು ಮೋಸಗೊಳಿಸಲಾಗುವುದಿಲ್ಲ, ಯಾರ ಮೇಲೂ ಅನ್ಯಾಯವಾಗುವುದಿಲ್ಲ, ಪ್ರಜೆಗಳಿಗೆ ತ್ವರಿತ ನ್ಯಾಯ ದೊರೆಯುತ್ತದೆ. ಕೃಷಿ ಹಾಗೂ ಉದ್ಯೋಗಗಳ ವಿಕಾಸವಾಗುತ್ತದೆ. ಜಾನಪದ ಕಲೆಗಳು ವಿಕಾಸ ಹೊಂದುತ್ತವೆ. ಪ್ರಜೆಗಳು ಸುಖ-ಸಮಾಧಾನದಿಂದ ಇರುತ್ತಾರೆ.

ಶಿವಛತ್ರಪತಿಗಳು ನಿರ್ಮಿಸಿದ ಸ್ವರಾಜ್ಯದಲ್ಲಿ ಅವರ ಪ್ರಜೆಗಳು ಸುಖ-ಸಮಾಧಾನದಿಂದ ಇರತೊಡಗಿದರು. ಅದರಿಂದಾಗಿ ಮಹಾರಾಷ್ಟ್ರದಲ್ಲಿಯ ಜನರಲ್ಲಿ ಪ್ರಚಂಡ ಆತ್ಮವಿಶ್ವಾಸ, ಸ್ವಾಭಿಮಾನ ಮತ್ತು ದೇಶಪ್ರೇಮ ಈ ಗುಣಗಳು ಕಾಣತೊಡಗಿದವು.

**ಅಷ್ಟಪ್ರಧಾನ ಮಂಡಳ**

| | ಪ್ರಧಾನರ ಹೆಸರು | ಪದವಿ | ಕಾರ್ಯ |
|---|---|---|---|
| ೧. | ಮೋರೊ ತ್ರಿಂಬಕ ಪಿಂಗಳೆ | ಪ್ರಧಾನ | ರಾಜ್ಯಾಡಳಿತ ಮಾಡುವುದು. |
| ೨. | ರಾಮಚಂದ್ರ ನೀಳಕಂಠ ಮುಜುಮದಾರ | ಅಮಾತ್ಯ | ರಾಜ್ಯದ ಜಮಾಖರ್ಚನ್ನು ನೋಡುವುದು. |
| ೩. | ಹಂಬೀರರಾವ ಮೋಹಿತೆ | ಸೇನಾಪತಿ | ಸೈನ್ಯದ ನೇತೃತ್ವ ಮಾಡುವುದು. |
| ೪. | ಮೋರೇಶ್ವರ ಪಂಡಿತರಾವ | ಪಂಡಿತರಾವ | ಧಾರ್ಮಿಕ ಕಾರ್ಯಗಳನ್ನು ಮಾಡುವುದು. |
| ೫. | ನಿರಾಜಿ ರಾವಜಿ | ನ್ಯಾಯಾಧೀಶ | ನ್ಯಾಯದಾನ ಮಾಡುವುದು. |
| ೬. | ಅಣ್ಣಾಜಿ ದತ್ತೋ | ಸಚಿವ | ಸರಕಾರಿ ಆಜ್ಞಾಪತ್ರಗಳನ್ನು ಕಳಿಸುವುದು. |
| ೭. | ದತ್ತಾಜಿ ತ್ರಿಂಬಕ ವಾಕನೀಸ | ಮಂತ್ರಿ | ಪತ್ರ ವ್ಯವಹಾರ ನೋಡಿಕೊಳ್ಳುವುದು. |
| ೮. | ರಾಮಚಂತ್ರ ತ್ರಿಂಬಕ ಡಬೀರ | ಸುಮಂತ | ಪರರಾಜ್ಯಗಳೊಡನೆ ಸಂಬಂಧವಿಡುವುದು. |



ಶಿವರಾಯರು ರೈತರಿಗೆ ಜೋಡು ಎತ್ತು ಹಾಗೂ ಇತರ ಜೀವನಾವಶ್ಯಕ ವಸ್ತುಗಳನ್ನು ಕೊಡುವಾಗ

**ಮಾಡಿ ನೋಡಿರಿ.**


- ಪಠ್ಯಪುಸ್ತಕದಲ್ಲಿಯ 'ಆಜ್ಞಾಪತ್ರದಲ್ಲಿಯ ಪರ್ಯಾವರಣ ರಕ್ಷಣೆ' ಈ ಭಾಗವನ್ನು ದಪ್ಪ ಅಕ್ಷರಗಳಲ್ಲಿ ಬರೆದು ಅದರ ಕೋಷ್ಟಕವನ್ನು ತಯಾರಿಸಿರಿ. ವರ್ಗದಲ್ಲಿ ಅದನ್ನು ಸಾಮೂಹಿಕವಾಗಿ ಓದಿರಿ.

## ಪರ್ಯಾವರಣದ ರಕ್ಷಣೆ

ಯಾವುದೊಂದು ಪ್ರದೇಶದ ಮೇಲೆ ನಿಸರ್ಗವು ನಿರ್ಮಾಣ ಮಾಡಿದ ಭೂಮಿ, ಹವೆ, ಮಳೆ, ನದಿಗಳು, ಸಮುದ್ರಗಳು, ಹಳ್ಳಗಳು, ಅರಣ್ಯಗಳು, ಚಿಕ್ಕ ದೊಡ್ಡ ಪ್ರಾಣಿಗಳು, ಪಕ್ಷಿಗಳು, ಸೂರ್ಯಪ್ರಕಾಶ, ಚಂದ್ರಪ್ರಕಾಶ ಮುಂತಾದ ಎಲ್ಲ ಘಟಕಗಳಿಂದ ಮಾನವನ ಸುತ್ತಮುತ್ತ ನಿರ್ಮಾಣವಾಗುವ ಪರಿಸರಕ್ಕೆ 'ನೈಸರ್ಗಿಕ ಪರ್ಯಾವರಣ' ಎಂದು ಕರೆಯಲಾಗುತ್ತದೆ. ಈ ಪರ್ಯಾವರಣದ ಅವಶ್ಯಕ ಉಪಯೋಗ ಮಾಡಿಕೊಳ್ಳುವುದು ಮಾನವನ ಹಿತದ್ದಾಗಿರುತ್ತದೆ.

ಪರ್ಯಾವರಣದ ಈ ವಿವಿಧ ಘಟಕಗಳು ನಷ್ಟವಾಗಲಾರದಂತೆ ಶಿವರಾಯರು ದಕ್ಷತೆ ವಹಿಸಿದ್ದು ಕಂಡುಬರುತ್ತದೆ.

ತಮ್ಮ ರಾಜ್ಯದಲ್ಲಿಯ ಅರಣ್ಯಗಳು ಜನರಿಂದ ನಷ್ಟವಾಗಲಾರದಂತೆ ಶಿವರಾಯರು ಅಧಿಕ ಲಕ್ಷ್ಯ ವಹಿಸಿದರು. ಉದಾ. ನೌಕಾಪಡೆಯ ಸಲುವಾಗಿ ಚಿಕ್ಕ ದೊಡ್ಡ ನಾವೆಗಳು, ಹಡಗುಗಳು, ಹುಟ್ಟುಗೋಲುಗಳು, ದೊಣ್ಣೆ ಇತ್ಯಾದಿಗಳನ್ನು ತಯಾರಿಸಬೇಕಾಗುತ್ತದೆ. ಅದಕ್ಕಾಗಿ ಕಟ್ಟಿಗೆ ತಗಲುತ್ತದೆ. ಆದ್ದರಿಂದ ಕೇವಲ ಸಾಗವಾನಿ ಗಿಡಗಳನ್ನೇ ಕಡಿಯಬೇಕು. ಹೆಚ್ಚು ಸಾಗವಾನಿ ಕಟ್ಟಿಗೆ ಬೇಕಾಗಿದ್ದರೆ ಅದನ್ನು ಬೇರೆ ಪ್ರಾಂತಗಳಿಂದ ಕೊಂಡುಕೊಳ್ಳಬೇಕು. ಆದರೆ ಯಾವುದೇ ಪರಿಸ್ಥಿತಿಯಲ್ಲಿ ಮಾವು, ಹಲಸು ಇತ್ಯಾದಿ ಗಿಡಗಳನ್ನು ಕಡಿಯಬಾರದು. ಇಂಥ ಗಿಡಗಳು ಒಂದೆರಡು ವರ್ಷಗಳಲ್ಲಿ ನಿರ್ಮಾಣವಾಗುವುದಿಲ್ಲ. ಪ್ರಜೆಗಳು ಈ ಗಿಡಗಳನ್ನು ತಮ್ಮ ಮಕ್ಕಳಂತೆ ಜೋಪಾನ ಮಾಡಿ ಬೆಳೆಸಿದ್ದಾರೆ. ಅವುಗಳನ್ನು ಕಡಿದು ಪ್ರಜೆಗಳಿಗೆ ದುಃಖ ನೀಡಬಾರದು. ಯಾವುದೊಂದು ಗಿಡವು ತುಂಬಾ ಹಳೆಯದಾಗಿದ್ದರೆ, ಆ ಗಿಡದ ಒಡೆಯನಿಗೆ ನಗದು ಹಣವನ್ನು ಕೊಟ್ಟು ಅವನನ್ನು



**ಪರ್ಯಾವರಣದ ರಕ್ಷಣೆ**

ಸಮಾಧಾನಗೊಳಿಸಿ ಆ ಮೇಲೆ ಆ ಗಿಡವನ್ನು ಕಡಿಯಬೇಕು. ಇಂಥ ಅನೇಕ ಆಜ್ಞೆಗಳನ್ನು ಶಿವರಾಯರು ನೀಡಿದ್ದರೆಂಬುದು ಆಜ್ಞಾಪತ್ರದ ಮೇಲಿಂದ ತಿಳಿದು ಬರುತ್ತದೆ.

**ಇದನ್ನು ಯಾವಾಗಲೂ ಲಕ್ಷದಲ್ಲಿಡಿರಿ.**

ಪರ್ಯಾವರಣ ರಕ್ಷಣೆಯ ಮಹತ್ವವನ್ನು ಮನಗಾಣಿಸುವ ಸಲುವಾಗಿ ಮತ್ತು ಪರ್ಯಾವರಣದ ಅವನತಿಯನ್ನು ತಡೆಯುವ ಸಲುವಾಗಿ ೫ ಜೂನ ಈ ದಿನವನ್ನು ಪ್ರತಿ ವರ್ಷ 'ಜಾಗತಿಕ ಪರ್ಯಾವರಣ ದಿನ' ಎಂದು ಆಚರಿಸಲಾಗುತ್ತದೆ.

## ಜಲ ವ್ಯವಸ್ಥಾಪನೆ

ಶಿವರಾಯರು ಸ್ವರಾಜ್ಯದಲ್ಲಿಯ ಊರುಗಳಲ್ಲಿ ಚಿಕ್ಕ ದೊಡ್ಡ ಒಡ್ಡುಗಳನ್ನು ಕಟ್ಟಿ ಜನರಿಗೆ ಕುಡಿಯುವ ನೀರು ದೊರೆಯುವಂತೆ ವ್ಯವಸ್ಥೆ ಮಾಡಿದರು. ಅದೇ ರೀತಿ ಈ ಒಡ್ಡುಗಳಿಗೆ ಕಾಲುವೆಗಳನ್ನು ತೋಡಿ ಕೃಷಿಯ ಸಲುವಾಗಿಯೂ ನೀರನ್ನು ದೊರಕಿಸಿಕೊಟ್ಟರು.

ಅದರಿಂದಾಗಿ ಸ್ವರಾಜ್ಯದ ಉತ್ಪನ್ನ ಹೆಚ್ಚಿತು. ಸ್ವರಾಜ್ಯದಲ್ಲಿಯ ಪ್ರಜೆಗಳಿಗೆ ಎಂದೂ ಬರಗಾಲದ ತೀವ್ರತೆಯನ್ನು ಅನುಭವಿಸಬೇಕಾಗಲಿಲ್ಲ. ಶಿವರಾಯರ ಕಾಲದಲ್ಲಿ ಕೋಟೆಗಳ ಮೇಲೆ ವಸತಿ ಮಾಡಿಕೊಂಡು ಇರುವ ಪ್ರಜೆಗಳ ಸಂಖ್ಯೆ ತುಂಬಾ ದೊಡ್ಡದಾಗಿತ್ತು. ಅಲ್ಲಿ ನೀರಿನ ವ್ಯವಸ್ಥೆಯನ್ನು ಮಾಡುವ ಸಲುವಾಗಿ ಶಿವರಾಯರು ಲಕ್ಷ್ಯವಹಿಸುತ್ತಿದ್ದರು. ಕೋಟೆಯನ್ನು ಕಟ್ಟುವ ಮೊದಲು ಆ ಸ್ಥಳದಲ್ಲಿ ಸಾಕಷ್ಟು ನೀರು ಇದೆಯೇ ಎಂಬುದರ ನಿರೀಕ್ಷಣೆ ಮಾಡಲಾಗುತ್ತಿತ್ತು. ಯಾವುದೊಂದು ಸ್ಥಳದಲ್ಲಿ ನೀರು ಇರದಿದ್ದರೆ, ಅಲ್ಲಿ ಮಳೆಗಾಲಕ್ಕಿಂತ ಮೊದಲೇ ಕೆರೆಹಾಗೂ ಹೊಂಡಗಳನ್ನು ಕಟ್ಟಿ ಮಳೆಯ ನೀರನ್ನು ಅವುಗಳಲ್ಲಿ ಸಂಗ್ರಹಿಸಲಾಗುತ್ತಿತ್ತು.

ಸಂಗ್ರಹಿಸಿದ ಈ ನೀರನ್ನು ಜಾಗೃತೆಯಿಂದ ಬಳಸಲಾಗುತ್ತಿತ್ತು. ಇಂಥ ಜಲವ್ಯವಸ್ಥೆಯಿಂದಾಗಿ ಜನರಿಗೆ ಹಾಗೂ ಸ್ವರಾಜ್ಯದಲ್ಲಿಯ ಪ್ರಜೆಗಳಿಗೆ ಬರಗಾಲದಲ್ಲಿಯೂ ನೀರಿನ ಕೊರತೆ ಅನಿಸುತ್ತಿರಲಿಲ್ಲ.



**ಶಿವರಾಯರು ನೀರಾವರಿ ಯೋಜನೆಯನ್ನು ಮಾಡಿ ಕೃಷಿ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿದರು**

**ಹೇಳಿ ನೋಡೋಣ!**

- ನೀರಿನ ಬಳಕೆಯನ್ನು ಮಿತವ್ಯಯದಿಂದ ಏಕೆ ಮಾಡಬೇಕು ?
- ನಿಮ್ಮ ಊರಲ್ಲಿ/ಪರಿಸರದಲ್ಲಿ ಯಾವ ಆಣೆಕಟ್ಟು, ಕೆರೆ ಇವೆ ?
- ಜಲ ವ್ಯವಸ್ಥಾಪನೆ ಎಂದರೇನು ?
- ಜಲ ವ್ಯವಸ್ಥಾಪನೆಯನ್ನು ಕುರಿತು ಸರಕಾರದ ಯಾವ ಯೋಜನೆಗಳು ಇವೆ ?

**ನಿಮಗೆ ಗೊತ್ತಿದೆಯೇ ?**

- ರಾಜ್ಯವನ್ನು ಶಾಶ್ವತವಾಗಿ ಬರಗಾಲಮುಕ್ತ ಮಾಡುವ ಸಲುವಾಗಿ ಸರಕಾರವು 'ಜಲಯುಕ್ತ ಶಿವಾರ' ಎಂಬ ಯೋಜನೆಯನ್ನು ಆರಂಭಿಸಿದೆ.

## ಬರಗಾಲ ನಿವಾರಣೆ

ಬರಗಾಲದ ಸಮಯದಲ್ಲಿ ಶಿವರಾಯರು ರೈತರಿಗೆ ವಿವಿಧ ಸವಲತ್ತುಗಳನ್ನು ನೀಡುತ್ತಿದ್ದರು. ಪ್ರಜೆಗಳ ಭೂಕಂದಾಯವನ್ನು ಮನ್ನಾ ಮಾಡುತ್ತಿದ್ದರು. ಆದರಿಂದಾಗಿ ಬರಗಾಲದ ಭೀಕರತೆ ಕಡಿಮೆಯಾಗುತ್ತಿತ್ತು. ಯಾವುದೊಂದು ವರ್ಷ ಸ್ವರಾಜ್ಯದಲ್ಲಿ ಬರಗಾಲ ಬಿದ್ದರೆ ಶಿವರಾಯರು ಸರಕಾರಿ ಗೋದಾಮಿನಲ್ಲಿ ಸಂಗ್ರಹಿಸಿಟ್ಟ ಧಾನ್ಯವನ್ನು ಪ್ರಜೆಗಳಿಗೆ ಉಚಿತವಾಗಿ ಹಂಚುತ್ತಿದ್ದರು. ಅದರಂತೆ ಬರಗಾಲ ಬಿದ್ದ ವರ್ಷದಲ್ಲಿ ಶಿವರಾಯರು ಬೇರೆ ಬೇರೆ ಕೋಟೆಗಳ ದುರಸ್ತಿಯ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಿದ್ದರು. ಅದೇ ರೀತಿ ಆಣೆಕಟ್ಟು, ಕಾಲುವೆ ಹಾಗೂ ಒಡ್ಡುಗಳ ಕಾರ್ಯಗಳನ್ನೂ ಆರಂಭಿಸುತ್ತಿದ್ದರು. ಈ ಕಾರ್ಯಗಳಿಂದಾಗಿ ರೈತರ ಜೊತೆ ಕುಶಲಕರ್ಮಿಗಳಿಗೆ ಅಂದರೆ ಬಲೂತೆದಾರರಿಗೆ ಉದ್ಯೋಗ ದೊರೆಯುತ್ತಿತ್ತು. ಉದ್ಯೋಗ ದೊರೆತುದರಿಂದ ಸ್ವರಾಜ್ಯದಲ್ಲಿಯ ಪ್ರಜೆಗಳಿಗೆ ಬರಗಾಲದ ಭೀಕರತೆ ಎಂದೂ ಅನಿಸಲಿಲ್ಲ.

ರೈತರು ಸಮೃದ್ಧರಾದುದರಿಂದ ನಿನ್ನೆ ಯಾರ ಕಾಲಲ್ಲಿ ಚಪ್ಪಲಿ ಇರಲಿಲ್ಲವೋ ಅವರು ಚಪ್ಪಲಿಗಳನ್ನು ಕೊಂಡುಕೊಂಡರು. ಯಾರಿಗೆ ಉಡಲು ಬಟ್ಟೆ ಇರಲಿಲ್ಲವೋ ಅವರು ಬಟ್ಟೆಯನ್ನು ಕೊಂಡುಕೊಂಡರು. ಅದರಿಂದಾಗಿ ನೇಕಾರರಿಗೆ ಕೆಲಸ ದೊರಕಿತು. ಯಾರಿಗೆ

ವಾಸಿಸಲು ಮನೆ ಇರಲಿಲ್ಲವೋ ಅವರಲ್ಲಿ ಮನೆಕಟ್ಟುವ ಪರಿಸ್ಥಿತಿ ನಿರ್ಮಾಣವಾಯಿತು. ಆದರಿಂದಾಗಿ ಮನೆಕಟ್ಟುವ ಗವಂಡಿಗಳಿಗೆ, ಬಡಿಗರಿಗೆ, ಕಮ್ಮಾರರಿಗೆ ಮತ್ತು ಇಟ್ಟಿಗೆಗಳನ್ನು ತಯಾರಿಸುವ ಕುಂಭಾರರಿಗೆ ಕೆಲಸ ದೊರಕಿತು. ಈ ರೀತಿ ಸ್ವರಾಜ್ಯದಲ್ಲಿ ರೈತರ ಜೊತೆಗೆ ಕುಶಲಕರ್ಮಿಗಳು ಮತ್ತು ಬಲೂತೆದಾರರು ಸುಖಿ ಮತ್ತು ಸಮೃದ್ಧರಾದರು.



**ಹೇಳಿ ನೋಡೋಣ !**

- ನಿಮ್ಮ ಊರಲ್ಲಿಯ/ಪರಿಸರದಲ್ಲಿಯ ಮಾರುಕಟ್ಟೆಯ ಹೆಸರು ಹೇಳಿರಿ.
- ಮಾರುಕಟ್ಟೆಗೆ ಆ ಹೆಸರು ಏಕೆ ಬಂದಿತು ಎಂಬುದರ ಮಾಹಿತಿ ಹೇಳಿರಿ.

### ಸಮುದ್ರ ಮಾರ್ಗದ ವ್ಯಾಪಾರ ಮತ್ತು ಮಾರುಕಟ್ಟೆಗಳು

ಸ್ವರಾಜ್ಯದ ರಕ್ಷಣೆಯನ್ನು ಒಳ್ಳೆಯ ರೀತಿಯಿಂದ ಮಾಡಲು ಬರಬೇಕಾದರೆ ಸಮುದ್ರದ ಮೇಲೆ ನಮ್ಮ ವರ್ಚಸ್ಸು ಇರಬೇಕು ಎಂಬ ಉದ್ದೇಶದಿಂದ ಶಿವರಾಯರು ತಮ್ಮ ಸ್ವತಂತ್ರ ಹಡಗುಪಡೆಯನ್ನು ಸ್ಥಾಪಿಸಿದರು. ಇಷ್ಟಕ್ಕೇ ನಿಲ್ಲದೆ ಅವರು ಸ್ವರಾಜ್ಯದಲ್ಲಿಯ ವ್ಯಾಪಾರವು ವೃದ್ಧಿಂಗತವಾಗಬೇಕೆಂದು ಅವರು ಸರಕುಗಳನ್ನು ಸಾಗಿಸುವ ವಿಶೇಷ ಹಡಗುಗಳನ್ನು ನಿರ್ಮಿಸಿಕೊಂಡರು. ರಾಜಾಪೂರದಂತಹ ವ್ಯಾಪಾರಿ ಬಂದರುಗಳನ್ನು ವಿಕಸಿತಗೊಳಿಸಿದರು. ಅದೇ ರೀತಿ ರಾಯಗಡದ ಮೇಲೆ ವಿಶೇಷ ಮಾರುಕಟ್ಟೆಯನ್ನು ಸ್ಥಾಪಿಸಿದರು. ಪುಣೆಯ ಹತ್ತಿರದ ಖೇಡ ಶಿವಾಪೂರ ಎಂಬ ಸ್ವತ್ರಂತ್ರ ವ್ಯಾಪಾರಿ ಪೇಟೆಯನ್ನು ಆರಂಭಿಸಿದರು. ದೊಡ್ಡ ಊರುಗಳಲ್ಲಿ ಹಾಗೂ ರಸ್ತೆಗಳಲ್ಲಿಯ ಊರುಗಳಲ್ಲಿ ವ್ಯಾಪಾರಿ ಪೇಟೆಗಳನ್ನು ನಿರ್ಮಿಸಿದರು. ವೀರಮಾತೆ ಜೀಜಾಬಾಯಿಯವರ ಆಜ್ಞೆಯಂತೆ ಪುಣೆಯ ಹತ್ತಿರದ ಪಾಷಾಣ ಎಂಬ ಊರಲ್ಲಿ ಒಂದು ಹೊಸ ಪೇಟೆಯನ್ನು ನಿರ್ಮಿಸಲಾಯಿತು. ಅದನ್ನು 'ಜಿಜಾಪೂರ' ಎಂದು ಉಲ್ಲೇಖಿಸಲಾಗುತ್ತಿತ್ತು.

ಸ್ವರಾಜ್ಯದ ವ್ಯಾಪಾರದಲ್ಲಿ ವೃದ್ಧಿಯಾಗಬೇಕೆಂದು ಶಿವರಾಯರು ಹೊರ ಪ್ರದೇಶಗಳಿಂದ ಬರುವ ವಸ್ತುಗಳ ಮೇಲೆ ಹೆಚ್ಚು ಕರವನ್ನು ಹೇರಿದರು. ಪೋರ್ತುಗೀಜ ಗಡಿಯಲ್ಲಿ ಬರುವ ಉಪ್ಪಿನ ಮೇಲೆ ಹೆಚ್ಚು ಕರವನ್ನು ಹೇರಿದರು. ಅದರಿಂದಾಗಿ ಆ ಉಪ್ಪಿನ ಬೆಲೆ ಹೆಚ್ಚಿತು. ಅದಕ್ಕೆ ವಿರುದ್ಧವಾಗಿ ಸ್ವರಾಜ್ಯದಲ್ಲಿ ತಯಾರಾಗುವ ಉಪ್ಪಿನ ಮೇಲಿನ ಕರವನ್ನು ಅವರು ಕಡಿಮೆ ಮಾಡಿದರು. ಅದರಿಂದಾಗಿ ಜನರಿಗೆ ಸ್ವರಾಜ್ಯದಲ್ಲಿಯ ಉಪ್ಪು ಕಡಿಮೆ ಬೆಲೆಯಲ್ಲಿ ದೊರೆಯತೊಡಗಿತು. ಸ್ವಾಭಾವಿಕವಾಗಿ ಸ್ವರಾಜ್ಯದಲ್ಲಿಯ ಉಪ್ಪಿನ ವ್ಯಾಪಾರವು ಹೆಚ್ಚಿತು. ಅದರಿಂದಾಗಿ ಸ್ಥಾನಿಕ ವ್ಯಾಪಾರಕ್ಕೆ ಚಾಲನೆ ದೊರಕಿತು.

ಸ್ವರಾಜ್ಯದಲ್ಲಿಯ ವ್ಯಾಪಾರ-ಉದ್ಯೋಗಗಳಲ್ಲಿ ಹೆಚ್ಚಳವಾಗುವ ಸಲುವಾಗಿ ಶಿವರಾಯರು ಪ್ರಯತ್ನ ಮಾಡುತ್ತಿದ್ದರು. ವ್ಯಾಪಾರಿಗಳ ಕಡೆಯಿಂದ ತಮ್ಮ ಪ್ರಜೆಗಳಿಗೆ ಮೋಸವಾಗಬಾರದೆಂದು ಅವರು ದಕ್ಷತೆ ವಹಿಸುತ್ತಿದ್ದರು. ಕೊಂಕಣದಲ್ಲಿ ತೆಂಗು, ಅಡಿಕೆಯ ವ್ಯಾಪಾರದಲ್ಲಿ ಜನರಿಗೆ ಮೋಸವಾಗುತ್ತಿದೆಯೆಂದು ತಿಳಿದಾಗ ಶಿವರಾಯರು ಅಲ್ಲಿಯ ಸುಭೇದಾರನಿಗೆ ಎಚ್ಚರಿಕೆ ನೀಡಿದರು.

### ಸ್ತ್ರೀಯರ ಗೌರವ

ಯುದ್ಧದ ಸಮಯದಲ್ಲಿ ಶತ್ರುಪಕ್ಷದ ಸ್ತ್ರೀಯರಿಗೆ ಹಾಗೂ ಮಕ್ಕಳಿಗೆ ಯಾವುದೇ ಪ್ರಕಾರದ ನೋವಾಗಬಾರದು. ಅವರನ್ನು ಅತ್ಯಂತ ಗೌರವದಿಂದ ಕಾಣಬೇಕೆಂದು ಮಹಾರಾಜರು ಆಜ್ಞೆ ಮಾಡಿದ್ದರು. ಅನೇಕ ಸಲ ಅವರು ಸ್ವತಃ ತಮ್ಮ ವರ್ತನೆಯಿಂದ ಸ್ತ್ರೀಯರನ್ನು ಹೇಗೆ ಗೌರವದಿಂದ ಕಾಣಬೇಕು ಎಂಬುದರ ಆದರ್ಶವನ್ನು ಹಾಕಿಕೊಟ್ಟುದು ಕಂಡುಬರುತ್ತದೆ.

ಕರ್ನಾಟಕದಲ್ಲಿಯ ಬೆಳವಡಿ ಎಂಬಲ್ಲಿಯ ಕೋಟೆಯನ್ನು ಗೆದ್ದುಕೊಳ್ಳಲು ಮರಾಠಿ ಸೈನ್ಯವು ಹೋಗಿತ್ತು. ಅಲ್ಲಿಯ ಕೋಟೆಯ ರಕ್ಷಣೆಗಾಗಿ ಮಲ್ಲಮ್ಮಾ ದೇಸಾಯಿ ಎಂಬ ವೀರ ಮಹಿಳೆಯು ನಿಕರದ ಹೋರಾಟ ಮಾಡಿದಳು. ಅವಳ ಪರಾಕ್ರಮದ ಸಮಾಚಾರವು ಶಿವರಾಯರಿಗೆ ತಿಳಿಯಿತು. ಆಗ ಅವರು ಮಲ್ಲಮ್ಮನನ್ನು ತಮ್ಮ ತಂಗಿಯೆಂದು ಭಾವಿಸಿ ಅವಳ ಕೋಟೆ ಮತ್ತು ಊರುಗಳನ್ನು ಆದರಪೂರ್ವಕವಾಗಿ ಅವಳಿಗೆ ತಿರುಗಿ ಕೊಟ್ಟರು. ಅದರಂತೆ ಅವಳಿಗೆ 'ಸಾವಿತ್ರಿ' ಎಂಬ ಬಿರುದನ್ನು ಕೊಟ್ಟರು.

### ಸ್ವಚ್ಛತೆಯ ವಿಷಯವಾಗಿ ದಕ್ಷತೆ

ಮನೆ ಮತ್ತು ಸಾರ್ವಜನಿಕ ಸ್ಥಳಗಳನ್ನು ಹೆಚ್ಚಿಗೆ ಹೆಚ್ಚು ಸ್ವಚ್ಛವಾಗಿರಿಸುವ ವಿಷಯದಲ್ಲಿ ಶಿವರಾಯರ ಕಾಲದಲ್ಲಿ ಉಪಾಯ ಯೋಜನೆಗಳನ್ನು ಮಾಡಲಾಗಿದ್ದು ಕಂಡುಬರುತ್ತದೆ. ಮನೆಯ ಸುತ್ತಲೂ ಒಂದು ವಿಶಿಷ್ಟ



**ಬೆಳವಡಿ ಮಲ್ಲಮ್ಮನನ್ನು ಗೌರವಿಸುವಾಗ ಶಿವರಾಯರು**

ಪ್ರಕಾರದ ಗಿಡದ ಬೇಲಿಯನ್ನು ಹಾಕಿ ಮನೆಯೊಳಗೆ ಇಲಿ, ಚೇಳು, ಕೀಡೆ, ಇರುವೆ ಮುಂತಾದ ಪ್ರಾಣಿಗಳು ಬರಬಾರದೆಂದು ಎಚ್ಚರಿಕೆ ವಹಿಸಬೇಕು. ಅದೇ ರೀತಿ ಹೊಗೆಯನ್ನು ಎಬ್ಬಿಸಿ ಅಪಾಯಕರವಾದ ಜಂತುಗಳನ್ನು ನಷ್ಟಪಡಿಸಬೇಕು. ಈ ರೀತಿಯ ಆಜ್ಞೆಗಳನ್ನೂ ಶಿವರಾಯರು ಕೊಟ್ಟಿರುವುದನ್ನು ಕಾಣಬಹುದು.

ಕೋಟೆಯ ಮೇಲಿನ ಮಾರುಕಟ್ಟೆಗಳಲ್ಲಿ, ರಸ್ತೆಗಳಲ್ಲಿ ಕಸ ಉಳಿಯಬಾರದು ಎಂಬುದರ ಎಚ್ಚರಿಕೆ ನೀಡಲಾಗಿದ್ದುದು ಕಂಡುಬರುತ್ತದೆ. ಇಷ್ಟು ಮಾಡಿಯೂ ಅಲ್ಲಲ್ಲಿ ಕಸವು ಬಿದ್ದಿದ್ದರೆ, ಅದನ್ನು ಕೋಟೆಯ ಕೆಳಗೆ ಎಸೆಯಬಾರದು. ಆ ಕಸವನ್ನು ಅದೇ ಸ್ಥಳದಲ್ಲಿ ಸುಟ್ಟುಬಿಡಬೇಕು ಹಾಗೂ ಅದರಿಂದ ಉಂಟಾದ ಬೂದಿಯನ್ನು ಹಿತ್ತಲಲ್ಲಿ ಕಾಯಿಪಲ್ಲೆ ಬೆಳೆಸಲು ಗೊಬ್ಬರವೆಂದು ಉಪಯೋಗಿಸಬೇಕು. ಇಂಥ ವಿವಿಧ ಸೂಚನೆಗಳನ್ನು ನೀಡಿದ್ದು ಕಂಡುಬರುತ್ತದೆ.

ಶಿವರಾಯರು ಕೋಟೆಗಳ ನಿರ್ಮಿತಿ, ತೋಫುಗಳು, ಮದ್ದುಗುಂಡುಗಳು, ಹಡಗುಪಡೆ, ಪರ್ಯಾವರಣದ ರಕ್ಷಣೆ, ಜಲ ವ್ಯವಸ್ಥಾಪನೆ, ಸಮುದ್ರ ಮಾರ್ಗದ ವ್ಯಾಪಾರ ಮತ್ತು ಪೇಟೆಗಳು ಮೋಸಗಾರಿಕೆಯನ್ನು ತಡೆಯುವುದು ಹಾಗೂ ಸ್ವಚ್ಛತೆಯನ್ನು ಕುರಿತು ದಕ್ಷತೆ ಮುಂತಾದವುಗಳನ್ನು ಕುರಿತು ಮಾಡಿದ ವ್ಯವಸ್ಥಾಪನೆಯು ಇಂದಿಗೂ ಮಾರ್ಗದರ್ಶಕವಾಗಿದೆ.

## ಹಿಂದವೀ ಸ್ವರಾಜ್ಯ

ಹಿಂದವೀ ಸ್ವರಾಜ್ಯವು ಶಿವರಾಯರ ಕನಸಾಗಿತ್ತು. ಹಿಂದವೀ ಎಂದರೆ ಹಿಂದುಸ್ತಾನದಲ್ಲಿ ವಾಸಿಸುವವರು; ಅವರು ಯಾವುದೇ ಧರ್ಮದವರಿರಲಿ, ಯಾವುದೇ ಜಾತಿಯವರಿರಲಿ, ಅವರ ರಾಜ್ಯವೆಂದರೆ ಹಿಂದವೀ ಸ್ವರಾಜ್ಯ.

## ಉದಾರ ಧಾರ್ಮಿಕ ಧೋರಣೆ

ಶಿವರಾಯರ ಧಾರ್ಮಿಕ ಧೋರಣೆಯು ಉದಾರವಾಗಿತ್ತು. ಯುದ್ಧ ಯಾತ್ರೆಯ ಸಮಯದಲ್ಲಿ ಶಿವರಾಯರು ಮಶೀದಿಗಳಿಗೆ ಉಪದ್ರವ ಕೊಡಲಿಲ್ಲ. ಕುರಆನ ಶರೀಫದ ಪ್ರತಿ ಕೈಗೆ ಸಿಕ್ಕರೆ ಅವರು ಅದನ್ನು ಸನ್ಮಾನಪೂರ್ವಕವಾಗಿ ಮುಸಲ್ಮಾನರ ಕಡೆಗೆ ಒಪ್ಪಿಸುತ್ತಿದ್ದರು. ಮುಸಲ್ಮಾನರೆಂದು ಅವರು ಯಾರನ್ನೂ ದ್ವೇಷಿಸುತ್ತಿರಲಿಲ್ಲ. ಧರ್ಮಾಂತರ ಮಾಡಿದವನು ಮತ್ತೆ ತನ್ನ ಧರ್ಮಕ್ಕೆ ಮರಳಿ ಬರಬಯಸಿದರೆ ಅವರು ಅವನನ್ನು

ದೂರಮಾಡುತ್ತಿರಲಿಲ್ಲ. ಬಜಾಜಿ ನಾಯಿಕ ನಿಂಬಾಳಕರ ಇವನು ಶಿವರಾಯರ ಮೈದುನನಾಗಿದ್ದನು. ಅವನು ವಿಜಾಪೂರದ ಆದಿಲಶಾಹನ ಸೇವೆಯಲ್ಲಿ ಇದ್ದನು. ಆದಿಲಶಾಹನು ಅವನನ್ನು ತನ್ನ ಧರ್ಮದಲ್ಲಿ ಸೇರಿಸಿಕೊಂಡನು. ಬಜಾಜಿಯು ವಿಜಾಪೂರದಲ್ಲಿ ಇರತೊಡಗಿದನು. ಅವನಿಗೆ ಏನೂ ಕಡಿಮೆಯಿರಲಿಲ್ಲ. ಆದರೆ ಧರ್ಮಾಂತರ ಮಾಡಿದ್ದರಿಂದ ಅವನ ಮನಸ್ಸಿಗೆ ನೋವಾಗುತ್ತಿತ್ತು. ಅವನಿಗೆ ಕೆಡಕೆಗಿಸುತ್ತಿತ್ತು. ಆದ್ದರಿಂದ ಸ್ವಧರ್ಮಕ್ಕೆ ಮರಳಲು ನಿರ್ಧರಿಸಿದನು. ಆಗ ಶಿವರಾಯರು ಅವನನ್ನು ಸ್ವಧರ್ಮದಲ್ಲಿ ಬರಮಾಡಿಕೊಂಡರು. ನೇತೋಜಿ ಪಾಲಕರ ಇವನ ಸುದ್ದಿಯೂ ಇದೇ ರೀತಿ ಇದೆ. ನೇತೋಜಿ ಪಾಲಕರನು ಧರ್ಮಾಂತರ ಮಾಡಿದನು. ನಂತರ ಅವನಿಗೆ ಸ್ವಧರ್ಮಕ್ಕೆ ಬರಬೇಕೆನಿಸಿತು. ಆಗ ಶಿವರಾಯರು ಅವನನ್ನೂ ಸ್ವಧರ್ಮಕ್ಕೆ ಸೇರಿಸಿಕೊಂಡರು.

**ನಿಮಗೆ ಗೊತ್ತಿದೆಯೇ ?**

● ಶಿವರಾಯರು ಸಾಧು-ಸಜ್ಜನರನ್ನು ತುಂಬಾ ಗೌರವಿಸುತ್ತಿದ್ದರು. ಅವರಿಗೆ ಮಂದಿರಗಳು ಪ್ರಿಯವಾಗಿದ್ದವು. ಅವರು ಮಶೀದಿಗಳನ್ನೂ ರಕ್ಷಿಸಿದರು. ಅವರಿಗೆ ಭಗವದ್ಗೀತೆಯು ಪೂಜ್ಯವಾಗಿತ್ತು. ಅವರು ಕುರಆನ ಶರೀಫವನ್ನೂ ಗೌರವಿಸಿದರು. ಕ್ರೈಸ್ತಜನರ ಪ್ರಾರ್ಥನಾ ಮಂದಿರಗಳನ್ನೂ ಅವರು ಕಾಪಾಡುತ್ತಿದ್ದರು. ಶಿವರಾಯರು ವಿದ್ವಾಂಸರನ್ನು ಗೌರವಿಸುತ್ತಿದ್ದರು. ಪರಮಾನಂದ, ಗಾಗಾಭಟ್ಟ, ಧುಂಡೀರಾಜ, ಭೂಷಣ ಮುಂತಾದ ವಿದ್ವಾಂಸವನ್ನು ಅವರು ಸತ್ಕರಿಸಿದರು. ಅದರಂತೆ ಸಂತ ತುಕಾರಾಮ, ಸಮರ್ಥ ರಾಮದಾಸ, ಬಾಬಾ ಯಾಕೂತ, ಮೌನಿಬಾಬಾ ಇವರನ್ನೂ ಕೂಡ ಅವರು ಗೌರವಿಸಿದರು.



ನೆನೆಯಬೇಕು ಶಿವರಾಯರ ರೂಪವನ್ನು

**ನೆನೆಯಬೇಕು ಶಿವರಾಯರ ರೂಪವನ್ನು:** ಕಗ್ಗತ್ತಲಲ್ಲಿ ತಮ್ಮ ದಿಶೆಯನ್ನು ನಿರ್ಧರಿಸಿ ದಾರಿ ಶೋಧಿಸುವುದು; ಸಂಕಟಗಳು ಬಂದರೆ ಹೆದರದೆ ಅವುಗಳನ್ನು ಹೊಡೆದೋಡಿಸಿ ಮುಂದೆ ಹೋಗುವುದು; ತಮ್ಮ ಅತ್ಯಲ್ಪ ಶಕ್ತಿಯಿಂದ ಬಲಾಢ್ಯ ಶತ್ರುಗಳ ಜೊತೆ ಹೋರಾಡಿ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸುತ್ತ ಹೋಗುವುದು; ಸಹಕಾರಿಗಳಿಗೆ ಉತ್ಸಾಹನೀಡುತ್ತ ಶತ್ರುಗಳಿಂದ ತಪ್ಪಿಸಿಕೊಳ್ಳುವುದರಲ್ಲಿ ಯಶಸ್ವಿ ಯಾಗುವುದು- ಈ ಎಲ್ಲ ಗುಣಗಳು ಶಿವರಾಯರಲ್ಲಿ ಇದ್ದವು. ಆದರ್ಶ ಪುತ್ರ, ಜಾಗರೂಕ ನಾಯಕ, ಕುಶಲ ಸಂಘಟಕ, ಜನಕಲ್ಯಾಣವನ್ನು ಬಯಸುವ ಆಡಳಿತಗಾರ, ವೀರ ಯೋಧ, ದುರ್ಜನರ ಸಂಹಾರಕ, ಸಜ್ಜನರ ಕೈವಾರಿ ಹಾಗೂ ಒಂದು ಹೊಸ ಯುಗದ ನಿರ್ಮಾಪಕ, ಹೀಗೆ ಶಿವರಾಯರ ವ್ಯಕ್ತಿತ್ವದ ಎಷ್ಟೋ ತೇಜಸ್ವಿ ಆಯಾಮಗಳಿವೆ. ಇದನ್ನೆಲ್ಲ ನೋಡಿದ ಮೇಲೆ, ಮತ್ತೆ ಮತ್ತೆ ಅನಿಸುತ್ತದೆ.

'ನೆನೆಯಬೇಕು ಶಿವರಾಯರ ರೂಪವನ್ನು।
ನೆನೆಯಬೇಕು ಶಿವರಾಯರ ಪ್ರತಾಪವನ್ನು ।
ನೆನೆಯಬೇಕು ಶಿವರಾಯರ ದಕ್ಷತೆಯನ್ನು
ಈ ಭೂಮಿಯಲ್ಲಿ ।।'

## ಅಭ್ಯಾಸ

**೧. ಹೇಳಿ ನೋಡೋಣ.**

(ಅ) ಸ್ವತಂತ್ರವಾದಹಿಂದವೀಸ್ವರಾಜ್ಯದನಿರ್ಮಾಣವಾಯಿತು.

(ಆ) ಸ್ವರಾಜ್ಯದಲ್ಲಿಯ ಪ್ರಜೆಗಳಿಗೆ ಎಂದೂ ಬರಗಾಲದ ತೀವ್ರತೆಯನ್ನು ಅನುಭವಿಸಬೇಕಾಗಲಿಲ್ಲ.

(ಇ) ಶಿವರಾಯರು ಮಲ್ಲಮ್ಮಾ ದೇಸಾಯಿಯವರಿಗೆ ಕೊಟ್ಟ ಬಿರುದು.

**೨. ತೆರವಿದ್ದ ಸ್ಥಳಗಳಲ್ಲಿ ಯೋಗ್ಯ ಶಬ್ದಗಳನ್ನು ತುಂಬಿ ಕೋಷ್ಟಕವನ್ನು ಪೂರ್ಣಮಾಡಿರಿ.**

**೩. ಚರ್ಚೆ ಮಾಡಿರಿ.**

ಪರ್ಯಾವರಣದ ವಿವಿಧ ಘಟಕಗಳು ನಷ್ಟವಾಗಲಾರದಂತೆ ಶಿವರಾಯರು ಯಾವ ರೀತಿ ದಕ್ಷತೆ ವಹಿಸಿದ್ದು ಕಂಡುಬರುತ್ತದೆ. ನೀವು ಪರ್ಯಾವರಣದ ರಕ್ಷಣೆಗಾಗಿ ಏನೇನು ಮಾಡಬಲ್ಲಿರಿ?

**೪. ಓದಿ ನಿಮ್ಮ ಶಬ್ದಗಳಲ್ಲಿ ಮಾಹಿತಿ ಹೇಳಿರಿ.**

'ಜಲ ವ್ಯವಸ್ಥಾಪನ' ಈ ವಿಷಯದ ಮಾಹಿತಿ ಓದಿರಿ. ಈ ವಿಷಯದ ಬಗ್ಗೆ ನಿಮ್ಮ ಶಬ್ದಗಳಲ್ಲಿ ಮಾಹಿತಿ ಹೇಳಿರಿ.

| | ಪ್ರಧಾನರ ಹೆಸರು | ಪದವಿ | ಕಾರ್ಯಗಳು |
|---|---|---|---|
| ೧. | ಮೋರೋ ತ್ರಿಂಬಕ ಪಿಂಗಳೆ | ------ | ರಾಜ್ಯಾಡಳಿತ ನಡೆಸುವುದು. |
| ೨. | ------------ | ಅಮಾತ್ಯ | ರಾಜ್ಯದ ಜಮಾಖರ್ಚನ್ನು ನೋಡಿಕೊಳ್ಳುವುದು |
| ೩. | ಹಂಬೀರರಾವ ಮೋಹಿತೆ | ಸೇನಾಪತಿ | ------------ |
| ೪. | ಮೋರೇಶ್ವರ ಪಂಡಿತರಾವ | ------ | ಧಾರ್ಮಿಕ ಕಾರ್ಯಗಳನ್ನು ಮಾಡುವುದು. |
| ೫. | ------------ | ನ್ಯಾಯಾಧೀಶ | ------------ |
| ೬. | ಅಣ್ಣಾಜಿ ದತ್ತೋ | ------ | ------------ |
| ೭. | ------------ | ------ | ಪತ್ರ ವ್ಯವಹಾರವನ್ನು ನೋಡಿಕೊಳ್ಳುವುದು. |
| ೮. | ರಾಮಚಂದ್ರ ತ್ರಿಂಬಕ ಡಬೀರ | ಸುಮಂತ | ------------ |

**ಉಪಕ್ರಮ**

(ಅ) ನಿಮ್ಮ ವರ್ಗದ ವತಿಯಿಂದ ಶಾಲೆಯ ಪ್ರಾಂಗಣದಲ್ಲಿ ಸಂತೆಯನ್ನು ಏರ್ಪಡಿಸಿರಿ. ವಿವಿಧ ವಸ್ತು ಹಾಗೂ ಅವುಗಳ ಬೆಲೆಗಳ ಪಟ್ಟಿ ತಯಾರಿಸಿರಿ. ಅದರ ಸಲುವಾಗಿ ಪರಿಸರದಲ್ಲಿಯ ಮಾರುಕಟ್ಟೆಗೆ ಭೇಟಿ ನೀಡಿರಿ.

(ಆ) ನಿಮ್ಮ ಶಾಲೆಯ ಪರಿಸರದಲ್ಲಿ ನೀವು ಯಾವ ಗಿಡಗಳನ್ನು ನೆಟ್ಟಿದ್ದೀರಿ. ಅವುಗಳನ್ನು ನೀವು ಹೇಗೆ ಕಾಪಾಡುತ್ತೀರಿ ಎಂಬುದನ್ನು ಹೇಳಿರಿ.

# 'ಆಜ್ಞಾಪತ್ರದಲ್ಲಿ'ಯ ಪರಿಸರ ರಕ್ಷಣೆ

ರಾಮಚಂದ್ರಪಂತ ಅಮಾತ್ಯರು 'ಆಜ್ಞಾಪತ್ರ'ವನ್ನು ಬರೆದರು. ಅದರಲ್ಲಿ ಶಿವಾಜಿ ಮಹಾರಾಜರ ನೀತಿಯ ಪ್ರತಿಬಿಂಬ ಕಂಡುಬರುತ್ತದೆ. ಪರಿಸರವನ್ನು ಕುರಿತು ಶಿವಾಜಿ ಮಹಾರಾಜರ ದೃಷ್ಟಿಕೋನವು ಆಜ್ಞಾಪತ್ರದಿಂದ ತಿಳಿದು ಬರುತ್ತದೆ. ಆ ಆಜ್ಞಾಪತ್ರದ ಸಾರವು ಕೆಳಗಿನಂತಿದೆ.

''ನೌಕಾಪಡೆಗೆ ಉತ್ತಮವಾದ ಕಟ್ಟಿಗೆಯ ಅವಶ್ಯಕತೆ ಇರುತ್ತದೆ. ನಮ್ಮ ರಾಜ್ಯದಲ್ಲಿ ಸಾಗವಾನ ಮುಂತಾದ ಅನೇಕ ವೃಕ್ಷಗಳಿವೆ. ಅವುಗಳನ್ನು ಹುಜೂರರ ಅನುಮತಿ ಪಡೆದು ಕಡಿಯಬೇಕು. ಇವುಗಳನ್ನು ಬಿಟ್ಟು ಇನ್ನೂ ಬೇಕಾದರೆ ಬೇರೆ ಪ್ರಾಂತಗಳಿಂದ ಕೊಂಡುಕೊಳ್ಳಬೇಕು. ಸ್ವರಾಜ್ಯದಲ್ಲಿಯ ಮಾವಿನ ಮತ್ತು ಹಲಸಿನ ಕಟ್ಟಿಗೆಗಳು ಉಪಯುಕ್ತವಾಗಿದ್ದರೂ ಅವುಗಳಿಗೆ ಕೈಹಚ್ಚಬಾರದು. ಏಕೆಂದರೆ ಇವು ಒಂದೆರಡು ವರ್ಷಗಳಲ್ಲಿ ಬೆಳೆಯುವ ವೃಕ್ಷಗಳಲ್ಲ. ಜನರು ಈ ಗಿಡಗಳನ್ನು ನೆಟ್ಟು ಮಕ್ಕಳಿಗಾಗಿ ಬಹುದಿನ ಕಾಯ್ದುಕೊಂಡು ಬಂದಿದ್ದಾರೆ. ಈ ಗಿಡಗಳನ್ನು ಕಡಿದರೆ ಅವರ ದುಃಖಕ್ಕೆ ಮೇರೆ ಉಳಿಯುವುದಿಲ್ಲ. ಒಬ್ಬರಿಗೆ ದುಃಖ ಕೊಟ್ಟು ಕಾರ್ಯ ಸಾಧಿಸುವವರ ಹಿತವು ಅಲ್ಪಕಾಲದ್ದಾಗಿರುತ್ತದೆ. ಅದು ತಕ್ಷಣ ನಷ್ಟವಾಗುತ್ತದೆ. ಅದರಿಂದ ಆ ಗಿಡಗಳ ಒಡೆಯನಿಗೆ ಪ್ರಜಾಪೀಡೆಯ ದೋಷ ತಗಲುತ್ತದೆ. ಈ ವೃಕ್ಷಗಳ ಕೊರತೆಯಿಂದ ಹಾನಿಯಾಗುತ್ತದೆ. ಆದ್ದರಿಂದ ಇಂಥ ಕೃತ್ಯಗಳಾಗಲಾರದಂತೆ ನೋಡಿಕೊಳ್ಳಬೇಕು. ಯಾವುದಾದರೊಂದು ಗಿಡವು ಬಹಳಷ್ಟು ಹಳೆಯದಾಗಿದ್ದರೆ ಅಥವಾ ನಿರುಪಯುಕ್ತವಾಗಿದ್ದರೆ ಅದರ ಒಡೆಯನಿಗೆ ಅದನ್ನು ತಿಳಿಸಿ ಹೇಳಿ ಅವರ ಒಪ್ಪಿಗೆಯಿಂದ ಕಡಿದುಕೊಂಡು ಹೋಗಬೇಕು....''




ರಾಜಗಡ ಕೋಟೆ




ಅಭೇದ್ಯವಾದ ಜಿಂಜೀ ಕೋಟೆ

ಜಿಂಜೀ ಕೋಟೆಯು ಸದ್ಯದ ತಮಿಳುನಾಡು ರಾಜ್ಯದಲ್ಲಿದೆ. ಛತ್ರಪತಿ ಶಿವಾಜಿ ಮಹಾರಾಜರು ದಕ್ಷಿಣ ದಿಗ್ವಿಜಯದ ಅಭಿಯಾನದಲ್ಲಿರುವಾಗ ಅದನ್ನು ಗೆದ್ದುಕೊಂಡರು. ಈ ಕೋಟೆಯು ಮೂಲತಃ ದುರ್ಗಮವಾಗಿತ್ತು. ಆದರೂ ಕೂಡ ಮಹಾರಾಜರು ಅದರ ಮೊದಲಿನ ರಕ್ಷಣಾಗೋಡೆಯನ್ನು ಒಡೆದು ಹೊಸ ರಕ್ಷಣಾಗೋಡೆಯನ್ನು ಮತ್ತು ಬುರುಜನ್ನು ಕಟ್ಟಿಸಿ ಅದನ್ನು ಬಹಳ ಆಕರ್ಷಕ ಮಾಡಿದರು. ಕೋಟೆಯನ್ನು ಹೇಗೆ ದುರ್ಗಮವಾಗಿ ನಿರ್ಮಿಸಬೇಕು ಎಂಬುದರ ಶಿಕ್ಷಣವನ್ನು ಶಹಾಜಿರಾಜರು ಅವರಿಗೆ ಬಾಲ್ಯದಲ್ಲೇ ಕೊಟ್ಟಿದ್ದರು. ಶಿವಾಜಿ ಮಹಾರಾಜರು ಆ ಜ್ಞಾನದ ಉಪಯೋಗವನ್ನು ಈ ಸಂದರ್ಭದಲ್ಲಿ ಮಾಡಿದರೆಂದು ಕಾಣುತ್ತದೆ. ಮುಂದೆ ರಾಜಾರಾಮ ಮಹಾರಾಜರು ಈ ಕೋಟೆಯ ಮೇಲೆ ತಮ್ಮ ರಾಜಧಾನಿಯನ್ನು ಸ್ಥಾಪಿಸಿದರು. ಅವರು ಆ ಕೋಟೆಯೊಳಗಿರುವಾಗ ಮುಘಲರು ಅದರ ಮೇಲೆ ಮುತ್ತಿಗೆ ಹಾಕಿದರು. ಆದರೆ ರಾಜಾರಾಮ ಮಹಾರಾಜರು ಆ ಮುತ್ತಿಗೆಯಲ್ಲಿ ಸಿಲುಕಿದರೂ ಸುಮಾರು ಏಳು ವರ್ಷಗಳ ವರೆಗೆ ಕೋಟೆಗಾಗಿ ಹೋರಾಡಿದರು. ಶಿವಾಜಿ ಮಹಾರಾಜರು ದೂರದೃಷ್ಟಿಯನಿಟ್ಟುಕೊಂಡು ಈ ಕೋಟೆಯನ್ನು ಅಧಿಕ ಸುಸಜ್ಜಿತಗೊಳಿಸಿದ್ದರಿಂದಾಗಿಯೇ ರಾಜಾರಾಮ ಮಹಾರಾಜರು ಅಷ್ಟು ಕಾಲ ಆ ಕೋಟೆಯೊಳಗೆ ಸುರಕ್ಷಿತವಾಗಿ ಉಳಿಯಲು ಸಾಧ್ಯವಾಯಿತು.





ಭವಾನಿದೇವಿ - ಪ್ರತಾಪಗಡ

# छत्रपती शिवाजी महाराज स्मृतिग्रंथ




- सामान्य रयतेच्या कल्याणासाठी स्थापन केलेल्या स्वराज्य स्थापनेची कथा उलगडणारे पुस्तक.
- छत्रपती शिवाजी महाराजांच्या उत्तुंग कार्य व त्यामागची तेवढीच उत्तुंग व उदात्त भूमिका वाचकांसमोर आणणारे प्रेरणादायी वाचन साहित्य.
- इतिहास वाचनासाठी पूरक असे संदर्भ पुस्तक.







- इतिहास वाचनासाठी पूरक अशी संदर्भ पुस्तके.
- निवडक लेखक, इतिहासकारांचे प्रेरणादायी लेख.

**पुस्तक मागणीसाठी www.ebalbharati.in, www.balbharati.in संकेतस्थळावर भेट द्या.**

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५




ಶತ್ರುಗಳ ಸ್ಥಳ ಬಿಡಿಸಿ ನಮ್ಮ ಸ್ಥಳ ಕೊಡಿಸಿರಿ. ಅಂದರೆ ಶಿವಾಜಿ ಮಹಾರಾಜರು ಪರಗಣೆ ಮುರಗೂಡದ (ಜಿ.ಕೊಲ್ಹಾಪುರ) ದೇಸಾಯಿ ರುದ್ರಪ್ಪನಾಯಿಕ ಇವರು ದಿನಾಂಕ ೧೧ ಡಿಸೆಂಬರ ೧೬೭೬ ರಂದು ಕಳುಹಿಸಿದ ಪತ್ರ. ಈ ಪತ್ರವು ಮೋಡಿ ಲಿಪಿಯಲ್ಲಿದೆ.

**ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.**

**₹ 36.00**

परिसर अभ्यास भाग - २ इ. ४ थी (कन्नड माध्यम)